www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 UV 9448225696 +91 8035841833 ₹5

# ಉದಯ ವಾಹಿನಿ


ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

5th ANNIVERSARY ಉದಯ ಸಂಭ್ರಮ

## ವಿನ್ಯಾಸಗಾರರು ಬೇಕಾಗಿದ್ದಾರೆ

ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

9448225696

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com

## ಕನ್ನಡಿಗರ ಗೌರವ-ಸ್ವಾಭಿಮಾನಕ್ಕಾಗಿ ಮಾರ್ಚ್ 22ರಂದು ಕರ್ನಾಟಕ ಬಂದ್

• ಉದಯವಾಹಿನಿ, ಬೆಂಗಳೂರು

ಮಾರ್ಚ್ 22ರಂದು ಕರ್ನಾಟಕ ಬಂದ್ ಮಾಡಿಯೇ ಮಾಡುತ್ತೇವೆ ಎಂದು ವಾಟಾಳ್ ನಾಗರಾಜ್ ಶಪಥ ಮಾಡಿದ್ದಾರೆ. ಕೆಎಸ್‌ಆರ್‌ಟಿಸಿ ಬಸ್ ಚಾಲಕರು, ನಿರ್ವಾಹಕರನ್ನು ಭೇಟಿ ಮಾಡಿದರು. ಮಾರ್ಚ್ 22ರ ಬಂದ್‌ಗೆ ಬೆಂಬಲ ಕೊಡುವಂತೆ ಮನವಿ ಮಾಡಿದರು. ನಿಮ್ಮ ಜೊತೆ ನಾವಿದ್ದೇವೆ ಹೋರಾಟದಲ್ಲಿ ಭಾಗಿಯಾಗಿ ಎಂದು ಆತ್ಮಸ್ಥೈರ್ಯ ತುಂಬಿದರು. ಕರ್ನಾಟಕ ಬಂದ್ ಯಶಸ್ವಿ ಮಾಡೇ ಮಾಡುತ್ತೇವೆ. ಈಗಾಗಲೇ ಬಹುತೇಕ ಸಂಘಟನೆಗಳು ಬೆಂಬಲ ಕೊಟ್ಟಿವೆ. ಮರಾಠಿಗರ ಪುಂಡಾಟಿಕೆ, ಮರಾಠಿಗರ ಅಟ್ಟಹಾಸ, ಎಂ.ಇ.ಎಸ್ ನಿಷೇಧ ಮಾಡಬೇಕು. ಕಳಸಾ-ಬಂಡೂರಿ ಮಹದಾಯಿ ಯೋಜನೆ ಕೂಡಲೇ ಆರಂಭ ಮಾಡಬೇಕು. ಹಿಂದಿ ಹೇರಿಕೆ ಬೇಡವೇ ಬೇಡ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಯಾಗಬೇಕು. ಕನ್ನಡ ಕಂಡಕ್ಟರ್ ಮೇಲೆ ಮರಾಠಿಗರ ದಾಳಿಯ ಬಗ್ಗೆ ಸಮಗ್ರವಾಗಿ ತನಿಖೆ ಆಗಬೇಕು, ಮೇಕೆದಾಟು ಬಗ್ಗೆ ತಮಿಳುನಾಡು ವಿರೋಧ ಸೇರಿದಂತೆ ಹಲವು ವಿಚಾರಗಳನ್ನು ಮುಂದಿಟ್ಟುಕೊಂಡು ಮಾರ್ಚ್ 22 ರಂದು ಬೆಳಿಗ್ಗೆ 6-00 ಗಂಟೆಯಿಂದ ಸಂಜೆ 6-00 ಗಂಟೆವರೆಗೆ ಬಂದ್ ಮಾಡಲಾಗುವುದು'' ಎಂದರು.

## ರಾಜ್ಯಪಾಲರಿಂದ ಡಿಕೆಶಿಗೆ ಶಾಕ್ ಕೊಡಿಸಲು ಬಿಜೆಪಿ ಪ್ಲ್ಯಾನ್..!

• ಉದಯವಾಹಿನಿ, ಬೆಂಗಳೂರು

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಹೆಸರು ಬದಲಾವಣೆ ಮಾಡಲು ಹೊರಟಿದ್ದ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದೆ. ರಾಮನಗರ ಜಿಲ್ಲೆಯನ್ನ ಬೆಂಗಳೂರು ದಕ್ಷಿಣ ಸೇರ್ಪಡೆಗೊಳಿಸಲು ರಾಜ್ಯ ಸರ್ಕಾರದ ಪ್ರಸ್ತಾಪವನ್ನ ಕೇಂದ್ರ ಸರ್ಕಾರ ತಿರಸ್ಕಾರ ಮಾಡಿದೆ. ಈ ಮೂಲಕ ಡಿಸಿಎಂ ಡಿಕೆ ಶಿವಕುಮಾರ್ ಕನಸಿಗೆ ಕೇಂದ್ರ ಸರ್ಕಾರ ತಣ್ಣೀರೆರಚಿಸಿದೆ. ಇದರ ಬೆನ್ನಲ್ಲೇ ಡಿಕೆ ಶಿವಕುಮಾರ್ ಅವರ ಕನಸಿನ ಗ್ರೇಟರ್ ಬೆಂಗಳೂರು ವಿಧೇಯಕ ವಿರುದ್ಧ ಬಿಜೆಪಿ ಶಾಸಕರ ನಿಯೋಗ ರಾಜಭವನದ ಕದ ತಟ್ಟಿ, ರಾಜ್ಯಪಾಲರಿಗೆ ದೂರು ಸಲ್ಲಿಕೆ ಮಾಡಿದೆ. ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕದ ವಿರುದ್ಧ ರಾಜ್ಯ ಬಿಜೆಪಿ ನಿಯೋಗ, ರಾಜಪಾಲರಿಗೆ ದೂರು ನೀಡಿದ್ದು, ''ಗ್ರೇಟರ್ ಬೆಂಗಳೂರು ಮಸೂದೆಗೆ ಅಂಕಿತ ಹಾಕಬೇಡಿ'' ಎಂದು ಮನವಿ ಮಾಡಿದೆ. ವಿಪಕ್ಷ ನಾಯಕರಾದ ಆರ್. ಅಶೋಕ್ ಮತ್ತು ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ರಾಜ್ಯಪಾಲರನ್ನು ಭೇಟಿ ದೂರು ಸಲ್ಲಿಕೆ ಮಾಡಲಾಗಿದೆ. ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಕೀಳು ಬುದ್ಧಿಯ ಕಾಂಗ್ರೆಸ್ ಪಾಠ ಕಲಿಸ್ತೀವಿ ಎಂದು ಎಚ್ಚರಿಕೆ ಕೊಟ್ಟಿದ್ದಾರೆ. ಪ್ರಸ್ತಾವಿತ ಮಸೂದೆಯು ''ಅಸಂವಿಧಾನಿಕ''ವಾಗಿದ್ದು, ನಗರ ಆಡಳಿತದ ಪ್ರಜಾಪ್ರಭುತ್ವ ರಚನೆಯನ್ನು ರಕ್ಷಿಸಲು, ಬೆಂಗಳೂರಿನ ಸಾಂಸ್ಕೃತಿಕ ಗುರುತನ್ನು ಕಾಪಾಡಿಕೊಳ್ಳಲು ಮತ್ತು ದಕ್ಷ ನಗರ ಆಡಳಿತವನ್ನು ಖಚಿತಪಡಿಸಿಕೊಳ್ಳಲು ರಾಜ್ಯಪಾಲರು, ಗ್ರೇಟರ್ ಬೆಂಗಳೂರು ಮಸೂದೆ ತಿರಸ್ಕರಿಸಬೇಕು ಎಂದು ರಾಜ್ಯಪಾಲರಿಗೆ ಬಿಜೆಪಿ ಮನವಿ ಮಾಡಿದೆ.

# ಧರೆಗಿಳಿದ ಗಗನ ದೇವತೆ



## ಹೆಣ್ಮಕ್ಳೇ ಸ್ಟ್ರಾಂಗು ಗುರು

## ಜೀವನದ ಮರೆಯಲಾಗದ ಸಾಧನೆ

• ಉದಯವಾಹಿನಿ, ಬೆಂಗಳೂರು

ನಾಸಾ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಒಂಬತ್ತು ತಿಂಗಳ ನಂತರ ಭಾರತೀಯ ಕಾಲಮಾನ ಬುಧವಾರ ಬೆಳಗ್ಗೆ 3:27ಕ್ಕೆ ಬಾಹ್ಯಾಕಾಶದಿಂದ ಸುರಕ್ಷಿತವಾಗಿ ಭೂಮಿಗಿಳಿದರು. ಇಬ್ಬರೂ ಕಳೆದ ವರ್ಷ ಜೂನ್‌ನಲ್ಲಿ ಬಾಹ್ಯಾಕಾಶಕ್ಕೆ ಪಯಣಿಸಿದ್ದರು. ತಾಂತ್ರಿಕ ತೊಂದರೆಗಳು ಮತ್ತು ವೇಳಾಪಟ್ಟಿಯಲ್ಲಿನ ಬದಲಾವಣೆಗಳಿಂದಾಗಿ ಅವರ ಮರಳುವಿಕೆ ವಿಳಂಬವಾಗಿತ್ತು. ಕೆಲವೇ ದಿನಗಳ ಈ ಕಾರ್ಯಾಚರಣೆ ಒಂಬತ್ತು ತಿಂಗಳಿಗೆ ವಿಸ್ತರಣೆಗೊಂಡಿತ್ತು. ಹಾಗಾಗಿ, 59 ವರ್ಷದ ಸುನೀತಾ ವಿಲಿಯಮ್ಸ್ ಮತ್ತು 62 ವರ್ಷದ ಬುಚ್ ವಿಲ್ಮೋರ್ ಭೂಮಿಗೆ ಮರಳುವುದನ್ನು ಕಾಯಲಾಗುತ್ತಿತ್ತು. ಈ ಕಾಯುವಿಕೆ ಇದೀಗ ಇಬ್ಬರೂ ಸುರಕ್ಷಿತವಾಗಿ ಮರಳುವುದರೊಂದಿಗೆ ಕೊನೆಗೊಂಡಿದೆ.

> 1 ಅತಿ ಹೆಚ್ಚು ಬಾರಿ ಬಾಹ್ಯಾಕಾಶ ನಿಲ್ದಾಣಕ್ಕೆ ಪ್ರಯಾಣಿಸಿದ ಏಕೈಕ ಮಹಿಳೆ ಎಂಬ ಹೆಗ್ಗಳಿಕೆ ಸುನೀತಾ ವಿಲಿಯಮ್ಸ್. ಅತಿ ಹೆಚ್ಚು ಬಾರಿ ಸ್ಪೇಸ್ ವಾಕ್ ಮಾಡಿದ ಹೆಗ್ಗಳಿಕೆಯೂ ಇವರಿಗಿದೆ.
>
> 2 ನಾಸಾದಿಂದ ಹಲವಾರು ಗೌರವಗಳಿಗೆ ಅವರು ಭಾಜನರಾಗಿದ್ದಾರೆ.

ಜೂನ್ 2024ರಿಂದ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಸಿಲುಕಿದ್ದ ಸುನೀತಾ ವಿಲಿಯಮ್ಸ್, ಬುಚ್ ವಿಲ್ಮೋರ್ ಅವರೊಂದಿಗೆ ನಿಕ್ ಹೇಗ್ ಮತ್ತು ಅಲೆಕ್ಸಾಂಡರ್ ಗೋರ್ಬುನೋವ್ ಕೂಡಾ ಮರಳಿದ್ದಾರೆ. ಐಎಸ್‌ಎಸ್ ಕ್ರೂ-9 ಸದಸ್ಯರನ್ನು ಹೊತ್ತ ಸ್ಪೇಸ್‌ಎಕ್ಸ್ ಡ್ರ್ಯಾಗನ್ ನೌಕೆ ಫ್ಲೋರಿಡಾದ ಸಮುದ್ರದಲ್ಲಿ ಸುರಕ್ಷಿತವಾಗಿ ಇಳಿಯಿತು. ಕ್ರೂ-9 ಮಾರ್ಚ್ 18, 2025ರಂದು ಬೆಳಗ್ಗೆ 10:35ಕ್ಕೆ (ಭಾರತೀಯ ಕಾಲಮಾನ) ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಹ್ಯಾಚ್ ಅನ್ನು ಮುಚ್ಚಿ ಅನ್‌ಡಾಕ್ ಮಾಡುವ ಮೂಲಕ ಭೂಮಿಯ ಕಡೆಗೆ ಪ್ರಯಾಣ ಪ್ರಾರಂಭಿಸಿತು. ಅದಾದ ನಂತರ ಸ್ಪೇಸ್ ಎಕ್ಸ್‌ನ ಡ್ರ್ಯಾಗನ್ ಬಾಹ್ಯಾಕಾಶ ನೌಕೆ ಭೂಮಿಗೆ ಮರಳಲು ವಿಶೇಷ ವಿಧಾನ ಅಳವಡಿಸಿಕೊಂಡಿತು. ಇದರಿಂದಾಗಿ ನೌಕೆ ಭೂಮಿಯ ವಾತಾವರಣವನ್ನು ಸುರಕ್ಷಿತವಾಗಿ ಪ್ರವೇಶಿಸಿ, ಗೊತ್ತುಪಡಿಸಿದ ಸ್ಥಳದಲ್ಲಿಳಿಯಲು ಸಾಧ್ಯವಾಯಿತು.

ಸುನೀತಾ ವಿಲಿಯಮ್ಸ್ ಮತ್ತು ಅವರ ಸಹ ಗಗನಯಾತ್ರಿಗಳ ಬಾಹ್ಯಾಕಾಶ ನೌಕೆಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು. ಈಗ ಅವರು ಹ್ಯೂಸ್ಟನ್‌ನಲ್ಲಿರುವ ನಾಸಾದ ಮಾನವ ಬಾಹ್ಯಾಕಾಶ ಹಾರಾಟ ಕಾರ್ಯಾಚರಣೆಗಳ ಪ್ರಧಾನ ಕಚೇರಿಯಾದ ಜಾನ್ಸನ್ ಬಾಹ್ಯಾಕಾಶ ಕೇಂದ್ರಕ್ಕೆ ತೆರಳಿದ್ದಾರೆ. ನಾಸಾ ಮತ್ತು ಸ್ಪೇಸ್‌ಎಕ್ಸ್ ಅಧಿಕಾರಿಗಳು ಜಂಟಿಯಾಗಿ ವಿಶೇಷ ಮಾಧ್ಯಮಗೋಷ್ಠಿ ಆಯೋಜಿಸಿದ್ದಾರೆ. ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಕಳೆದ ವರ್ಷ ಜೂನ್‌ನಿಂದ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಸಿಲುಕಿದ್ದರು. ಕೇವಲ ಒಂದು ವಾರದ ಮಟ್ಟಿಗೆ ಅಲ್ಲಿಗೆ ಪ್ರಯಾಣಿಸಿದ್ದರು. ಆದರೆ ಅವರಿದ್ದ ಬೋಯಿಂಗ್ ಸ್ಟಾರ್‌ಲೈನರ್ ನೌಕೆಯಲ್ಲಿ ದೋಷ ಕಂಡುಬಂದಿತ್ತು. ಇದರಿಂದಾಗಿ ಸುನೀತಾ ಮತ್ತವರ ಸಹ ಗಗನಯಾತ್ರಿಗಳು ನೌಕೆಯ ಮೂಲಕ ಹಿಂತಿರುಗುವುದು ಅಪಾಯ ಎಂದು ನಾಸಾ ತಿಳಿಸಿತ್ತು. ಸುನೀತಾ ತಮ್ಮ ವೃತ್ತಿಜೀವನದಲ್ಲಿ 9 ವಿಭಿನ್ನ ಬಾಹ್ಯಾಕಾಶ ನಡಿಗೆ ಒಳಗೊಂಡಂತೆ 62 ಗಂಟೆಗಳ ಕಾಲ ಬಾಹ್ಯಾಕಾಶ ನಡಿಗೆ ಮಾಡಿದ್ದಾರೆ.

ಐಎಸ್‌ಎಸ್ ಮೇಲೆ ಹಿಡಿತ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಕೆಲವು ಬಾರಿ ಹೋಗಿ ಅಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿರುವ ಸುನೀತಾ ವಿಲಿಯಮ್ಸ್ ಅವರಿಗೆ ಐಎಸ್‌ಎಸ್ ನ ಇಂಚಿಂಚೂ ಪರಿಚಯವಿದೆ. ಹೀಗೆ, ಅಲ್ಲಿ ಯಾವುದೇ ಕ್ಷಣದಲ್ಲಿ ಹೋಗಿ ಏನು ಹೇಳಿದರೂ ಆ ಪ್ರಯೋಗ ಮಾಡಿಬರುವಂಥ ಛಾತಿ ಇರುವ ಮಹಿಳೆಯರಲ್ಲಿ ಸುನೀತಾ ವಿಲಿಯಮ್ಸ್ ಅಗ್ರಗಣ್ಯರು

### ಪ್ರಧಾನಿ ಮೋದಿ ಪತ್ರ, ಗಣ್ಯರ ಶುಭಹಾರೈಕೆ

ಭೂಮಿಯಿಂದ ಸಾವಿರಾರು ಮೈಲಿಗಳು ದೂರವಿರುದ್ಧ 1.4 ಬಿಲಿಯನ್ ಭಾರತೀಯರ ಹೃದಯಕ್ಕೆ ನೀವು ಹತ್ತಿರವಾಗಿದ್ದೀರಿ. ನಾವೆಲ್ಲವು ಯಾವಾಗಲೂ ನಿಮ್ಮ ಸಾಧನೆಗಳ ಬಗ್ಗೆ ಹೆಮ್ಮೆ ಪಡುತ್ತೇವೆ. ಬಾಹ್ಯಾಕಾಶದಲ್ಲಿ ನಡೆದ ಇತ್ತೀಚಿನ ಬೆಳವಣಿಗೆಯಲ್ಲಿ ತಾವು ತೋರಿದ ಧೈರ್ಯ, ತಾಳ್ಮೆ ಮತ್ತು ನಿಮ್ಮ ಪರಿಶ್ರಮ ಸ್ಫೂರ್ತಿದಾಯಕ ಎಂದು ಪ್ರಧಾನಿ ಮೋದಿಯವರು ಸುನೀತಾ ವಿಲಿಯಮ್ಸ್ ಅವರ ಭೂಮಿಗೆ ಮರಳಿದ ಖುಷಿ ಹಂಚಿಕೊಂಡು ಪತ್ರ ಬರೆದಿದ್ದಾರೆ. ಬಾಹ್ಯಾಕಾಶ ನಿಲ್ದಾಣದಲ್ಲಿ ಪರೀಕ್ಷೆಗೆಂದು ತೆರಳಿ ಕಳೆದ 09 ತಿಂಗಳುಗಳಿಂದ ಸಿಲುಕಿ ಬುಧವಾರ ಮರಳಿ ಯಶಸ್ವಿಯಾಗಿ ಮತ್ತು ಸುರಕ್ಷಿತವಾಗಿ ಭೂಮಿಗೆ ಲ್ಯಾಂಡ್ ಆದ ಭಾರತೀಯ ಮೂಲದ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಅವರಿಗೆ ಪ್ರಧಾನಿ ಮೋದಿಯವರು ಸೇರಿ ಗಣ್ಯಾತಿಗಣ್ಯರು ಶುಭ ಕೋರಿದ್ದಾರೆ.

**9 ತಿಂಗಳ ಬಳಿಕ ಸುರಕ್ಷಿತ ಮರಳಿದ ಸುನೀತಾ**

### ಪಟಾಕಿ ಸಿಡಿಸಿ ಸಂಭ್ರಮ

ಒಂಬತ್ತು ತಿಂಗಳು ಬಾಹ್ಯಾಕಾಶ ನಿಲ್ದಾಣದಲ್ಲಿದ್ದ ಸುನೀತಾ ವಿಲಿಯಮ್ಸ್ ಭೂಮಿಗೆ ಮರಳಿದ್ದು, ಇಡೀ ಜಗತ್ತೇ ಸಂಭ್ರಮಿಸುತ್ತಿದೆ. ಗಗನಯಾತ್ರಿಗಳ ಸಾಧನೆಗೆ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದೆ. ಭಾರತದಲ್ಲೂ ಕೂಡ ಸಂಭ್ರಮ ಮುಗಿಲು ಮುಟ್ಟಿದೆ. ಅದರಲ್ಲೂ ಸುನೀತಾರ ಪೂರ್ವಿಕರು ನೆಲೆಸಿದ್ದ ಗುಜರಾತ್‌ನ ಮೆಹ್ಸಾನಾ ಜಿಲ್ಲೆಯ ಜುಲಾಸನ್‌ನಲ್ಲಿ ಸಂತಸ ಇಮ್ಮಡಿಯಾಗಿದ್ದು, ರಾತ್ರಿಯೆಲ್ಲಾ ಆಕೆಯ ಆಗಮನಕ್ಕೆ ಕಾದು ಕುಳಿತ ಗ್ರಾಮಸ್ಥರು ಇದೀಗ ಸಂಭ್ರಮಾಚರಣೆಯಲ್ಲಿ ತೊಡಗಿದ್ದಾರೆ. ನಾಸಾ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಸೇರಿದಂತೆ ನಾಲ್ವರನ್ನು ಹೊತ್ತ ಸ್ಪೇಸ್ ಎಕ್ಸ್ ಕ್ಯಾಪ್ಸೂಲ್ ಅಮೆರಿಕದ ಫ್ಲೋರಿಡಾ ಕಡಲಿನಲ್ಲಿ ಇಳಿಯುತ್ತಿದ್ದಂತೆ ಗ್ರಾಮದ ನಿವಾಸಿಗಳು ಪಟಾಕಿ ಸಿಡಿಸಿ, ಡ್ಯಾನ್ಸ್ ಮಾಡಿ ಖುಷಿಪಟ್ಟರು.

## ದೃಢಮನಸ್ಸಿನ ಗಟ್ಟಿಗಿತ್ತಿ

### ಸುನಿತಾಗೆ ಭಾರತ ರತ್ನ ಕೊಡಿ

ಬಾಹ್ಯಾಕಾಶದಲ್ಲಿ 9 ತಿಂಗಳಕಾಲ ಸಿಲುಕಿ ಬುಧವಾರ ಬೆಳಿಗ್ಗೆಯಷ್ಟೇ ಭೂಮಿಗೆ ಬಂದಿಳಿದ ಸುನಿತಾ ವಿಲಿಯಮ್ಸ್ ಬಗ್ಗೆ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಮಾತನಾಡಿದ್ದಾರೆ. ಸುನಿತಾ ಅವರ ಸಾಧನೆಯನ್ನು ಶ್ಲಾಘಿಸಿದ್ದು, ಅವರಿಗೆ ಭಾರತ ರತ್ನ ನೀಡಿ ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ. ಹಲವಾರು ತಿಂಗಳುಗಳ ಕಾಲ ಬಾಹ್ಯಾಕಾಶದಲ್ಲಿ ಸಿಲುಕಿಕೊಂಡಿದ್ದ ವಿಲಿಯಮ್ಸ್ ಮತ್ತು ಬುಚ್ ಗಗನಯಾನಿಗಳನ್ನು ರಕ್ಷಿಸಿದ್ದಕ್ಕಾಗಿ ಪಶ್ಚಿಮ ಬಂಗಾಳ ವಿಧಾನಸಭೆ ಪರವಾಗಿ ಧನ್ಯವಾದ ತಿಳಿಸುತ್ತೇನೆ ಎಂದು ಮಾತನಾಡಿದರು. ಸಂಸತ್ ಅಧಿವೇಶನದಲ್ಲಿಯೂ ಭಾರತ ಮೂಲದ ಅಮೆರಿಕ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಸಾಧನೆ ಕೊಂಡಾಡಿದ್ದಾರೆ. ಭಾರತೀಯ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಭೂಮಿಗೆ ಮರಳಿದ್ದನ್ನು ಸಂಸತ್ತು ಶ್ಲಾಘಿಸಿದೆ. ಸಚಿವ ಜಿತೇಂದ್ರ ಸಿಂಗ್ ಅವರು ಸುನಿತಾ ವಿಲಿಯಮ್ಸ್ ಅವರಿಗೆ ಪ್ರಧಾನಿ ಮೋದಿ ಬರೆದ ಪತ್ರವನ್ನು ನೆನಪಿಸಿಕೊಂಡಿದ್ದಾರೆ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಅವರನ್ನು ಅಭಿನಂದಿಸಿದ್ದಾರೆ ಎಂದು ಹೇಳಿದರು.

## ಇನ್ಮುಂದೆ ಖಾಸಗಿ ರಸ್ತೆಯನ್ನೂ ಸಾರ್ವಜನಿಕ ರಸ್ತೆ ಎಂದು ಘೋಷಣೆ


• ಉದಯವಾಹಿನಿ, ಬೆಂಗಳೂರು

ನಗರದ ಖಾಸಗಿ ರಸ್ತೆಯನ್ನು ಸಾರ್ವಜನಿಕ ರಸ್ತೆ ಎಂದು ಘೋಷಣೆ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅಧಿಕಾರ ನೀಡುವ 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತಿದ್ದುಪಡಿ ವಿಧೇಯಕ' ವಿಧಾನಸಭೆಯಲ್ಲಿ ಅಂಗೀಕಾರ ಪಡೆದುಕೊಂಡಿದೆ.

**ತಿದ್ದುಪಡಿ ವಿಧೇಯಕ ಅಂಗೀಕಾರ**

ಬುಧವಾರ 2025ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕವನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್‌ಕೆ ಪಾಟೀಲ್ ಮಂಡಿಸಿ, ವಿವರಣೆ ನೀಡಿದರು.

ಯಾವುದೇ ಖಾಸಗಿ ರಸ್ತೆಯನ್ನು ಸಾರ್ವಜನಿಕ ರಸ್ತೆ ಅಂತ ಘೋಷಣೆ ಮಾಡಲು ಸರ್ಕಾರ ಬಿಬಿಎಂಪಿಗೆ ಅಧಿಕಾರ ನೀಡಿದೆ. ಈ ಸಂಬಂಧ ಕಾಯ್ದೆಗೆ ತಿದ್ದುಪಡಿ ತಂದಿದೆ. ಈ ಕಾನೂನಿನಿಂದ ನಗರದ ಖಾಸಗಿ ರಸ್ತೆ, ಬೀದಿಗಳು ಇನ್ಮುಂದೆ ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಗೊಳ್ಳಲಿವೆ.



ನಗರದ ಖಾಸಗಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಬಿಬಿಎಂಪಿಗೆ ಅವಕಾಶ ಇದೆ. ಅನಧಿಕೃತ ಕಟ್ಟಡ ಅಥವಾ ಅದರ ಭಾಗವನ್ನು ಬಳಸದಂತೆ ಮಾಲೀಕ ಅಥವಾ ಇತರೆ ವ್ಯಕ್ತಿಗಳನ್ನು ತಡೆಯಲು ವಿಧೇಯಕದಲ್ಲಿ ಅವಕಾಶ ನೀಡಲಾಗಿದೆ. ಇನ್ನು ಇದೇ ಸಂದರ್ಭದಲ್ಲಿ 2025ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕದ ಬಗ್ಗೆ ಚರ್ಚೆ ನಡೆಸಲಾಯಿತು. ಸಚಿವ ಪ್ರಿಯಾಂಕ್ ಖರ್ಗೆ ವಿವರಣೆ ನೀಡಿ 'ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಕ್ರಮ ಲೇಔಟ್‌ಗಳಿವೆ. ಇವುಗಳಿಗೆ ಎಲ್ಲಾ ಸೌಕರ್ಯ ನೀಡಿದ್ದೇವೆ. ಆದರೆ ಇವು ಯಾವೂ ತೆರಿಗೆ ವ್ಯಾಪ್ತಿಗೆ ಬರಲ್ಲ. ಹೀಗಾಗಿ ಇವುಗಳನ್ನ ತೆರಿಗೆ ವ್ಯಾಪ್ತಿಗೆ ತರುವ ಉದ್ದೇಶದಿಂದ ವಿಧೇಯಕ ತರಲಾಗಿದೆ' ಎಂದರು.

ಇವುಗಳಿಗೆ ಪ್ಲಾನ್ ಅಪ್ರೂವಲ್ ಕೊಡೋಕೆ ಅವಕಾಶ ನೀಡಿದ್ದೇವೆ. ಮೊದಲ ವರ್ಷದಲ್ಲಿ ಇಂತಹ ಲೇಔಟ್‌ಗಳಿಂದ ಡಬಲ್ ಟ್ಯಾಕ್ಸ್ ವಸೂಲಿ ಮಾಡ್ತಿದ್ದೇವೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 1.40 ಕೋಟಿ ಆಸ್ತಿಗಳಿವೆ. ಆದರೆ 40 ಲಕ್ಷ ಆಸ್ತಿಗಳು ಮಾತ್ರ ಖಾತೆ ಹೊಂದಿದೆ. 96 ಲಕ್ಷ ಆಸ್ತಿಗಳನ್ನ ಇ-ಸ್ವತ್ತು ವ್ಯಾಪ್ತಿಗೆ ತರಲು ತೀರ್ಮಾನ ಮಾಡಿದ್ದೇವೆ. ಇದರಿಂದ ಸ್ಥಳೀಯ ಸಂಸ್ಥೆಗಳು ಸ್ವಾವಲಂಬಿ ಆಗಲು ಸಹಕಾರಿ ಆಗಲಿದೆ ಎಂದು ವಿವರಿಸಿದರು.

ವಿಧೇಯಕದ ಕುರಿತಾಗಿ ಸುನೀಲ್ ಕುಮಾರ್, ಎಸ್‌ಆರ್ ವಿಶ್ವನಾಥ್, ಬಸವರಾಜ ದದ್ದಲ್, ಅಶೋಕ್ ರೈ ಮತ್ತಿತರರು ಮಾತನಾಡಿದರು. ಇದೇ ಸಂದರ್ಭದಲ್ಲಿ 2025ನೇ ಸಾಲಿನ ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ ಹಾಗೂ ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ತಿದ್ದುಪಡಿ ವಿಧೇಯಕವನ್ನೂ ಅಂಗೀಕಾರ ಮಾಡಲಾಯ್ತು.

## ಆಯುಷ್ಮಾನ್ ಭಾರತ್ ಯೋಜನೆಯಡಿ ಈ 2 ಚಿಕಿತ್ಸೆ ಸೇರಿಸಿ ಎಚ್‌ಡಿಡಿ ಒತ್ತಾಯ

■ ತಾಲ್ಲೂಕು ಆಸ್ಪತ್ರೆಗಳಲ್ಲಿ 18,000ಕ್ಕೆ ರಕ್ತ ಹೆಪ್ಪುಗಟ್ಟುವಿಕೆ ಕರಗಿಸುವ ಇಂಜೆಕ್ಷನ್‌ಗಳು ಲಭ್ಯವಾಗುವಂತೆ ಕೋರಿಕೆ


• ಉದಯವಾಹಿನಿ, ನವದೆಹಲಿ

ಆಯುಷ್ಮಾನ್ ಭಾರತ್ ಕಾರ್ಯಕ್ರಮದಡಿಯಲ್ಲಿ ಹೃದಯಾಘಾತ ಮತ್ತು ಪಾರ್ಶ್ವವಾಯುಗೆ ಚಿಕಿತ್ಸೆ ಪಡೆಯಲು ರಾಷ್ಟ್ರವ್ಯಾಪಿ ಯೋಜನೆ ರೂಪಿಸಬೇಕು ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡರು ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ಮನವಿ ಮಾಡಿದರು.

ಹೃದಯಾಘಾತ ಮತ್ತು ಪಾರ್ಶ್ವವಾಯುನಿಂದ ಮರಣ ಹೊಂದುವವರು ಭಾರತದಲ್ಲಿ ಹೆಚ್ಚುತ್ತಿದ್ದಾರೆ. ಪ್ರತಿ ವರ್ಷ ನಾವು ಲಕ್ಷಾಂತರ ಜನರನ್ನು ಕಳೆದುಕೊಳ್ಳುತ್ತಿದ್ದೇವೆ ಮತ್ತು ದುರದೃಷ್ಟವಶಾತ್ ಶೇ.30ರಷ್ಟು ಹೃದಯಾಘಾತಗಳು 45 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳಲ್ಲಿ ಸಂಭವಿಸುತ್ತವೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಗ್ರಾಮೀಣ ಪ್ರದೇಶದಲ್ಲಿ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿರುವ ಸಲುವಾಗಿ ತಾಲ್ಲೂಕು ಆಸ್ಪತ್ರೆಗಳಲ್ಲಿ 18,000ಕ್ಕೆ ರಕ್ತ ಹೆಪ್ಪುಗಟ್ಟುವಿಕೆ ಕರಗಿಸುವ ಇಂಜೆಕ್ಷನ್‌ಗಳು ಲಭ್ಯವಾಗುವಂತೆ ಮಾಡಬೇಕೆಂದು ಕೋರಿದರು. ಹೀಗೆ ಮಾಡುವುದರಿಂದ ಗೋಲ್ಡನ್. ಅವರ್ ನಲ್ಲಿಯೇ, ಆರು ಗಂಟೆಗಳ ಒಳಗಾಗಿ ಜೀವಗಳನ್ನು ಉಳಿಸಬಹುದು. ಆರಂಭಿಕವಾಗಿ ಆಯುಷ್ಮಾನ್ ಭಾರತ್ ಅಡಿಯಲ್ಲಿ ಆಂಜಿಯೋಪ್ಲ್ಯಾಸ್ಟಿ ಮತ್ತು ಸ್ಟಂಟ್ ಅಳವಡಿಸುವುದಕ್ಕಾಗಿ ರೋಗಿಗಳನ್ನು ಹತ್ತಿರದ ನಗರಗಳಿಗೆ ಸ್ಥಳಾಂತರಿಸುವ ವ್ಯವಸ್ಥೆ ಮಾಡಬೇಕು ಎಂದು ಅವರು ಹೇಳಿದರು. ಆಯುಷ್ಮಾನ್ ಭಾರತ್ ಅಡಿಯಲ್ಲಿ ಆಂಜಿಯೋಪ್ಲ್ಯಾಸ್ಟಿ ಒಳಗೊಳ್ಳಲ್ಪಟ್ಟಿದ್ದರೂ ಜೀವ ರಕ್ಷಕ ಔಷಧಿಗಳನ್ನು ಸಹ ಈ ಯೋಜನೆಯಲ್ಲಿ ಸೇರಿಸಬೇಕು ಎಂದು ಅವರು ಮನವಿ ಮಾಡಿದರು. ಕಳೆದ ಹತ್ತು ವರ್ಷಗಳಲ್ಲಿ ರಾಷ್ಟ್ರದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ತೀವ್ರಗತಿಯ ಸುಧಾರಣೆಗಳೇ ಆಗುತ್ತಿವೆ. 2013-14ರಲ್ಲಿ ಆರೋಗ್ಯ ಕ್ಷೇತ್ರಕ್ಕೆ ಬಜೆಟ್ ಹಂಚಿಕೆ ಕೇವಲ 37,000 ಕೋಟಿಗಳಷ್ಟಿತ್ತು. ಈಗ ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ಈ ಹಂಚಿಕೆ 99,058 ಕೋಟಿಗಳಿಗೆ ಏರಿದೆ ಎಂದು ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡರು ಹೇಳಿದರು. ಎನ್‌ಡಿಎ ಹಾಗೂ ಯುಪಿಎ ಸರ್ಕಾರಗಳ ಅವಧಿಯಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಯನ್ನು ಹೋಲಿಸಿ ಮಾತನಾಡಿದರು.

**ಶೇ.30ರಷ್ಟು ಹೃದಯಾಘಾತ ವ್ಯಕ್ತಿ ಸಾವು**



**ವೈದ್ಯರು ಮತ್ತು ದಾದಿಯರ ಕೊರತೆ ನೀಗಿಸಿ:** ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವ ಎಂಬಿಬಿಎಸ್ ವೈದ್ಯರ ವೇತನ ಹೆಚ್ಚಳಕ್ಕೆ ದೇವೇಗೌಡರು ಬಲವಾಗಿ ಪ್ರತಿಪಾದಿಸಿದರು, ಗ್ರಾಮೀಣ ವೈದ್ಯರು ಪ್ರಸ್ತುತ ತಿಂಗಳಿಗೆ 50,000-60,000 ವೇತನ ಪಡೆಯುತ್ತಿದ್ದಾರೆ. ಕಡಿಮೆ ಸಂಬಳದಿಂದಾಗಿ ವೈದ್ಯರು ಸಹ ಗ್ರಾಮೀಣ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಿಲ್ಲ. ಪಿಎಚ್‌ಸಿಗಳು, ಸಿಎಚ್‌ಸಿಗಳು ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಹೆಚ್ಚಿನ ವೃತ್ತಿಪರರನ್ನು ಆಕರ್ಷಿಸಲು ಸರ್ಕಾರ ಅವರ ವೇತನವನ್ನು ಕನಿಷ್ಠ 80,000-90,000ಕ್ಕೆ ಹೆಚ್ಚಿಸಬೇಕು ಎಂದು ಮಾಜಿ ಪ್ರಧಾನಿಗಳು ಒತ್ತಾಯಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರಿಗೆ ಪ್ರೋತ್ಸಾಹ ಧನ ನೀಡಬೇಕು. ಗ್ರಾಮೀಣ ಆರೋಗ್ಯವನ್ನು ನಾವು ಸುಧಾರಿಸದೇ ಇದ್ದರೆ, ನಮ್ಮ ಹಳ್ಳಿಗಳು ಸರಿಯಾದ ವೈದ್ಯಕೀಯ ಆರೈಕೆಯ ಕೊರತೆಯಿಂದ ಬಳಲುತ್ತಲೇ ಇರುತ್ತವೆ ಎಂದು ಅವರು ಎಚ್ಚರಿಸಿದರು. ಅದೇ ರೀತಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ಮತ್ತು ದಾದಿಯರಿಗೆ ಕಡಿಮೆ ಸಂಬಳದ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದರು, ಅವರಿಗೆ ಪ್ರಸ್ತುತ ತಿಂಗಳಿಗೆ ಕೇವಲ 13,000 ವೇತನ ನೀಡಲಾಗುತ್ತದೆ. ಈ ವೇತನವು ದೈನಂದಿನ ವೇತನ ಮಾನದಂಡಕ್ಕಿಂತ ಕಡಿಮೆಯಾಗಿದೆ. ದಾದಿಯರು ತಮ್ಮ ಕುಟುಂಬಗಳನ್ನು ಉಳಿಸಿಕೊಳ್ಳಲು ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುವುದನ್ನು ಮುಂದುವರಿಸಲು ವೇತನವನ್ನು ಕನಿಷ್ಠ 20,000-28,000 ಕ್ಕೆ ಹೆಚ್ಚಿಸಬೇಕು ಎಂದು ಅವರು ಕೋರಿದರು.

### ಎಚ್‌ಪಿವಿ ಲಸಿಕೆ ಮತ್ತು ಕ್ಯಾನ್ಸರ್ ತಡೆಗಟ್ಟುವಿಕೆ

ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ರಾಷ್ಟ್ರೀಯ ರೋಗನಿರೋಧಕ ಕಾರ್ಯಕ್ರಮದಲ್ಲಿ ಎಚ್‌ಪಿವಿ ಲಸಿಕೆಯನ್ನು ಸೇರಿಸಬೇಕೆಂದು ದೇವೇಗೌಡರು ಮನವಿ ಮಾಡಿದರು. ಗರ್ಭಕಂಠದ ಕ್ಯಾನ್ಸರ್ ಮಹಿಳೆಯರಲ್ಲಿ ಸಾಮಾನ್ಯವಾಗಿ ಕಂಡುಬರುವ ಕ್ಯಾನ್ಸರ್‌ಗಳಲ್ಲಿ ಒಂದಾಗಿದೆ. ಎಚ್‌ಪಿವಿ ಲಸಿಕೆಯು ಅದರ ಸಂಭವವನ್ನು ಶೇ.80-90ರಷ್ಟು ಕಡಿಮೆ ಮಾಡುತ್ತದೆ. ರಾಷ್ಟ್ರೀಯ ರೋಗನಿರೋಧಕ ಕಾರ್ಯಕ್ರಮದ ಭಾಗವಾಗಿ ಪ್ರೌಢಶಾಲಾ ಹುಡುಗಿಯರಿಗೆ ಲಸಿಕೆ ಹಾಕುವುದು ಉತ್ತಮ ಪರಿಹಾರೋಪಾಯ ಆಗಿದೆ ಅವರು ಒತ್ತಿ ಹೇಳಿದರು.

### ಆಯುಷ್ಮಾನ್ ಭಾರತ್ ಬಲಪಡಿಸಿ

ಆಯುಷ್ಮಾನ್ ಭಾರತ್ ಯೋಜನೆಯ ಯಶಸ್ಸನ್ನು ದೇವೇಗೌಡರು ಶ್ಲಾಘಿಸಿದರು. ಭಾರತದ ಜನಸಂಖ್ಯೆಯ ಶೇ.70ಕ್ಕೂ ಹೆಚ್ಚು ಜನರು ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. 2018ರಲ್ಲಿ ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಪ್ರಾರಂಭಿಸಲಾದ ಈ ಉಪಕ್ರಮವು ಲಕ್ಷಾಂತರ ಜನರಿಗೆ ಆರೋಗ್ಯ ಸೇವೆಯನ್ನು ಕಲ್ಪಿಸಿದೆ. ಬಡ ನಾಗರಿಕರು ಸಹ ಗುಣಮಟ್ಟದ ಆರೋಗ್ಯ ಸೇವೆಯನ್ನು ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮತ್ತು ಆರೋಗ್ಯ ಸಚಿವರನ್ನು ಅಭಿನಂದಿಸುತ್ತೇನೆ ಎಂದು ಅವರು ಹೇಳಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,044/Gram24ct ₹8,290/Gram22ct | ಬೆಳ್ಳಿ: ₹105.00/Gram

# ಪಿಎಫ್‌ಐ ಏಜೆಂಟ್ ಸಿದ್ದರಾಮಯ್ಯನವರಿಂದ ಆರ್‌ಎಸ್‌ಎಸ್ ಪಾಠ ಕಲಿಯಬೇಕಾಗಿಲ್ಲ

• ಉದಯವಾಹಿನಿ, ಬೆಂಗಳೂರು

ಯಾರೋ ಕಟ್ಟಿದ ಹುತ್ತದಲ್ಲಿ ಬಂದು ಅಡಗಿ ಕುಳಿತುಕೊಳ್ಳುವ ಹಾವಿನ ರೀತಿ ರಾಜ್ಯದಲ್ಲಿ ಅಧಿಕಾರ ಅನುಭವಿಸುವುದು ದೊಡ್ಡದಲ್ಲ. ನಿಮಗೆ ತಾಕತ್ತಿದ್ದರೆ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕತ್ವ ವಹಿಸಿಕೊಂಡು ಮುಂದಿನ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಿ ನೋಡೋಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಬಹಿರಂಗ ಸವಾಲು ಹಾಕಿದ್ದಾರೆ.

ಈ ಕುರಿತು ತಮ್ಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಸಮಾಜವಾದದ ಹೆಸರಿನಲ್ಲಿ ರಾಜಕೀಯ ಆರಂಭಿಸಿ, ಅಹಿಂದ ಹೆಸರಿನಲ್ಲಿ ಅಧಿಕಾರ ಅನುಭವಿಸಿ, ಈಗ ಕುರ್ಚಿ ಉಳಿಸಿಕೊಳ್ಳಲು ನಕಲಿ ಗಾಂಧಿ ಕುಟುಂಬದ ಗುಲಾಮಗಿರಿ ಮಾಡುತ್ತಿರುವ ಸಿದ್ದರಾಮಯ್ಯನವರಂತಹ ಪಿಎಫ್‌ಐ ಏಜೆಂಟ್‌ಗಳಿಂದ ಆರ್.ಎಸ್.ಎಸ್ ಪಾಠ ಕಲಿಯಬೇಕಾಗಿಲ್ಲ ಎಂದು ತಿರುಗೇಟು ಕೊಟ್ಟಿದ್ದಾರೆ. ಸ್ವಾಮಿ ಸಿದ್ದರಾಮಯ್ಯನವರೇ, ಆರ್.ಎಸ್.ಎಸ್ ಅನ್ನು ದೂಷಿಸಿದರೆ ನಕಲಿ ಗಾಂಧಿಗಳನ್ನ ಮೆಚ್ಚಿಸಿ ಇನ್ನೊಂದಷ್ಟು ದಿನ ಕುರ್ಚಿಗೆ ಅಂಟಿಕೊಂಡು ಕೂತಿರಬಹುದು ಎನ್ನುವ ಭ್ರಮೆಯಿಂದ ಹೊರಗೆ ಬನ್ನಿ. ನಿಮ್ಮ ಪಕ್ಷದವರೇ ನಿಮ್ಮ ಕುರ್ಚಿಯನ್ನ ಒದ್ದು ಕಿತ್ತುಕೊಳ್ಳುವ ದಿನ ಬಹಳ ದೂರವಿಲ್ಲ ಎಂದು ಎಚ್ಚರಿಸಿದ್ದಾರೆ.



ಉದಯವಾಹಿನಿ ಚಿತ್ರ

> ಸಿಎಂ ಸಿದ್ದರಾಮಯ್ಯನವರೇ, ಆರ್‌ಎಸ್‌ಎಸ್‌ನಂತಹ ಒಂದು ನಿಸ್ವಾರ್ಥ, ರಾಷ್ಟ್ರೀಯವಾದಿ ಸಂಘಟನೆ ಬಗ್ಗೆ ಮಾತಾಡಲು ಒಂದು ಯೋಗ್ಯತೆ ಬೇಕು. ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗುವ ದೇಶದ್ರೋಹಿಗಳನ್ನು ಸಮರ್ಥನೆ ಮಾಡಿಕೊಳ್ಳುವ ಕಾಂಗ್ರೆಸ್‌ನವರಿಗೆ ಆ ಯೋಗ್ಯತೆ ಇಲ್ಲ ಬಿಡಿ
> – ಆರ್.ಅಶೋಕ್, ಪ್ರತಿಪಕ್ಷದ ನಾಯಕ

ಕಾಂಗ್ರೆಸ್ ಸರ್ಕಾರದ ಅತಿಯಾದ ತುಷ್ಟೀಕರಣ ನೀತಿಯ ಪರಿಣಾಮವಾಗಿ ಬುಧವಾರ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಪಾತಾಳಕ್ಕೆ ಕುಸಿದಿದೆ. ಇದು ಅಕ್ಷರಶಃ ಸತ್ಯ. ಮುಸ್ಲಿಮರ ಋಣದಲ್ಲಿರುವ ಕಾಂಗ್ರೆಸ್ ಸರ್ಕಾರ, ಮತಾಂಧ ಶಕ್ತಿಗಳ ಮುಂದೆ ಶರಣಾಗಿದೆ, ಮೂಲಭೂತವಾದಿಗಳ ತಾಳಕ್ಕೆ ಕುಣಿಯುತ್ತಿದೆ. ಆದ್ದರಿಂದಲೇ ಇವತ್ತು ಕಾಂಗ್ರೆಸ್ ಸರ್ಕಾರಕ್ಕೆ ವಿಧಾನಸೌಧದ ಮುಂದೆ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದರೂ ನಿಮ್ಮ ಬ್ರದರ್ಸ್ ಅಮಾಯಕರು, ಪ್ಯಾಲೆಸ್ತೀನ್ ಧ್ವಜ ಹಾರಿಸಿದರೂ ನಿಮ್ಮ ಬ್ರದರ್ಸ್ ಅಮಾಯಕರು, ಬಾಂಬ್ ಇಟ್ಟರೂ ನಿಮ್ಮ ಬ್ರದರ್ಸ್ ಅಮಾಯಕರು.

ಗಣೇಶ ವಿಸರ್ಜನೆ ಮೆರವಣಿಗೆಯ ಮೇಲೆ ಕಲ್ಲು ತೂರಿದರೂ ನಿಮ್ಮ ಬ್ರದರ್ಸ್ ಅಮಾಯಕರು! ಪೊಲೀಸ್ ಠಾಣೆ ಸುಟ್ಟರೂ ನಿಮ್ಮ ಬ್ರದರ್ಸ್ ಅಮಾಯಕರು..! ಬಾಲಕಿಯರ ಮೇಲೆ ಅತ್ಯಾಚಾರ ಮಾಡಿದರೂ ನಿಮ್ಮ ಬ್ರದರ್ಸ್ ಅಮಾಯಕರು..!ಹಿಂದೂಗಳ ಕೊಲೆ ಮಾಡಿದರೂ ನಿಮ್ಮ ಬ್ರದರ್ಸ್ ಅಮಾಯಕರು..! ಎಂದು ಟೀಕಿಸಿದ್ದಾರೆ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಸರ್ಕಾರ ಭಯೋತ್ಪಾದಕರಿಂದ, ಭಯೋತ್ಪಾದಕರಿಗಾಗಿ ಭಯೋತ್ಪಾದಕರಿಗೋಸ್ಕರ. ಇದಕ್ಕಾಗಿ ಕಾಂಗ್ರೆಸ್ ಸರ್ಕಾರ ಸಂಪೂರ್ಣವಾಗಿ ತುಷ್ಟೀಕರಣದಲ್ಲಿ ತೊಡಗಿದೆ ಎನ್ನುವುದು ಶತಸಿದ್ಧ ಎಂದು ಆರೋಪಿಸಿದ್ದಾರೆ.

## ಶ್ರೀ ಶ್ರೀ 1008 ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರ ಮಹಾಸಮಾರಾಧನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪರಮಪೂಜ್ಯ ಶ್ರೀ ಶ್ರೀ 1008 ಶ್ರೀಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶೇಷಾದ್ರಿಪುರದ ಪ್ಲಾಟ್ ಫಾರ್ಮ್ ರಸ್ತೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ಶ್ರೀ 1008 ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರ ಮಹಾಸಮಾರಾಧನೆಯ ಅಂಗವಾಗಿ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ, ಮತ್ತು ಶ್ರೀ ಶ್ರೀ1008 ಶ್ರೀ ಸುಶಮೀಂದ್ರತೀರ್ಥರ ಬೃಂದಾವನಕ್ಕೆ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ, ಹರಿಭಜನೆಯೊಂದಿಗೆ ರಥೋತ್ಸವ, ಮಹಾಮಂಗಳಾರತಿ, ಅಲಂಕಾರ ಪಂಕ್ತಿ ಸೇವಾ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು ಎಂದು ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಸುಬ್ಬುನರಸಿಂಹ ಅವರು ತಿಳಿಸಿದರು.

## ಮಲೆನಾಡಲ್ಲಿ ಅಕೇಶಿಯ ನೀಲಗಿರಿ ಮರಗಳನ್ನು ತೆಗೆದುಹಾಕುವಂತೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಮಲೆನಾಡು ಭಾಗದಲ್ಲಿರುವ ಅಕೇಶಿಯ, ನೀಲಗಿರಿ ಮರಗಳನ್ನು ತೆಗೆಯಬೇಕೆಂದು ಜೆಡಿಎಸ್ ನಾಯಕ ಎಸ್.ಎಲ್.ಭೋಜೇಗೌಡ ವಿಧಾನ ಪರಿಷತ್‌ನಲ್ಲಿ ಸರ್ಕಾರವನ್ನು ಒತ್ತಾಯಿಸಿದರು. 2025-26ನೇ ಸಾಲಿನ ಆಯ ವ್ಯಯ ಅಂದಾಜುಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅಕೇಶಿಯ ಮತ್ತು ನೀಲಗಿರಿ ಮರಗಳು ಮಲೆನಾಡು ಭಾಗದಲ್ಲಿ ರಾರಾಜಿಸುತ್ತಿವೆ. ಅದನ್ನು ತೆಗೆದರೆ ಒಳ್ಳೆಯ ಪರಿಸರ ಆಗಲಿದೆ. ಆ ಮರಗಳ ಪ್ರದೇಶದಲ್ಲಿ ಹಣ್ಣುಗಳ ಗಿಡಗಳನ್ನು ಬೆಳೆಸಿ ಎಂದು ಸಲಹೆ ಮಾಡಿದರು.

ಕೊಡಗು, ಹಾಸನ, ಚಿಕ್ಕಮ ಗಳೂರು ಭಾಗದಲ್ಲಿ ಕಾಡು ಪ್ರಾಣಿಗಳ ದಾಳಿಯಿಂದ ಹಲವು ಜನ ಪ್ರಾಣ ಕಳೆದುಕೊಂಡಿದ್ದಾರೆ. ಮಾನವ-ಪ್ರಾಣಿ ಸಂಘರ್ಷವನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು. ಹಳ್ಳಿಕಾರ್, ಅಮೃತ್‌ಮಹಲ್, ಮಲೆನಾಡು ಗಿಡ್ಡ ತಳಿಯ ಜಾನುವಾರು ತಳಿಗಳನ್ನು ರಕ್ಷಣೆ ಮಾಡಬೇಕು ಎಂದ ಅವರು, ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ಸ್ಥಿತಿ ಬಹಳ ಕೆಟ್ಟದಾಗಿದೆ. ಉತ್ತಮ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಶೇ.60ರಷ್ಟು ಶಿಕ್ಷಕರ ಕೊರತೆ ಸರ್ಕಾರಿ ಶಾಲೆಗಳಲ್ಲಿವೆ ಎಂದು ಹೇಳಿದರು. ಅತಿಥಿ ಶಿಕ್ಷಕರಿಗೆ ಐದಾರು ತಿಂಗಳಿನಿಂದ ಗೌರವಧನವನ್ನೇ ನೀಡಿಲ್ಲ. ಅವರಿಗೆ ಸಕಾಲಕ್ಕೆ ಗೌರವಧನ ನೀಡುವಂತಾಗಬೇಕು ಎಂದು ಆಗ್ರಹಿಸಿದರು. 4.9 ಲಕ್ಷ ಕೋಟಿ ರೂ. ಬಜೆಟ್ ಮಂಡಿಸಿದ್ದರೂ ಶಿಕ್ಷಣದ ಮೂಲ ಸೌಕರ್ಯ ಅಭಿವೃದ್ಧಿಗೆ ಅಗತ್ಯ ಅನುದಾನ ಒದಗಿಸಿಲ್ಲ. ದಿನೇ ದಿನೇ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಿದೆ. ಶೇ.55ರಷ್ಟು ಮಕ್ಕಳು ಖಾಸಗಿ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಕನ್ನಡ ಮಾಧ್ಯಮದ ಶೇ.80ರಷ್ಟು ಶಾಲೆಗಳು ಮುಚ್ಚುವ ಹಂತ ತಲುಪಿವೆ. ಒಂದು ಸಾವಿರ ಪದವಿಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರೇ ಇಲ್ಲ. ಐಟಿಐ ಕಾಲೇಜುಗಳ ಪರಿಸ್ಥಿತಿಯೂ ಚೆನ್ನಾಗಿಲ್ಲ ಎಂದು ಹೇಳಿದರು.

## ಯಶವಂತಪುರ ರೈಲ್ವೆ ನಿಲ್ದಾಣದ ಬಳಿ ಸುಟ್ಟ ಸ್ಥಿತಿಯಲ್ಲಿ ಮಹಿಳೆಯ ಶವ ಪತ್ತೆ

• ಉದಯವಾಹಿನಿ, ಬೆಂಗಳೂರು

ಯಶವಂತಪುರ ರೈಲ್ವೆ ನಿಲ್ದಾಣದ ಬಳಿ ಸುಟ್ಟ ಸ್ಥಿತಿಯಲ್ಲಿ ಮಹಿಳೆಯ ಶವ ಪತ್ತೆ ಯಾಗಿದೆ. ಸುಮಾರು 35ರಿಂದ 40 ವರ್ಷದ ಮಹಿಳೆಯನ್ನು ದುಷ್ಕರ್ಮಿಗಳು ಬೇರೆಡೆ ಕೊಲೆ ಮಾಡಿ ನಂತರ ಶವಕ್ಕೆ ಬೆಂಕಿ ಹಚ್ಚಿ ಗೋಣಿ ಚೀಲದಲ್ಲಿ ತಂದು ಪ್ಲಾಟ್‌ಪಾರಂ-1ರ ಸಮೀಪ ಎಸೆದಿರುವ ಶಂಕೆ ವ್ಯಕ್ತವಾಗಿದೆ. ಸುದ್ದಿ ತಿಳಿದು ಯಶವಂತಪುರ ರೈಲ್ವೆ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದು, ಈ ಮಹಿಳೆ ಯಾರು, ಯಾವ ಕಾರಣಕ್ಕಾಗಿ ಈ ಮಹಿಳೆಯನ್ನು ಯಾರು ಕೊಲೆ ಮಾಡಿದ್ದಾರೆ ಎಂಬ ಬಗ್ಗೆ ರೈಲ್ವೆ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ.

## 38.4 ಕೋಟಿ ರೂ. ಮೌಲ್ಯದ 3 ಕೆಜಿ ಡ್ರಗ್ಸ್‌ವಶ, ವಿದೇಶಿ ಮಹಿಳೆ ಸೆರೆ

• ಉದಯವಾಹಿನಿ, ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡಿಆರ್‌ಐ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ವಿದೇಶಿ ಮಹಿಳೆಯನ್ನು ಬಂಧಿಸಿ 38.4 ಕೋಟಿ ರೂ. ಮೌಲ್ಯದ 3 ಕೆಜಿ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ. ಇತ್ತೀಚೆಗೆ ಚಿನ್ನ ಕಳ್ಳ ಸಾಗಾಣೆ ಪ್ರಕರಣವನ್ನು ಪತ್ತೆಹಚ್ಚಿ ನಟಿಯನ್ನು ಬಂಧಿಸಿ 14 ಕೆಜಿ ಚಿನ್ನದ ಗಟ್ಟಿಗಳನ್ನು ವಶಪಡಿಸಿಕೊಂಡಿದ್ದ ಡಿಆರ್‌ಐ ಅಧಿಕಾರಿಗಳು ಇದೀಗ ಇದೇ ವಿಮಾನ ನಿಲ್ದಾಣಕ್ಕೆ ಕತಾರ್‌ನ ದೋಹಾದಿಂದ ಬಂದ ಘಾನ ಮೂಲದ ಮಹಿಳೆಯನ್ನು ಬಂಧಿಸಿದ್ದಾರೆ. ಈ ಮಹಿಳೆಯನ್ನು ತಪಾಸಣೆಗೊಳಪಡಿಸಿದಾಗ 3.2 ಕೆಜಿ ಕೊಕೇನ್ ಕಂಡು ಬಂದಿದ್ದು, ಇದರ ಮೌಲ್ಯ 38 ಕೋಟಿ ರೂ. ಎಂದು ಅಂದಾಜಿಸಲಾಗಿದೆ.ಈ ಮಹಿಳೆಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿರುವ ಡಿಆರ್‌ಐ ಅಧಿಕಾರಿಗಳು, ಈ ಮಾದಕ ವಸ್ತುವನ್ನು ಎಲ್ಲಿಂದ ತರಲಾಯಿತು. ಇದರ ಹಿಂದೆ ಬೇರೆ ಯಾರಾದರೂ ಇದ್ದಾರೆಯೇ. ಈ ಮಾದಕ ವಸ್ತುವನ್ನು ನಗರಕ್ಕೆ ತಂದು ಯಾವ ಸ್ಥಳಕ್ಕೆ ಸಾಗಿಸುತ್ತಿದ್ದರು ಎಂಬಿತ್ಯಾದಿ ಮಾಹಿತಿಗಳನ್ನು ಪಡೆದುಕೊಳ್ಳುತ್ತಿದ್ದಾರೆ.

## ಟಿ.ಎ.ಶರವಣಗೆ ಸಭಾಪತಿ ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು


ಮಧ್ಯೆ ಎದ್ದು ಮಾತನಾಡಿದರೆ ಸದನದಿಂದ ಹೊರ ಹಾಕಬೇಕಾಗುತ್ತದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಜೆಡಿಎಸ್ ಸದಸ್ಯ ಟಿ.ಎ.ಶರವಣ ಅವರಿಗೆ ವಿಧಾನಪರಿಷತ್‌ನಲ್ಲಿ ಎಚ್ಚರಿಕೆ ನೀಡಿದರು. ಪ್ರಶ್ನೋತ್ತರ ಅವಧಿಯಲ್ಲಿ ಮಧ್ಯಪ್ರವೇಶಿಸಿ ಮಾತನಾಡಲು ಮುಂದಾದಾಗ, ಮಧ್ಯೆ ಎದ್ದು ಮಾತನಾಡಿದರೆ ಸದನದಿಂದ ಹೊರ ಹಾಕಬೇಕಾಗುತ್ತದೆ ಎಂದರು. ಇದಕ್ಕೆ ಶರವಣ ಅವರು ನಾನು ಪ್ರಶ್ನೆ ಕೇಳುವುದಿಲ್ಲ, ಹೊರ ಹೋಗುತ್ತೇನೆ ಎಂದಾಗ, ಹೊರ ಹೋಗಿ! ಎಂದರು.

# ಅಪಾರ್ಟ್‌ಮೆಂಟ್ ಹೊರತು ಪಡಿಸಿ ಹೊಸ ಕಟ್ಟಡಗಳಿಗೆ ಕಾವೇರಿ ನೀರು

## ಸಂಬಂಧಪಟ್ಟ ಸೇವಾ ಠಾಣೆಯ ಜಲಪರಿವೀಕ್ಷಕರಿಗೆ ತಪಾಸಣೆ ನಡೆಸಿ ವರದಿ ಸಲ್ಲಿಸಲು ರವಾನಿಸಲಾಗುವುದು

• ಉದಯವಾಹಿನಿ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೆಂಗಳೂರು ವಾಟರ್ ಸಪ್ಲೈ ಅಂಡ್ ಸೆವರೇಜ್ ಬೋರ್ಡ್ 1964ರಲ್ಲಿ ಸ್ಥಾಪನೆಗೊಂಡಿತ್ತು. ಈ ಸಂಸ್ಥೆಯ ಮೂಲ ಉದ್ದೇಶ ಬೆಂಗಳೂರು ನಗರ, ಸುತ್ತಮುತ್ತಲಿನ ಪ್ರದೇಶಗಳಿಗೆ ಸುರಕ್ಷಿತ, ಸಾಕಷ್ಟು ನೀರು ಸರಬರಾಜು ಮಾಡುವುದು, ಚರಂಡಿ ವ್ಯವಸ್ಥೆಯನ್ನು ನಿರ್ವಹಿಸುವುದು. ಬೆಂಗಳೂರು ನಗರದ ಅಪಾರ್ಟ್‌ಮೆಂಟ್‌ಗಳನ್ನು ಹೊರತು ಪಡಿಸಿ ನೂತನ ಕಟ್ಟಡಗಳಿಗೆ ಹೊಸ ಕಾವೇರಿ ನೀರಿನ ಸಂಪರ್ಕವನ್ನು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಪಡೆದುಕೊಳ್ಳುವುದು ಹೇಗೆ ಎಂದು ತನ್ನ ಅಂತರ್ಜಾಲದಲ್ಲಿ ವಿವರಿಸಿದೆ. ಜೊತೆಗೆ, ಇದು ಸಕಾಲ ವೆಬ್ಸೈಟಿನಲ್ಲೂ ಲಭ್ಯವಾಗಿದೆ. ಕಟ್ಟಡದ ಮಾಲೀಕರು ನೀರು ಸರಬರಾಜು ಮತ್ತು ಒಳ ಚರಂಡಿ ವ್ಯವಸ್ಥೆಯನ್ನು ಪಡೆಯಲು ಇಚ್ಚಿಸಿದ್ದಲ್ಲಿ ಆನ್ ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿರುತ್ತದೆ ಅಥವಾ ಯಾವುದೇ ನೋಂದಾಯಿತ ಪ್ಲಂಬರ್ ಮುಖಾಂತರ ಆನ್ ಲೈನ್ ನಲ್ಲಿ ಈ ಕೆಳಕಂಡ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಜಲಪರಿವೀಕ್ಷಕರು ಕಟ್ಟಡದ ತಪಾಸಣೆ ಕೈಗೊಂಡು ನಿಯಮಾವಳಿ ಪ್ರಕಾರ ಮಳೆ ನೀರು ಕೊಯ್ಲು ಪದ್ದತಿಯನ್ನು ಸ್ಥಾಪಿಸಿರುವ ಬಗ್ಗೆ ಖಚಿತಪಡಿಸಿಕೊಂಡು ಸದರಿ ಅರ್ಜಿಯನ್ನು ಶಿಫಾರಸ್ಸು ಮಾಡುತ್ತಾರೆ. ಕಟ್ಟಡದ ತಪಾಸಣೆ ಕೈಗೊಂಡು ಅದರ ಅಳತೆಗನುಗುಣವಾಗಿ ತಗಲುವ ಶುಲ್ಕವಿದ್ದಲ್ಲಿ ಸದರಿ ಸಂಪರ್ಕವನ್ನು ನೀರು ಸರಬರಾಜಿನ ಟ್ಯಾಪಿಂಗ್ ಪಾಯಿಂಟ್, ಒಳಚರಂಡಿ ವಿಲೇವಾರಿಯೊಂದಿಗೆ ಅನುಮೋದನೆಗಾಗಿ ಶಿಫಾರಸ್ಸು ಮಾಡುತ್ತಾರೆ. ಮಳೆ ನೀರು ಕೊಯ್ಲು ಪದ್ಧತಿಯನ್ನು ನಿಯಮಾನುಸಾರ ಅಳವಡಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.


ಉದಯವಾಹಿನಿ ಚಿತ್ರ

**ಡ್ರೈನೇಜ್ ಸಂಪರ್ಕ ಪಡೆಯುವುದು ಹೇಗೆ?**

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸದರಿ ಕಟ್ಟಡದ ತಪಾಸಣೆ ಕೈಗೊಂಡು ಕ್ರಮಬದ್ಧವಾಗಿದ್ದಲ್ಲಿ ಸದರಿ ಅರ್ಜಿಯನ್ನು ದಾಖಲಾತಿಗಳ ಪರಿಶೀಲನೆಗಾಗಿ ನಕ್ಷೆಗಾರರಿಗೆ ರವಾನಿಸುತ್ತಾರೆ. ನಕ್ಷೆಗಾರರು ಸದರಿ ದಾಖಲಾತಿಗಳು, ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ವರದಿಯನ್ನು ಪರಿಶೀಲಿಸಿ ಸದರಿ ಅರ್ಜಿಯನ್ನು ಬೇಡಿಕೆ ಅನುಮೋದನೆಗೆ ಸಲ್ಲಿಸುತ್ತಾರೆ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸದರಿ ಬೇಡಿಕೆ ಪತ್ರವನ್ನು ಪರಿಶೀಲಿಸಿ ಕ್ರಮಬದ್ಧವಾಗಿದ್ದಲಿ ಜನರೇಟ್ ಮಾಡಲು ಅನುಮೋದಿಸುತ್ತಾರೆ.

ಅಂತಿಮ ಅನುಮೊದನೆ ನೀಡಿದ ನಂತರ, ಅರ್ಜಿದಾರರಿಂದ ಹಣ ಪಾವ ತಿಸಿಕೊಂಡು ಆರ್.ಆರ್. ನಂಬರ್ ನೊಂದಿಗೆ ನೀರಿನ ಸಂಪರ್ಕವನ್ನು ಕಲ್ಪಿಸ ಲಾಗುವುದು.

**ಅರ್ಜಿ ಸಲ್ಲಿಸಿದ ನಂತರ ಸ್ವೀಕೃತಿ ರಸೀತಿ ಮೂಲಕ ಸಲ್ಲಿಸಬೇಕಾದ ದಾಖಲಾತಿಗಳು**

- ಮಂಜೂರಾತಿ ನಕ್ಷೆ ಮತ್ತು ಚಾಲ್ತಿ ವರ್ಷದ ಕಂದಾಯ ರಸೀದಿ ಮತ್ತು ಖಾತಾ ಪ್ರಮಾಣ ಪತ್ರ ಅಥವಾ ಖಾತಾ ಎಕ್ಸ್‌ಟ್ರಾಕ್ಟ್ ಅಥವಾ ಕ್ರಯ ಪತ್ರ
- ಬಿ.ಬಿ.ಎಂ.ಪಿ / ಬಿ.ಡಿ.ಎ ನೀಡಿರುವ ರಸ್ತೆ ಅಗೆತದ ಉತ್ತರ ಪತ್ರ (ಜಿ.ಬಿ.ಡಬ್ಲ್ಯೂ.ಎ.ಎಸ್.ಬಿ.ಯೋಜನೆಯಡಿಯಲ್ಲಿ ಪಾವತಿಸಿದ ಗ್ರಾಹಕರನ್ನು / 110 ಹಳ್ಳಿ ಗ್ರಾಹಕರನ್ನು ಹೊರತುಪಡಿಸಿ)
- ಪೂರ್ಣಗೊಂಡಿರುವ ಕಟ್ಟಡದ ಛಾಯ ಚಿತ್ರ
- ಕಟ್ಟಡದಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿರುವ ಛಾಯ ಚಿತ್ರ
- ಬೆಂಗಳೂರು ಜಲಮಂಡಲಿ ಕಾಯ್ದೆ ಪ್ರಕಾರ ಸ್ವಾಧೀನಾನುಭವ ಪ್ರಮಾಣ ಪತ್ರ. ಸಂಬಂಧಪಟ್ಟ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಾಥಮಿಕ ಹಂತದಲ್ಲಿ ಅರ್ಜಿಯನ್ನು ಪರಿಶೀಲಿಸಿ ಸಂಬಂಧಪಟ್ಟ ಸೇವಾ ಠಾಣೆಯ ಜಲಪರಿವೀಕ್ಷಕರಿಗೆ ತಪಾಸಣೆ ನಡೆಸಿ ವರದಿ ಸಲ್ಲಿಸಲು ರವಾನಿಸಲಾಗುವುದು.

**ಉಪ ಸೇವೆಯ ಹೆಸರು:** ಅಪಾರ್ಟ್‌ಮೆಂಟ್ ಗಳನ್ನು ಹೊರತು ಪಡಿಸಿ ನಿವಾಸದ ಕಟ್ಟಡಗಳಿಗಾಗಿ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಗಾಗಿ ಹೊಸ ಸಂಪರ್ಕವನ್ನು/ ಹೆಚ್ಚುವರಿ ಸಂಪರ್ಕವನ್ನು ಕಲ್ಪಿಸುವುದಕ್ಕೆ ಅನುಮತಿ.

**ಈ ಸೇವೆಯನ್ನು ಪಡೆಯಲು ಇರುವ ಅರ್ಹತೆ :** ಈ ಸೇವೆಯನ್ನು ಪಡೆಯಲು ಕಟ್ಟಡದ ಯಜಮಾನರು / ಬಾಡಿಗೆದಾರರು ಇಷ್ಟಪಟ್ಟಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಸಂಪರ್ಕವನ್ನು ಪಡೆಯಲು ಅರ್ಹರು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು**

1 . ಚಾಲ್ತಿ ವರ್ಷದ ತೆರಿಗೆ ರಸೀತಿ/ಖಾತಾ ಪ್ರಮಾಣ ಪತ್ರ
2 . ರಸ್ತೆ ಅಗೆತದ ಪತ್ರ
3 . ಮಂಜೂರಾತಿ ನಕಾಶೆ

**ಈ ಸೇವೆಯನ್ನು ಪಡೆಯಲು ನಿಗದಿಪಡಿಸಿರುವ ಶುಲ್ಕ :** ಎಷ್ಟು ಮನೆಗಳಿವೆ, ಎಷ್ಟು ಸ್ಯಾನಿಟರಿ ಪಾಯಿಂಟ್ ಗಳು ಬೇಕಿವೆ, ಇದರ ಆಧಾರದ ಮೇಲೆ ಶುಲ್ಕ ನಿಗದಿ.

**ಈ ಸೇವೆಯನ್ನು ಪಡೆಯಲು ನಿಗದಿಪಡಿಸಿರುವ ಗರಿಷ್ಟ ಕಾಲಾವಧಿ:** 14 ಕೆಲಸದ ದಿನಗಳು


ಈ ಸೇವೆಯನ್ನು ನಿಗದಿತ ದಿನಾಂಕದೊಳಗೆ ನೀಡದಿದ್ದಲ್ಲಿ ಅಥವಾ ಇದನ್ನು ತಿರಸ್ಕರಿಸಿದಲ್ಲಿ,ಮೇಲ್ಮನವಿ ಸಲ್ಲಿಸಬೇಕಾದ **ಸಕ್ಷಮ ಪ್ರಾಧಿಕಾರಿ ಹೆಸರು:** ಅಪರ ಮುಖ್ಯ ಅಭಿಯಂತರರು

**ಸಕ್ಷಮ ಪ್ರಾಧಿಕಾರಿ ಮೇಲ್ಮನವಿಯನ್ನು ಇತ್ಯರ್ಥಪಡಿಸಲು ನಿಗದಿಪಡಿಸಿರುವ ಕಾಲಾವಧಿ:** 15 ಕೆಲಸದ ದಿನಗಳು

## ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ಕಠಿಣ ಕ್ರಮ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ವಿಧಾನಪರಿಷತ್‌ಗೆ ತಿಳಿಸಿದರು. ಜೆಡಿಎಸ್ ಸದಸ್ಯ ಟಿ.ಎ.ಶರವಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗೋಮಾಳ, ಕೆರೆ ಸೇರಿದಂತೆ ಸರ್ಕಾರಿ ಭೂ ಒತ್ತುವರಿಯನ್ನು ತೆರವುಗೊಳಿಸಲಾಗುತ್ತಿದೆ ಎಂದರು. ಪ್ರತಿ ತಾಲ್ಲೂಕಿನಲ್ಲೂ ನಕಲಿ ದಾಖಲೆ ಸೃಷ್ಟಿಸಿ ಬೇರೊಬ್ಬರಿಗೆ ಸರ್ಕಾರಿ ಭೂಮಿ ಮಾರಾಟ ಮಾಡಲು ಅವಕಾಶವಿಲ್ಲದಂತೆ ನಿರ್ಬಂಧಿಸಲು ಸೂಕ್ತ ಕಾನೂನು ಜಾರಿಗೊಳಿಸಲಾಗುವುದು ಎಂದು ತಿಳಿಸಿದರು. ಸರ್ಕಾರಿ ಜಮೀನು ಒತ್ತುವರಿ ತೆರವು ಕಾರ್ಯಾಚರಣೆಯನ್ನು ಪ್ರತಿ ತಾಲ್ಲೂಕಿನಲ್ಲೂ ವಾರಕ್ಕೆ ಎರಡು ಬಾರಿ ಕೈಗೊಳ್ಳಲು ಸೂಚಿಸಲಾಗಿದೆ. ಈಗಾಗಲೇ ಈ ಕಾರ್ಯ ಆರಂಭವಾಗಿದ್ದು, ಮತ್ತಷ್ಟು ಶೀಘ್ರಗೊಳಿಸಲಾಗುವುದು ಎಂದರು. ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ಬಗ್ಗೆ 272 ದೂರುಗಳು ಬಂದಿವೆ. ಮಾರ್ಗಸೂಚಿ ಮತ್ತು ಮಾರುಕಟ್ಟೆ ಬೆಲೆಯಂತೆ ನಗರ ಜಿಲ್ಲೆಯ ವಿವಿಧ ಗ್ರಾಮಗಳ ಸರ್ಕಾರಿ ಜಮೀನಿಗೆ ಒಂದೊಂದು ಮೌಲ್ಯ ನಿಗದಿಪಡಿಸಲಾಗಿದೆ. ಒತ್ತುವರಿ ಮಾಡಿಕೊಂಡಿರುವವರಿಗೆ ನೋಟಿಸ್ ನೀಡಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿ ಹಂತ ಹಂತವಾಗಿ ತೆರವುಗೊಳಿಸಲಾಗುತ್ತದೆ.



ತಹಶೀಲ್ದಾರ್ ಹಂತದಲ್ಲಿ ಒತ್ತುವರಿದಾರರ ವಿರುದ್ಧ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಕ್ರಮ ವಹಿಸಲಾಗಿದೆ. ಒತ್ತುವರಿದಾರರ ವಿರುದ್ಧ ಪೊಲೀಸ್ ಠಾಣೆಯಲ್ಲೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುತ್ತಿದೆ. ಒಟ್ಟು 136 ಎಕರೆ ಜಮೀನನ್ನು ಈಗಾಗಲೇ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು. ಒತ್ತುವರಿ ತೆರವುಗೊಳಿಸಿದ ಜಮೀನುಗಳನ್ನು ಸಾರ್ವಜನಿಕ ಉದ್ದೇಶಗಳಿಗೆ ಕಾಯ್ದಿರಿಸಲಾಗುತ್ತದೆ ಎಂದರು.

## ಕುರಿಗಾಹಿಗಳ ಮೇಲಿನ ದೌರ್ಜನ್ಯ ತಡೆಯಲು ಕಾನೂನು ಕ್ರಮ

• ಉದಯವಾಹಿನಿ, ಬೆಂಗಳೂರು

ಕುರಿಗಾಹಿಗಳ ಮೇಲೆ ನಡೆಯುವ ಹಲ್ಲೆ, ದೌರ್ಜನ್ಯವನ್ನು ತಡೆಯಲು ಶೀಘ್ರ ಕಾನೂನು ತರಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ವಿಧಾನಪರಿಷತ್‌ಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಚಿದಾನಂದ್ ಎಂ.ಗೌಡ ಅವರ ಪ್ರಶ್ನೆಗೆ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕುರಿಗಾಹಿಗಳ ಮೇಲೆ ಹಲ್ಲೆ ನಡೆದಿರುವ ಘಟನೆಗಳು ಬೆಳಕಿಗೆ ಬಂದಿವೆ. ಹೀಗಾಗಿ ಶೀಘ್ರ ಕಾನೂನು ತರಲಾಗುವುದು ಎಂದರು. ಶಿರಾ ತಾಲ್ಲೂಕಿನಲ್ಲಿ 4,78,500 ಕುರಿಗಳಿವೆ. ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂಬುದು ಸದಸ್ಯರ ಒತ್ತಾಯವಾಗಿದ್ದು, ಆ ನಿಟ್ಟಿನಲ್ಲಿ ಕುರಿ ಸಾಗಾಣಿಕೆಗೆ ಹೆಚ್ಚು ಪ್ರೋತ್ಸಾಹ ಕೊಡಲು ಸರ್ಕಾರ ಸಿದ್ಧವಿದೆ ಎಂದು ಹೇಳಿದರು. ಆಗ ಸಚಿವರು, ನಮ ಮನೆಯಲ್ಲೂ 120 ಕುರಿಗಳಿವೆ. ಲಾಭಾಂಶ ಇರುವುದು ಕುರಿ ಸಾಗಾಣಿಕೆಯಲ್ಲೇ. ಕುರಿ ಸಾಗಾಣಿಕೆದಾರರ ಮೇಲೆ ಪೊಲೀಸ್ ಕೇಸ್ ಹಾಕುತ್ತಿರುವ ಬಗ್ಗೆ ಮಾಹಿತಿ ಕೊಟ್ಟರೆ ಸರ್ಕಾರ ಕಾನೂನು ರೀತಿ ಕ್ರಮ ಜರುಗಿಸಲಿದೆ ಎಂದರು.


ಉದಯವಾಹಿನಿ ಚಿತ್ರ

ಜಾನುವಾರುಗಳಿಗೆ ಬೇಸಿಗೆಯಲ್ಲಿ ಉಂಟಾಗುವ ಮೇವಿನ ಕೊರತೆಯನ್ನು ನೀಗಿಸಲು ಸರ್ಕಾರ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದೆ. ಯಾವುದೇ ತಾಲ್ಲೂಕಿನಲ್ಲಿ ಮೇವಿನ ಲಭ್ಯತೆಯು ನಾಲ್ಕು ವಾರಗಳಿಗಿಂತ ಕಡಿಮೆಯಾದ್ದಲ್ಲಿ ಮೇವು ಬ್ಯಾಂಕ್‌ನ್ನು ತೆರೆದು ರೈತರಿಗೆ ರಿಯಾಯ್ತಿ ದರದಲ್ಲಿ ಒಣ ಮೇವನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ಎರಡು ವಾರಗಳಿಗಿಂತ ಮೇವಿನ ಲಭ್ಯತೆ ಕಡಿಮೆಯಾದರೆ ಹೋಬಳಿ ಮಟ್ಟದಲ್ಲಿ ಜಾನುವಾರು ಶಿಬಿರಗಳನ್ನು ತೆರೆದು, ಜಾನುವಾರುಗಳಿಗೆ ಮೇವು, ನೀರನ್ನು ಒದಗಿಸಿ ಸಂರಕ್ಷಿಸಲಾಗುವುದು.

> ಸದಸ್ಯ ಶಾಂತರಾಮ್ ಗುಡ್ಡಾಸಿದ್ದಿ ಅವರ ಪ್ರಶ್ನೆಗೆ ಉತ್ತರಿಸಿದ ಕಂದಾಯ ಸಚಿವರು, ಬೆಳಗಾವಿ, ಕರಾವಳಿ ಭಾಗದ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯದವರು ಪಶುಪಾಲಕರಾಗಿದ್ದು, ಅವರು ಘೋಷಿತ ಬುಡಕಟ್ಟು ಸಮುದಾಯದವರಾಗಿರುವುದಿಲ್ಲ. ಇದರಿಂದ ಅವರಿಗೆ ತೊಂದರೆಯಾಗುತ್ತಿದ್ದು, ವಿಶೇಷ ಕಾರ್ಯಕ್ರಮ ರೂಪಿಸುವ ಚಿಂತನೆ ಇದೆ
> – ಕೃಷ್ಣ ಭೈರೇಗೌಡ, ಕಂದಾಯ ಸಚಿವ

ಮೇವು ಉತ್ಪಾದಿಸುವ ಮೇವಿನ ಬೀಜದ 4,52,463 ಮಿನಿಕಿಟ್‌ಗಳನ್ನು ರೈತರಿಗೆ ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 1428 ಮೇವು ಕತ್ತರಿಸುವ ಯಂತ್ರವನ್ನು ವಿತರಿಸಲಾಗಿದೆ. ತೋಟಗಾರಿಕೆ ಬೆಳೆಗಳ ಮಧ್ಯೆ ಮೇವು ಬೆಳೆಗಳ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

## ಬಿಜೆಪಿ ಪಕ್ಷದ ಮುಖಂಡ ಉಮೇಶ್ ಕಬ್ಬಾಳ್‌ರವರ ಹುಟ್ಟುಹಬ್ಬದ ಸಂಭ್ರಮಾಚರಣೆ

• ಉದಯವಾಹಿನಿ, ಬೆಂಗಳೂರು

ಗಣೇಶ ಮಂದಿರ ವಾರ್ಡ್ ಬನಶಂಕರಿ ಮಹಿಳಾ ಸಮಾಜದ ಸಭಾಂಗಣದಲ್ಲಿ ಬಿಜೆಪಿ ಪಕ್ಷದ ಮುಖಂಡರಾದ ಉಮೇಶ್ ಕಬ್ಬಾಳ್ ರವರ ಹುಟ್ಟುಹಬ್ಬವನ್ನು ಅಭಿಮಾನಿಗಳು, ಸ್ನೇಹಿತರು ಅರ್ಥಪೂರ್ಣವಾಗಿ ಆಚರಿಸಿದರು. ಬಿಜೆಪಿ ಮುಖಂಡ ಉಮೇಶ್ ಕಬ್ಬಾಳ್ ರವರು, ನಿಕಟಪೂರ್ವ ಬಿಬಿಎಂಪಿ ಸದಸ್ಯೆ, ಶ್ರೀಮತಿ ಲಕ್ಷ್ಮಿ ಉಮೇಶ್ ರವರು ಪರಿಸರ ಜಾಗೃತಿಗಾಗಿ ಹೊಂಗೆ ಮತ್ತು ತುಳಸಿ ಸಸಿಗಳನ್ನು ವಿತರಿಸುವ ಮೂಲಕ ಹುಟ್ಟುಹಬ್ಬಕ್ಕೆ ಚಾಲನೆ ನೀಡಿದರು, ನಂತರ ರೆಫರಲ್ ಆಸ್ಪತ್ರೆಯಲ್ಲಿ ಹಣ್ಣು, ಹಂಪಲು ವಿತರಣೆ ಹಾಗೂ ಅನಾಥಶ್ರಮ, ಅಂಗನವಾಡಿ ಮಕ್ಕಳಿಗೆ ಸಿಹಿ ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಉಮೇಶ್ ಕಬ್ಬಾಳ್ ರವರು ಮಾತನಾಡಿ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ರವರ ನೇತೃತ್ವ, ಮಾರ್ಗದರ್ಶನದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಜನಸೇವೆ ಮಾಡುತ್ತಿದ್ದೇನೆ.


ಉದಯವಾಹಿನಿ ಚಿತ್ರ

ರಾಜಕೀಯ ಎಂದರೆ ಜನರ ಸೇವೆ ಮಾಡುವುದು ಎಂಬುದು ಅರ್ಥ, ಅಧಿಕಾರ ಇರಲಿ, ಇಲ್ಲದಿರಲಿ ಪ್ರತಿದಿನ ಜನರ ಸಮಸ್ಯೆಗಳನ್ನು ಆಲಿಸುವುದು , ಪರಿಹರಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಜನರ ಪ್ರೀತಿ, ವಿಶ್ವಾಸ ಸದಾ ಹೀಗೆ ಇರಲಿ, ಸೇವೆ ನಿರಂತರ, ಅವರ ಪ್ರೀತಿ ವಿಶ್ವಾಸಕ್ಕೆ ಹೃತ್ಪೂರ್ವಕ ಧನ್ಯವಾದ ಹೇಳುವ ದಿನವಾಗಿದೆ

> ದೇಶ ಮೊದಲು, ಪಕ್ಷ ನಂತರ ಎಂಬ ದೇಶಭಕ್ತಿ ಕಲಿಸಿದ ಪಕ್ಷ ಬಿಜೆಪಿ ಅ ಪಕ್ಷದ ಕಾರ್ಯಕರ್ತ ಎಂದರೆ ಹೆಮ್ಮೆ ಪಡುವ ಸಂಗತಿಯಾಗಿದೆ. ಕಳೆದ ಬಿಬಿಎಂಪಿ ಚುನಾವಣೆಯಲ್ಲಿ ನನ್ನ ಶ್ರೀಮತಿ ಲಕ್ಷ್ಮಿ ಉಮೇಶ್ ರವರಿಗೆ ಗಣೇಶ ಮಂದಿರ ವಾರ್ಡ್‌ನಲ್ಲಿ ಅತ್ಯಧಿಕ ಮತ ನೀಡಿ ಪಾಲಿಕೆ ಸದಸ್ಯೆಯಾಗಿ ಜನರ ಸೇವೆ ಮಾಡಲು ಅವಕಾಶ ನೀಡಿದರು.

ಎಂದು ಹೇಳಿದರು. ಬಿಜೆಪಿ ಮಂಡಲದ ಅಧ್ಯಕ್ಷ ಲಕ್ಷ್ಮೀಕಾಂತ್, ಮಾಜಿ ಪಾಲಿಕೆ ಸದಸ್ಯ ತಿಮ್ಮೇಗೌಡರು, ಬಿಜೆಪಿ ಮುಖಂಡರಾದ ಸೂರಿ ಬಾಬು, ಹರಿಬಾಬು, ವೇಣು ಗೋಪಾಲ್, ರಾಜು, ಗೋಪಾಲ್, ರಮೇಶ್, ಮೋಹನ್, ಅರುಣರವರು ಬಿಜೆಪಿ ಮುಖಂಡರು, ಸ್ಥಳೀಯ ನಿವಾಸಿಗಳು ಸಂಘ, ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಭಾಗವಹಿಸಿದ್ದರು.

### ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಅಥವಾ ಆವಿರೋಧ ಆಯ್ಕೆ ನಡೆಯುವ ಸಾಧ್ಯತೆ

# ಏಪ್ರಿಲ್ ಮೊದಲ ವಾರದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದ ಚುನಾವಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದ ಚುನಾವಣೆಗೆ ವೇದಿಕೆ ಸಿದ್ದಗೊಳ್ಳುತ್ತಿದ್ದು, ಏಪ್ರಿಲ್ ತಿಂಗಳಲ್ಲಿ ಬಿಜೆಪಿ ಸಾರಥಿ ಯಾರು? ಎನ್ನುವುದು ಸ್ಪಷ್ಟವಾಗಲಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆಯ ಬಳಿಕವೇ ರಾಜ್ಯ ಬಿಜೆಪಿ ಅಧ್ಯಕ್ಷರ ನೇಮಕಾತಿಗೆ ಚಾಲನೆ ದೊರೆಯಲಿದೆ. ಏಪ್ರಿಲ್ ಮೊದಲ ವಾರದಲ್ಲಿ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯುವ ಸಾಧ್ಯತೆಗಳಿವೆ. ಇದಾದ ಬಳಿಕ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಅಥವಾ ಅವಿರೋಧ ಆಯ್ಕೆ ನಡೆಯುವ ಸಾಧ್ಯತೆ ಗೋಚರಿಸಿದೆ.

**ಯಾರಾಗಲಿದ್ದಾರೆ ಸಾರಥಿ..?**

ರಾಜ್ಯ ಬಿಜೆಪಿ ಅಧ್ಯಕ್ಷರ ಚುನಾವಣೆ ನಡೆಸಲು ಅನುಕೂಲವಾಗುವಂತೆ ಜಿಲ್ಲಾ ಬಿಜೆಪಿ ಅಧ್ಯಕ್ಷರ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲಾಗುತ್ತಿದೆ. ಮೊದಲ ಹಂತದಲ್ಲಿ 23 ಜಿಲ್ಲಾ ಅಧ್ಯಕ್ಷರ ನೇಮಕಾತಿ ನಡೆಸಲಾಗಿದ್ದು, ಎರಡನೇ ಹಂತದಲ್ಲಿ 8 ಜಿಲ್ಲೆಗಳ ಅಧ್ಯಕ್ಷರ ನೇಮಕಾತಿ ಮಾಡಲಾಗಿದೆ. ದಾವಣಗೆರೆ, ಚಿತ್ರದುರ್ಗ, ತುಮಕೂರು, ಮೈಸೂರು ಗ್ರಾಮಾಂತರ, ಹಾಸನ, ಉಡುಪಿ ಮತ್ತು ಕೊಡಗು ಬಿಜೆಪಿ ಸಂಘಟನಾತ್ಮಕ ಜಿಲ್ಲೆಗಳ ಅಧ್ಯಕ್ಷರ ನೇಮಕಾತಿ ಬಾಕಿ ಉಳಿದಿದೆ. ಈ ತಿಂಗಳ ಅಂತ್ಯದೊಳಗೆ ಬಾಕಿ ಇರುವ ಜಿಲ್ಲೆಗಳ ಅಧ್ಯಕ್ಷರ ನೇಮಕಾತಿಯೂ ನಡೆಯಲಿದೆ.ರಾಜ್ಯ ಬಿಜೆಪಿ ಅಧ್ಯಕ್ಷರ ಚುನಾವಣೆ ನಡೆಸಲು ಕನಿಷ್ಠ ಶೇ.50ರಷ್ಟು ಜಿಲ್ಲಾ ಅಧ್ಯಕ್ಷರ ನೇಮಕಾತಿ ಮುಗಿದಿರಬೇಕೆನ್ನುವುದು ಪಕ್ಷದ ನಿಯಮ. ರಾಜ್ಯದಲ್ಲಿ ಶೇ.75ರಷ್ಟು ಜಿಲ್ಲೆಗಳಲ್ಲಿ ಅಧ್ಯಕ್ಷರ ನೇಮಕಾತಿ ಅಂತ್ಯಗೊಂಡಿದೆ.


ಉದಯವಾಹಿನಿ ಚಿತ್ರ

**ವಿಜಯೇಂದ್ರ ಸ್ಪರ್ಧೆ?**

ಬಿಜೆಪಿ ಅಧ್ಯಕ್ಷರ ಸ್ಥಾನಕ್ಕೆ ಹಾಲಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ತಮ್ಮನ್ನೇ ಮುಂದುವರೆಸುವಂತೆ ಈಗಾಗಲೇ ಅವರು ಹೈಕಮಾಂಡ್ ಮುಖಂಡರುಗಳನ್ನು ಭೇಟಿಯಾಗಿ ಆಶೀರ್ವಾದ ಕೋರಿದ್ದಾರೆ. ಒಂದು ವೇಳೆ ಬಿಜೆಪಿ ಹೈಕಮಾಂಡ್ ಅಧ್ಯಕ್ಷ ಹುದ್ದೆಗೆ ಚುನಾವಣೆ ನಡೆಸಿದರೂ ಸ್ಪರ್ಧೆ ಮಾಡಲು ಸಜ್ಜಾಗಿದ್ದಾರೆ. ಗೆಲುವಿಗೆ ಅಗತ್ಯವಿರುವ ತಂತ್ರಗಾರಿಕೆಗಳನ್ನೂ ಮಾಡುತ್ತಿದ್ದಾರೆ.

ಹಾಗಾಗಿ ರಾಜ್ಯ ಅಧ್ಯಕ್ಷರ ಚುನಾವಣೆ ನಡೆಸಲು ಯಾವುದೇ ತೊಡಕುಗಳು ಪಕ್ಷದಲ್ಲಿ ಇಲ್ಲ.ಬಿಜೆಪಿ ಅಧ್ಯಕ್ಷರನ್ನಾಗಿ ವಿಜಯೇಂದ್ರ ಅವರನ್ನು ಮುಂದು ವರೆಸುವುದನ್ನು ತಡೆಯಲು ಪಕ್ಷದಲ್ಲಿ ಹಿರಿಯ ಮುಖಂಡ ಬಸನಗೌಡ ಪಾಟೀಲ ಯತ್ನಾಳ್ ಸಕ್ರಿಯರಾಗಿದ್ದು, ತಮ್ಮದೇ ಆದ ಕಾರ್ಯತಂತ್ರಗಳನ್ನು ರೂಪಿಸತೊಡಗಿದ್ದಾರೆ. ವಿಜಯೇಂದ್ರ ಅವರನ್ನು ಬದಲಾವಣೆ ಮಾಡುವಂತೆ ಪಟ್ಟು ಹಿಡಿದಿರುವ ಯತ್ನಾಳ್ ಬಣ ಅಧ್ಯಕ್ಷರನ್ನು ಚುನಾವಣೆ ಮೂಲಕವೇ ಆಯ್ಕೆ ಮಾಡಬೇಕು ಎಂದು ಹೈಕಮಾಂಡ್‌ಗೆ ಆಗ್ರಹಿಸಿದೆ. ಚುನಾವಣೆಯಲ್ಲಿ ವಿಜಯೇಂದ್ರ ವಿರುದ್ಧ ತಮ್ಮ ಬಣದ ಸ್ಪರ್ಧೆ ಖಚಿತವೆಂದು ಈಗಾಗಲೇ ಯತ್ನಾಳ್ ಘೋಷಿಸಿದ್ದಾರೆ.

ರಾಜ್ಯ ಬಿಜೆಪಿಗೆ ಯಾರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದರೆ ಸೂಕ್ತ ಎನ್ನುವುದರ ಬಗ್ಗೆ ಬಿಜೆಪಿ ಹೈಕಮಾಂಡ್ ಪ್ರಮುಖರ ಜೊತೆ ಚರ್ಚಿಸಿ ಮಾಹಿತಿ ಸಂಗ್ರಹಿಸಿದೆ ಎಂದು ಹೇಳಲಾಗಿದೆ. ತನ್ನದೇ ಆದ ಲೆಕ್ಕಾಚಾರಗಳೊಂದಿಗೆ ಕೆಲವು ಷರತ್ತುಗಳನ್ನು ವಿಧಿಸಿ ವಿಜಯೇಂದ್ರ ಅವರಿಗೆ ಮತ್ತೊಂದು ಅವಕಾಶ ನೀಡುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ ಎಂದು ತಿಳಿದು ಬಂದಿದೆ.



ಈ ಬೆಳವಣಿಗೆ ನಡುವೆ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಹೈಕಮಾಂಡ್ ಬಯಸಿದರೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ವಿ.ಸೋಮಣ್ಣ, ಮುರುಗೇಶ್ ನಿರಾಣಿ, ಶೋಭಾ ಕರಂದ್ಲಾಜೆ, ಮಾಜಿ ಸಚಿವ ಡಾ.ಅಶ್ವತ್ಥ ನಾರಾಯಣ, ಸಿ.ಟಿ.ರವಿ ಅವರು ಸ್ಪರ್ಧಿಸುವ ಅಭಿಲಾಷೆ ಹೊಂದಿದ್ದಾರೆ ಎನ್ನಲಾಗಿದೆ.

**ಯತ್ನಾಳ್ ಬಣದಿಂದ ಯಾರು ?**





ಪಕ್ಷದ ಹೈಕಮಾಂಡ್ ಯಾವ ಸಮುದಾಯದವರನ್ನು ರಾಜ್ಯ ಬಿಜೆಪಿ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ತೀರ್ಮಾನಿಸುತ್ತದೆಯೋ ಅದರಂತೆ ಸ್ಪರ್ಧೆ ಮಾಡಲು ಯತ್ನಾಳ್ ಬಣ ತನ್ನ ತಂತ್ರಗಾರಿಕೆ ರೂಪಿಸಲಿದೆ. ಲಿಂಗಾಯತ ಸಮುದಾಯದಲ್ಲಿ ಬಸನಗೌಡ ಯತ್ನಾಳ್, ಹಿಂದುಳಿದ ವರ್ಗದ ಪೈಕಿ ಮಾಜಿ ಸಚಿವ ಕುಮಾರ ಬಂಗಾರಪ್ಪ, ಎಸ್ಸಿ-ಎಸ್ಟಿ ಪೈಕಿ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.


### ಗ್ರಾಮದಲ್ಲಿದ್ದ ಕೊಳವೆಬಾವಿಗಳು ಸದ್ಯ ಬತ್ತಿಹೋಗಿದ್ದು, ಗ್ರಾಮಸ್ಥರಿಗೆ ಕುಡಿಯುವ ನೀರಿನ ಸಮಸ್ಯೆ ಎದುರು

# ಚನ್ನಪಟ್ಟಣ: ಓವರ್ ಹೆಡ್ ಟ್ಯಾಂಕ್‌ಗೆ ಇಲ್ಲ ನೀರಿನ ಸಂಪರ್ಕ

• **ಉದಯವಾಹಿನಿ, ಚನ್ನಪಟ್ಟಣ**

ತಾಲ್ಲೂಕಿನ ಪೀಹಳ್ಳಿದೊಡ್ಡಿ ಗ್ರಾಮದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷೆಯ ಜಲಜೀವನ್ ಮಿಷನ್ ಯೋಜನೆ ಅಡಿಯಲ್ಲಿ 2018-19ನೇ ಸಾಲಿನಲ್ಲಿ ನಿರ್ಮಾಣವಾಗಿರುವ ಓವರ್ ಹೆಡ್ ಟ್ಯಾಂಕ್‌ಗೆ ನೀರಿನ ಸಂಪರ್ಕವಿಲ್ಲದ ಕಾರಣ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಗ್ರಾಮದಲ್ಲಿದ್ದ ಕೊಳವೆಬಾವಿಗಳು ಸದ್ಯ ಬತ್ತಿಹೋಗಿದ್ದು, ಗ್ರಾಮಸ್ಥರಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಇದರಿಂದ ಗ್ರಾಮಸ್ಥರು ಖಾಸಗಿ ಪಂಪ್‌ಸೆಟ್‌ಗಳನ್ನು ಆಶ್ರಯಿಸುವಂತಾಗಿದೆ. ಜತೆಗೆ ಸ್ಥಳೀಯ ಭೂಹಳ್ಳಿ ಗ್ರಾ.ಪಂ.ಆಡಳಿತವು ಗ್ರಾಮದಲ್ಲಿನ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಖಾಸಗಿ ಪಂಪ್‌ಸೆಟ್ ಅವರಿಗೆ ಹಣ ನೀಡಿ ಗ್ರಾಮಸ್ಥರಿಗೆ ಕುಡಿಯುವ ನೀರು ಪೂರೈಸುವಂತಾಗಿದೆ.

ಸುಮಾರು ಐದು ವರ್ಷಗಳಿಗೂ ಹಿಂದೆ ಗ್ರಾಮದಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ಕುಡಿಯುವ ನೀರು ಪೂರೈಸಲು ಕಾಮಗಾರಿ ಆರಂಭಿಸಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡಿ ಪೈಪ್‌ಲೈನ್ ಸಹ ಮಾಡಲಾಗಿದೆ. ಪ್ರತಿ ಮನೆಗಳ ಬಳಿ ನಲ್ಲಿ ಸಹ ಹಾಕಲಾಗಿದೆ. ಆದರೆ, ಓವರ್ ಹೆಡ್ ಟ್ಯಾಂಕ್‌ಗೆ


ಉದಯವಾಹಿನಿ ಚಿತ್ರ

ಮಾತ್ರ ನೀರಿನ ಸಂಪರ್ಕ ನೀಡಿಲ್ಲ. ಈ ಹಿಂದೆ ಇದ್ದ ಕಿರು ನೀರು ಸರಬರಾಜು ಯೋಜನೆಯ ಕೊಳವೆ ಬಾವಿಗಳು ಬತ್ತಿವೆ. ಇತ್ತ ಜಲಜೀವನ್ ಮಿಷನ್ ಯೋಜನೆಯ ನೀರು ಸಹ ಬರುತ್ತಿಲ್ಲ. ಇದರಿಂದ ಕುಡಿಯುವ ನೀರಿಗೆ ಸಮಸ್ಯೆ ಎದುರಾಗಿದ್ದು, ಸಾರ್ವಜನಿಕರು ಪರದಾಡುವಂತಾಗಿದೆ.

ಗ್ರಾಮದಲ್ಲಿ ಕಳೆದ ವರ್ಷ ಎರಡು ಕೊಳವೆಬಾವಿಗಳನ್ನು ಕೊರೆಸಲಾಯಿತು. ಅದರಲ್ಲಿ ನೀರು ಬರಲಿಲ್ಲ. ಇದರಿಂದ ಕುಡಿಯುವ ನೀರಿನ ಸಮಸ್ಯೆ

**ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆ ಆರಂಭವಾಗಿ ಐದು ವರ್ಷ ಕಳೆದಿದ್ದರೂ ನೀರಿನ ಸಂಪರ್ಕ ಸಿಗದೆ ಗ್ರಾಮಸ್ಥರು ಕುಡಿಯುವ ನೀರಿಗೆ ಪರದಾಡುತ್ತಿದ್ದಾರೆ. ಈ ಬಗ್ಗೆ ಜನಪ್ರತಿನಿಧಿಗಳು ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಹಾಗಾಗಿ ಸಂಬಂಧಪಟ್ಟವರು ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಿ ಗ್ರಾಮಸ್ಥರ ನೀರಿನ ಸಮಸ್ಯೆ ಪರಿಹರಿಸಿ.**

**-ಶಿವರಾಜ್ ಕುಮಾರ್, ಗ್ರಾಮಸ್ಥ**

ತೀವ್ರವಾಯಿತು. ಆಗ ಜಲ ಜೀವನ್ ಯೋಜನೆ ಕಾಮಗಾರಿ ನಡೆದಿದ್ದರಿಂದ ಅದಕ್ಕೆ ಚಾಲನೆ ಸಿಗಬಹುದು ಎಂದುಕೊಂಡಿದ್ದೆವು. ಆದರೆ, ಅದಕ್ಕೂ ಚಾಲನೆ ಸಿಕ್ಕಿಲ್ಲ. ಹಾಗಾಗಿ ಖಾಸಗಿ ಪಂಪ್‌ಸೆಟ್ ಆಶ್ರಯಿಸುವಂತಾಗಿದೆ ಎಂಬುದು ಗ್ರಾಮಸ್ಥರ ಅಳಲಾಗಿದೆ.

ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಆಲಿಸಿದ ಗ್ರಾ.ಪಂ.ಆಡಳಿತವು ಜಲ ಜೀವನ್ ಯೋಜನೆಯ ಪೈಪ್‌ಲೈನ್‌ಗೆ ಖಾಸಗಿ ಕೊಳವೆಬಾವಿಯ ನೀರಿನ ಸಂಪರ್ಕ ಕೊಡಿಸಿ ನೀರು ಪೂರೈಸುತ್ತಿದೆ. ಇದಕ್ಕಾಗಿ ಗ್ರಾ.ಪಂ. ಬಾಡಿಗೆ ನೀಡುತ್ತಿದೆ. ಹಾಗಾಗಿ ಬೇಸಿಗೆ ಆರಂಭವಾಗಿದ್ದು, ಇನ್ನೂ ನೀರಿಗೆ ಹಾಹಾಕಾರವಾಗಬಹುದು. ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಿ ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಈ ಬಗ್ಗೆ ಈಗಾಗಲೇ ಗ್ರಾ.ಪಂ. ಸಾಮಾನ್ಯ ಸಭೆಯಲ್ಲಿ ಶಾಸಕ ಸಿ.ಪಿ.ಯೋಗೇಶ್ವರ್ ಅವರ ಗಮನಕ್ಕೆ ತರಲಾಗಿದೆ. ಜಿ.ಪಂ. ಸಿಇಒ, ತಾ.ಪಂ. ಇಒ, ನೀರು ಸರಬರಾಜು ಮಂಡಳಿ ಅಧಿಕಾರಿಗಳು, ಹಾಲಿ, ಮಾಜಿ ಸಂಸದರ ಗಮನಕ್ಕೂ ತರಲಾಗಿದೆ.

ಆದರೂ, ಗ್ರಾಮದ ಓವರ್ ಹೆಡ್ ಟ್ಯಾಂಕ್ ಉದ್ಘಾಟನೆಯಾಗಿಲ್ಲ. ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗಿಲ್ಲ ಎಂಬುದು ಗ್ರಾಮಸ್ಥರ ಮಾತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಈ ಬಗ್ಗೆ ಗಮನ ಹರಿಸಿ ಗ್ರಾಮದ ಕುಡಿಯುವ ನೀರಿನ ಸಮಸ್ಯೆ ಶೀಘ್ರ ಪರಿಹರಿಸಬೇಕು.

ಇಲ್ಲವಾದರೆ ಗ್ರಾಮದ ವತಿಯಿಂದ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

**ಹಲವು ಗ್ರಾಮಗಳಲ್ಲಿ ಯೋಜನೆ ವಿಫಲ**

**ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ನೀರು ಸರಬರಾಜು ಮಾಡುವ ಕಾರ್ಯ ಸಾಕಾರಗೊಂಡಿದ್ದರೂ ಹಲವು ಗ್ರಾಮಗಳಲ್ಲಿ ಯೋಜನೆ ವಿಫಲವಾಗಿದೆ. ಕೆಲವು ಗ್ರಾಮಗಳಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಿಸಿ ಪೈಪ್ ಲೈನ್ ಮಾಡಿ ನಲ್ಲಿ ಹಾಕಿ ನೀರು ಪೂರೈಕೆ ಮಾಡುತ್ತಿದ್ದರೂ ಮೀಟರ್‌ಗಳೆಲ್ಲವೂ ಹಾಳಾಗಿವೆ. ಇನ್ನೂ ಕೆಲವು ಗ್ರಾಮಗಳಲ್ಲಿ ಮಾಡಿರುವ ಪೈಪ್ ಲೈನ್ ಕಳಪೆಯಾಗಿದೆ. ಮತ್ತೆ ಕೆಲವು ಗ್ರಾಮಗಳಲ್ಲಿ ಪೈಪ್‌ಲೈನ್ ಆಗಿದ್ದರೂ ನೀರಿನ ಸಂಪರ್ಕ ನೀಡಿಲ್ಲ. ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿ ಯೋಜನೆಯ ಪೈಪ್‌ಲೈನ್ ಮಾಡಲು ರಸ್ತೆ ಅಗೆಯಲಾಗಿದೆ. ಕೆಲವು ಗ್ರಾಮಗಳಲ್ಲಿ ಅಗೆದಿರುವ ರಸ್ತೆಗಳನ್ನು ಕಾಂಕ್ರೀಟ್ ಹಾಕಿ ಮುಚ್ಚಿದ್ದರೆ ಹಲವು ಗ್ರಾಮಗಳಲ್ಲಿ ಗುಂಡಿಗಳನ್ನು ಮುಚ್ಚದೆ ಅದ್ವಾನ ಮಾಡಲಾಗಿದೆ ಎಂಬುದು ಗ್ರಾಮಸ್ಥರ ಆರೋಪವಾಗಿದೆ.**

## ಅಗೆದ ರಸ್ತೆ ಮುಚ್ಚದ ಪಾಲಿಕೆ

• **ಉದಯವಾಹಿನಿ, ತುಮಕೂರು**

ನಗರದ ಹೃದಯ ಭಾಗದಲ್ಲಿರುವ ಶ್ರೀರಾಮನಗರ ಮುಖ್ಯರಸ್ತೆಯಲ್ಲಿ ಕುಡಿಯುವ ನೀರಿಗೆ ಸಂಪರ್ಕ ಕಲ್ಪಿಸಲು ಅಗೆದ ರಸ್ತೆಯನ್ನು 8 ತಿಂಗಳು ಕಳೆದರೂ ಮುಚ್ಚಿಲ್ಲ. ಶಾರದಾದೇವಿ ನಗರದಲ್ಲಿ 15 ವರ್ಷಗಳಿಂದ ಹಾಳಾದ ರಸ್ತೆ ಸರಿಪಡಿಸಿಲ್ಲ... 19ನೇ ವಾರ್ಡ್ ವ್ಯಾಪ್ತಿಯ ವಿವಿಧ ರಸ್ತೆಗಳಿಗೆ ಸ್ಮಾರ್ಟ್ ಸಿಟಿ ಯೋಜನೆಯಡಿ ಡಾಂಬರೀಕರಣ ಮಾಡಲಾಗಿದೆ. ಅಭಿವೃದ್ಧಿಪಡಿಸಿದ ರಸ್ತೆಗಳು ಕೆಲವೇ ದಿನಗಳಿಗೆ ಹಾಳಾದರೆ, ಇನ್ನೂ ಕೆಲವು ರಸ್ತೆಗಳಲ್ಲಿನ ಗುಂಡಿ ಮುಚ್ಚುವ ಕೆಲಸವಾಗಿಲ್ಲ. ಶ್ರೀರಾಮನಗರ ಭಾಗದಲ್ಲಿ ಕಿರು ರಸ್ತೆಗಳಿಗೆ ಹಾಕಿರುವ ಕಾಂಕ್ರೀಟ್ ಹಾಳಾಗಿದ್ದು, ದುರಸ್ತಿ ಮಾಡಿಸಿಲ್ಲ. ಚರಂಡಿ ಅವ್ಯವಸ್ಥೆಯಿಂದ ಕೂಡಿದೆ. ಯುಜಿಡಿ ಸೋರಿಕೆ ನಿಲ್ಲುತ್ತಿಲ್ಲ...

ಕೋತಿತೋಪು, ಕೆಇಬಿ ವಸತಿಗೃಹ, ಕುವೆಂಪು ನಗರದ ಕೆಲ ಪ್ರದೇಶಗಳು ವಾರ್ಡ್ ವ್ಯಾಪ್ತಿಗೆ ಒಳಪಡುತ್ತವೆ. ಬಹುತೇಕ ರಸ್ತೆಗಳನ್ನು ಹೊಸದಾಗಿ ನಿರ್ಮಿಸಲಾಗಿದೆ. ಆದರೆ, ಕಾಮಗಾರಿ ಮುಗಿದ ಕೆಲವೇ ದಿನಗಳಲ್ಲಿ ಹಾಳಾಗಿವೆ. ಶ್ರೀರಾಮನಗರ


ಉದಯವಾಹಿನಿ ಚಿತ್ರ

ಮುಖ್ಯರಸ್ತೆಯಲ್ಲಿ ನೀರಿನ ಪೈಪ್‌ಲೈನ್ ಸಂಪರ್ಕಕ್ಕೆ ರಸ್ತೆ ಅಗೆದು ಹಾಗೆಯೇ ಬಿಡಲಾಗಿದೆ. ಅರ್ಧಂಬರ್ಧ ಕೆಲಸ ಮಾಡಲಾಗಿದೆ. ಇದರಿಂದಾಗಿ ಬೇಸತ್ತ ಜನ ತಮ್ಮ ಮನೆಯ ಮುಂಭಾಗದ ರಸ್ತೆಯನ್ನು ಅವರೇ ಸರಿ ಮಾಡಿಕೊಳ್ಳುತ್ತಿದ್ದಾರೆ. ಮಹಾನಗರ ಪಾಲಿಕೆ ಮಾಜಿ ಸದಸ್ಯರು ಇತ್ತ ಸುಳಿಯುತ್ತಿಲ್ಲ. ಅಧಿಕಾರಿಗಳು ನಾಮಕಾವಸ್ತೆ ಎಂಬಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂಬುದು ಇಲ್ಲಿನ ನಿವಾಸಿಗಳ ಆರೋಪ. ಐದು ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಕೆಲವೊಮ್ಮೆ ವಾರವಾದರೂ ನೀರು ಬಿಡುವುದಿಲ್ಲ. ಅರ್ಧ ಗಂಟೆಯಲ್ಲೇ ನಲ್ಲಿಯಲ್ಲಿ ನೀರು ನಿಲ್ಲುತ್ತದೆ' ಎಂದು ಶ್ರೀರಾಮನಗರದ ತ್ರಿವೇಣಿ ಅಳಲು ತೋಡಿಕೊಂಡರು.

ಶಾರದಾದೇವಿ ನಗರ ಸ್ಮಾರ್ಟ್ ಸಿಟಿ ಯೋಜನೆಯಡಿ ಆಯ್ಕೆಯಾಗಿದ್ದರೂ ಅಭಿವೃದ್ಧಿ ಮಾತ್ರ ಶೂನ್ಯ. ಎರಡು ರಸ್ತೆಗಳು 15 ವರ್ಷಗಳಿಂದ ಅಧ್ವಾನದ ಸ್ಥಿತಿಯಲ್ಲಿ ಇದ್ದು, ಕನಿಷ್ಠ ಡಾಂಬಾರು ಕಂಡಿಲ್ಲ. ರಸ್ತೆ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದು, ಗುಂಡಿಗಳು ಹೆಚ್ಚಾಗಿವೆ. ಕೆಲವರು ತಮ್ಮ ಮನೆಗಳ ಮುಂದೆ ಮಣ್ಣು ಹಾಕಿ ಗುಂಡಿ ಮುಚ್ಚುತ್ತಿದ್ದಾರೆ.


ಈ ಪ್ರದೇಶದಲ್ಲಿ ಒಂದು ಶುದ್ಧ ಕುಡಿಯುವ ನೀರಿನ ಘಟಕ ಇಲ್ಲ. ಇಲ್ಲಿನ ಜನರು ನೀರಿಗಾಗಿ ಹತ್ತಿರದ ಕುವೆಂಪು ನಗರ, ಹನುಮಂತಪುರದ ಕಡೆಗೆ ಹೋಗುತ್ತಿದ್ದಾರೆ. ಇಲ್ಲಿಯೇ ಘಟಕ ಸ್ಥಾಪಿಸುವಂತೆ ಹಲವು ಬಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸ್ಪಂದನೆ ಸಿಕ್ಕಿಲ್ಲ.

## ನುಡಿದಂತೆ ನಡೆದ ಕಾಂಗ್ರೆಸ್ ಸರ್ಕಾರ: ಶಾಸಕ

• **ಉದಯವಾಹಿನಿ, ಮಂಡ್ಯ**

ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿ ಮಾಡುವ ಮೂಲಕ ನುಡಿದಂತೆ ನಡೆದ ಕಾಂಗ್ರೆಸ್ ಸರ್ಕಾರ ಎಂಬ ಹೆಸರು ಉಳಿಸಿಕೊಂಡು ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದೇವೆ ಎಂದು ಶಾಸಕ ಪಿ.ರವಿಕುಮಾರ್ ಹೇಳಿದರು. ನಗರದ ಗುತ್ತಲು ಬಡಾವಣೆಯಲ್ಲಿರುವ ನ್ಯಾಯಬೆಲೆ ಅಂಗಡಿಯಲ್ಲಿ ಅನ್ನಭಾಗ್ಯ ಯೋಜನೆಯ ಅಕ್ಕಿ ವಿತರಣಾ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ನಮ್ಮ ಸರ್ಕಾರ ಜನರಿಗೆ ಕೊಟ್ಟ ಮಾತನ್ನು ಎಂದಿಗೂ ತಪ್ಪಿಲ್ಲ, ಈ ಹಿಂದೆ ಅಕ್ಕಿಗೆ ಬದಲಾಗಿ ಹಣವನ್ನು ಬಿಪಿಎಲ್ ಮಾಲೀಕರ ಖಾತೆಗೆ ಹಾಕುತ್ತಿದ್ದೆವು. ಈಗ ಇದರ ಬದಲಿಗೆ ಅಕ್ಕಿಯನ್ನೇ ವಿತರಿಸುತ್ತಿದ್ದೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮಹಾರಾಷ್ಟ್ರ ಸರ್ಕಾರ 2,000 ಕೊಡುವುದಾಗಿ ಎಂದು ಚುನಾವಣಾ ಪೂರ್ವದಲ್ಲಿ ಘೋಷಣೆ ಮಾಡಿತ್ತು. ಆದರೆ, ಈಗ 1,000 ಕೊಡುತ್ತಿದೆ. ಆದರೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಚುನಾವಣೆಯಲ್ಲಿ ನೀಡಿದ ಭರವಸೆ


ಉದಯವಾಹಿನಿ ಚಿತ್ರ

ಗಳನ್ನು ಈಡೇರಿದ್ದು, ಫೆಬ್ರುವರಿ ತಿಂಗಳ 5 ಕೆ.ಜಿ. ಅಕ್ಕಿ ಸೇರಿ ಈ ತಿಂಗಳು ಪ್ರತಿಯೊಬ್ಬರಿಗೂ 15 ಕೆ.ಜಿ. ಅಕ್ಕಿ ವಿತರಿಸಲಾಗುತ್ತಿದೆ. ಕನ್ನಡಿಗರು ಹಸಿವಿನಿಂದ ಮಲಗಬಾರದು ಎಂಬ ಉದ್ದೇಶದಿಂದ ಸಿಎಂ ಈ ಯೋಜನೆ ಜಾರಿಗೆ ತಂದಿದ್ದಾರೆ ಎಂದರು.

ತಹಶೀಲ್ದಾರ್ ಶಿವಕುಮಾರ ಬಿರಾದರ, ತಾ.ಪಂ. ಇಒ ವೀಣಾ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಘಟಕದ ಅಧ್ಯಕ್ಷ ಎಚ್.ಕೆ. ರುದ್ರಪ್ಪ, ನಗರಸಭಾ ಸದಸ್ಯರಾದ ಎಚ್.ಎಸ್. ಮಂಜು, ನಯೀಂ, ಶ್ರೀಧರ್, ಸೌಭಾಗ್ಯ, ಗೀತಾ, ಭಾರತೀಶ್, ಪಾಪಣ್ಣ ಭಾಗವಹಿಸಿದ್ದರು.

## 60 ಕೋಟಿ ವೆಚ್ಚದಲ್ಲಿ ಕಾವೇರಿ ಆರತಿಗೆ ಸಿದ್ಧತೆ: ಶಾಸಕ ರಮೇಶ ಬಂಡಿಸಿದ್ದೇಗೌಡ

• **ಉದಯವಾಹಿನಿ, ಶ್ರೀರಂಗಪಟ್ಟಣ**

ತಾಲ್ಲೂಕಿನ ಕೆಆರ್‌ಎಸ್‌ನಲ್ಲಿ ನಿರಂತರವಾಗಿ ಕಾವೇರಿ ಆರತಿ ನಡೆಸುವ ಸಂಬಂಧ ಸಿದ್ಧತಾ ಕಾರ್ಯಗಳು ಕೆಲವೇ ದಿನಗಳಲ್ಲಿ ಆರಂಭವಾಗಲಿವೆ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು. ತಾಲ್ಲೂಕಿನ ಕೆಆರ್‌ಎಸ್ ಗ್ರಾಮದಲ್ಲಿ, 19 ಲಕ್ಷ ವೆಚ್ಚದಲ್ಲಿ ನವೀಕರಿಸಿರುವ ಡಿಸಿಸಿ ಬ್ಯಾಂಕ್ ಶಾಖೆಯ ಕಟ್ಟಡವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

260 ಕೋಟಿ ವೆಚ್ಚದಲ್ಲಿ ಕಾವೇರಿ ಆರತಿ ನಡೆಯುವ ಸ್ಥಳದ ಅಭಿವೃದ್ಧಿ ಮತ್ತು ಆರತಿಯ ಕೈಂಕರ್ಯಗಳಿಗೆ ಸಂಬಂಧಿಸಿದ


ಉದಯವಾಹಿನಿ ಚಿತ್ರ

ಕಾರ್ಯಗಳು ಶೀಘ್ರದಲ್ಲೇ ಆರಂಭವಾಗಲಿವೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಆಸಕ್ತಿ ವಹಿಸಿದ್ದು, ಹಣ ಬಿಡುಗಡೆ ಒಪ್ಪಿಗೆ ಸೂಚಿಸಿದ್ದಾರೆ' ಎಂದು ಹೇಳಿದರು.

'ಕೆಆರ್‌ಎಸ್‌ನಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸುವ ವಿಷಯ ಸಚಿವ ಸಂಪುಟದ ಮುಂದೆ ಚರ್ಚೆಯ ಹಂತದಲ್ಲಿದೆ. ಇದಕ್ಕೆ ಶೀಘ್ರ ಅಂತಿಮ ರೂಪ ಸಿಗಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. 'ಕೆಆರ್‌ಎಸ್‌ನ ಡಿಸಿಸಿ ಬ್ಯಾಂಕ್ ಶಾಖೆ ಉತ್ತಮವಾಗಿ ನಡೆಯುತ್ತಿದೆ. ಚಿನ್ನದ ಮೇಲೆ 16.5 ಕೋಟಿ ಸಾಲ ನೀಡಿದೆ. 40 ಕೋಟಿ ಠೇವಣಿ ಸಂಗ್ರಹಿಸಿದೆ. ಗ್ರಾಹಕರು ಈ ಬ್ಯಾಂಕ್‌ನಲ್ಲಿ ಹೆಚ್ಚಿನ ವಹಿವಾಟು ನಡೆಸಬೇಕು. ಹಾಗಾದರೆ ಈ ಬ್ಯಾಂಕ್ ಮತ್ತಷ್ಟು ಪ್ರಗತಿ ಸಾಧಿಸಲು ಸಾಧ್ಯ ಎಂದರು.

ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್. ಚಂದ್ರಶೇಖರ್ ಮಾತನಾಡಿ, ಕೆಆರ್‌ಎಸ್‌ನ ಡಿಸಿಸಿ ಬ್ಯಾಂಕ್ ಶಾಖೆ ಸದ್ಯ ನೀರಾವರಿ ಇಲಾಖೆಗೆ ಸೇರಿದ ಕಟ್ಟಡಲ್ಲಿ ನಡೆಯುತ್ತಿದೆ. ಆ ಇಲಾಖೆಯ ಅನುಮತಿ ಪಡೆದು ಹಳೆಯ ಕಟ್ಟಡವನ್ನು 9 ಲಕ್ಷ ವೆಚ್ಚದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ.

ಬ್ಯಾಂಕ್‌ಗೆ ಸ್ವಂತ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದ್ದು, ಸೂಕ್ತ ಜಾಗವನ್ನು ಮಂಜೂರು ಮಾಡಿಕೊಡಬೇಕು ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಅವರಲ್ಲಿ ಮನವಿ ಮಾಡಿದರು.

## ವಿದ್ಯಾರ್ಥಿನಿ ಸಾವು: ತನಿಖೆಗೆ ಒತ್ತಾಯ

• **ಉದಯವಾಹಿನಿ, ಶನಿವಾರಸಂತೆ**

ಇಲ್ಲಿನ ಸಮೀಪದ ಕೊಡ್ಲಿಪೇಟೆಯ ಖ್ಯಾತಿ ಗ್ರಾಮದಲ್ಲಿರುವ ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಈಚೆಗೆ ಮೃತಪಟ್ಟ ವಿದ್ಯಾರ್ಥಿನಿ ಪೂರ್ವಿಕಾಗೆ ಕೊಡ್ಲಿಪೇಟೆ ಬಸ್ ನಿಲ್ದಾಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಕೊಡ್ಲಿಪೇಟೆ ಘಟಕದಿಂದ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ವೇಳೆ ಕೊಡ್ಲಿಪೇಟೆ ಕರವೇ ಅಧ್ಯಕ್ಷ ರಾಜೇಶ್ ಮಾತನಾಡಿ, 'ಕೊಡಗು ಜಿಲ್ಲಾಡಳಿತ ತಕ್ಷಣವೇ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ಆರಂಭಿಸಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು. 'ತಕ್ಷಣವೇ ಕೊಡ್ಲಿಪೇಟೆ ಆರೋಗ್ಯ ಕೇಂದ್ರಕ್ಕೆ ಕಾಯಂ ವೈದ್ಯರನ್ನು ನೇಮಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.


ಉದಯವಾಹಿನಿ ಚಿತ್ರ

ನಂತರ ಕೊಡ್ಲಿಪೇಟೆ ಕಂದಾಯ ಇಲಾಖೆಯ ಉಪ ತಹಶೀಲ್ದಾರ್ ಕಚೇರಿಗೆ ತೆರಳಿ ಜಿಲ್ಲಾಧಿಕಾರಿಗೆ ತನಿಖೆ ನಡೆಸಲು, ಕಾಯಂ ವೈದ್ಯರ ನೇಮಿಸಲು ಮನವಿ ಪತ್ರವನ್ನು ನೀಡಲಾಯಿತು.

ಈ ವೇಳೆ ಕರ್ನಾಟಕ ರಕ್ಷಣಾ ವೇದಿಕೆಯ ಉಪಾಧ್ಯಕ್ಷ ಕೆಂಚೇಶ್ವರ, ಮಹಿಳಾ ಉಪಾಧ್ಯಕ್ಷೆ ಶೋಭಾ ಮಂಜುನಾಥ್, ಸಂಘಟನಾ ಸಂಚಾಲಕ ಯೋಗಾನಂದ, ಪದಾಧಿಕಾರಿಗಳಾದ ವೇದಾವತಿ ವೇದ ಕುಮಾರ್, ಧರ್ಮಪ್ಪ, ಮಂಜುನಾಥ್ ವೀರಭದ್ರಪ್ಪ., ಡಿ.ಬಿ ಕೇಶವ ಭಾಗವಹಿಸಿದ್ದರು.

## ಚುರುಕುಗೊಂಡ ತಂಬಾಕು ಕೃಷಿ

• **ಉದಯವಾಹಿನಿ, ಹುಣಸೂರು**

ವರ್ಷದ ಮೊದಲ ಮಳೆ ಅನ್ನದಾತರಲ್ಲಿ ಬೇಸಾಯದ ಹುರುಪು ಮೂಡಿಸಿದ್ದು, ಭೂಮಿ ಹದಗೊಳಿಸಿ ವಾಣಿಜ್ಯ ಬೆಳೆ ತಂಬಾಕು ಸಸಿ ನಾಟಿಗೆ ಭರದ ಸಿದ್ಧತೆ ನಡೆಸಿದ್ದಾರೆ.

ಸೋಮವಾರ 1.8 ಸೆಂ.ಮೀ ಮಳೆಯಾಗಿದ್ದು, ತಂಬಾಕು ಬೆಳೆಗಾರರು ತಂಬಾಕು ಸಸಿ ನರ್ಸರಿ ಮಡಿಯಲ್ಲಿ ಆರೋಗ್ಯ ಸಸಿ ಬೆಳೆಸುವಲ್ಲಿ ತೊಡಗಿದ್ದಾರೆ. ಈ ಸಾಲಿನಲ್ಲಿ 1,200 ಕೆ.ಜಿ. ಬಿತ್ತನೆ ಬೀಜ ಹುಣಸೂರು ತಂಬಾಕು ಸಂಶೋಧನ ಕೇಂದ್ರದಿಂದ ರೈತರು ಖರೀದಿಸಿದ್ದು, ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಶೇ 25ರಷ್ಟು ಹೆಚ್ಚುವರಿ ಬಿತ್ತನ ಬೀಜ ಮಾರಾಟವಾಗಿದೆ ಎಂದು ಹುಣಸೂರು ತಂಬಾಕು ಸಂಶೋಧನ ಕೇಂದ್ರದ ಮುಖ್ಯ ವಿಜ್ಞಾನಿ ರಾಮಕೃಷ್ಣ ತಿಳಿಸಿದರು.


ಉದಯವಾಹಿನಿ ಚಿತ್ರ

**ತಳಿ:** ತಂಬಾಕು ಸಂಶೋಧನ ಕೇಂದ್ರ ಅಭಿವೃದ್ಧಿಪಡಿಸಿರುವ ಹೈಬ್ರಿಡ್ ತಳಿಗಳಾದ ಸಿ.ಎಚ್. 3, ಎಫ್.ಸಿ.ಎಚ್. 222, ಎಫ್.ಸಿ.ಎಚ್. 248 ತಳಿಯಲ್ಲಿ ಹೊಸ ತಳಿ 1345ರ ಬಿತ್ತನೆ ಬೀಜಯನ್ನು ಈಗಾಗಲೇ 5 ಸಾವಿರ ರೈತರು ಖರೀದಿಸಿದ್ದಾರೆ. ಇದರ ನಂತರದಲ್ಲಿ ಎಫ್.ಸಿ.ಎಚ್. 248 ತಳಿ 2 ಸಾವಿರ ರೈತರು ಬೆಳೆಯಲು ಮುಂದಾಗಿದ್ದಾರೆ. ನಂತರದಲ್ಲಿ ಎಫ್.ಸಿ.ಎಚ್. 222, ಸಿ.ಎಚ್. 3 ತಳಿ ಬೆಳೆಯಲು ಆಸಕ್ತಿ ತೋರಿದ್ದಾರೆ.

**ಹೊಸ ತಳಿ:** ಹೊಸದಾಗಿ ಅಭಿವೃದ್ಧಿಪಡಿಸಿರುವ 1345 ತಳಿ ತಂಬಾಕಿನಲ್ಲಿ ಪ್ರತಿ ಗಿಡದಲ್ಲಿ ಕನಿಷ್ಠ 30 ಎಲೆ ಬರಲಿದ್ದು ಪ್ರತಿಯೊಂದು ಎಲೆಯೂ ಗೋಲ್ಡ್ ಬಣ್ಣ ಹೊಂದಿರಲಿದೆ. ಸಾಮಾನ್ಯ ಗುಣಮಟ್ಟದಿಂದ ಕೂಡಿರುವುದರಿಂದ ಮಾರುಕಟ್ಟೆಯಲ್ಲಿ ರೈತನಿಗೆ ನಷ್ಟ ಇರುವುದಿಲ್ಲ ಎನ್ನುವರು ಕೇಂದ್ರದ ವಿಜ್ಞಾನಿ.

**ರೋಗಬಾಧೆ:** ರೈತ ಬೆಳೆಸಿರುವ ನರ್ಸರಿಯಲ್ಲಿ ರೋಗ ಕಾಣಿಸಿಕೊಂಡಿದ್ದು, ನಿರ್ವಹಣೆಗೆ ರೈಡೋಮಿಲ್ ಗೋಲ್ಡ್ ಅಥವಾ ಮಟ್ಕ 30 ಗ್ರಾಂ ಪ್ರತಿ 15 ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಸಿ ಮಡಿಗೆ ಸಿಂಪಡಿಸಬೇಕು.

ಟ್ರೇ ಪದ್ಧತಿಯಲ್ಲಿ ಸಸಿ ಬೆಳೆಸುವ ಮುನ್ನ ಮಡಿಯಲ್ಲಿ ಆರೋಗ್ಯ ಸಸಿ ಆಯ್ಕೆ ಅತಿಮುಖ್ಯ. ಬಿಸಿಲಿನ ಝಳದಲ್ಲಿ ಸಸಿ ಟ್ರೇಗೆ ವರ್ಗಾಯಿಸುವುದರಿಂದ ಗಂಟು ರೋಗ ಕಾಣಿಸಿಕೊಳ್ಳಲಿದೆ. ನಿಯಂತ್ರಿಸಲು ಕೋಕೊ ಪಿಟ್ ಸಾವಯವ ಗೊಬ್ಬರಕ್ಕೆ ವ್ಯಾಲಂ ಪ್ರೈಂ ಔಷಧಿ 5 ಎಂ.ಎಲ್. 10 ಲೀಟರ್ ನೀರಿಗೆ ಮಿಶ್ರಣ ಮಾಡಿ ಸಿಂಪಡಣೆ ಮಾಡುವುದು ಅಗತ್ಯವಾಗಿದೆ.

ಕಾಂಡ ಕೊರೆಯುವ ಮತ್ತು ಹಸಿರು ಹುಳ ರೋಗ ಕಾಣಿಸಿದಲ್ಲಿ ಕೊರಾಜಿನ್ ಅಥವಾ ಎಮಾಮೆಕ್ಸಿನ್ ಬೆಂಜೊಯೇಟ್ 5 ಗ್ರಾಂ ಅನ್ನು ನೀರಿಗೆ ಬೆರೆಸಿ ಸಿಂಪಡಿಸಬೇಕು ಎಂದು ಸಲಹೆ ನೀಡಿದ್ದಾರೆ.




## ಮಿನಿ ನ್ಯೂಸ್

### ನಾಮಪತ್ರ ಸಲ್ಲಿಕೆ ವಿಚಾರ: ಕೈ, ಕಮಲ ಮುಖಂಡರ ನಡುವೆ ವಾಗ್ವಾದ

• **ಉದಯವಾಹಿನಿ, ಕನಕಪುರ**

ಇಲ್ಲಿನ ಪಿಎಲ್‌ಡಿ ಬ್ಯಾಂಕ್ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಕೆ ವಿಚಾರವಾಗಿ ಬಿಜೆಪಿ, ಕಾಂಗ್ರೆಸ್ ಮುಖಂಡರ ನಡುವೆ ಮಂಗಳವಾರ ವಾಗ್ವಾದ ನಡೆಯಿತು. ಕನಕಪುರ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ, ಗ್ರಾಮೀಣ ಅಭಿವೃದ್ಧಿ (ಪಿಎಲ್‌ಡಿ) ಬ್ಯಾಂಕ್‌ನ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿತ್ತು. ಬಿಜೆಪಿ ಮುಖಂಡರು ನಾಮಪತ್ರ ಸಲ್ಲಿಕೆಗೆ ಪಿಎಲ್‌ಡಿ ಬ್ಯಾಂಕಿಗೆ ಬಂದಿದ್ದಾರೆ. ಆ ವೇಳೆಗೆ ನಾಮಪತ್ರ ಸಲ್ಲಿಕೆಯ ಸಮಯ ಮುಕ್ತಾಯವಾಗಿದ್ದು, ನಾಮಪತ್ರ ಸ್ವೀಕರಿಸಲು ಸಾಧ್ಯವಿಲ್ಲವೆಂದು ನಿರಾಕರಿಸಿದ್ದು, ಕಾಂಗ್ರೆಸ್, ಬಿಜೆಪಿ ಮುಖಂಡರ ವಾಗ್ವಾದಕ್ಕೆ ಕಾರಣವಾಗಿದೆ. 3 ಗಂಟೆಗೆ ನಾಮಪತ್ರ ಸಲ್ಲಿಕೆಗೆ ಸಮಯ ಮುಗಿದಿದ್ದು, ಯಾರ ನಾಮಪತ್ರವನ್ನು ಸ್ವೀಕರಿಸಬಾರದು ಎಂಬುದು ಕಾಂಗ್ರೆಸ್ ಮುಖಂಡರ ಆಗ್ರಹ. ಎರಡು ಕಡೆಯವರ ವಾದ ವಿವಾದ ಗಳಿಂದ ಸ್ವಲ್ಪ ಸಮಯ ಬ್ಯಾಂಕಿನಲ್ಲಿ ಗೊಂದಲವಾಗಿತ್ತು. ನಂತರ ಚುನಾವಣಾಧಿಕಾರಿ ಆಶಾ ನಾಮಪತ್ರ ಸ್ವೀಕರಿಸದೆ ನಿರಾಕರಿಸಿದರು. ಕಾಂಗ್ರೆಸ್ ಮುಖಂಡರು ದುರುದ್ದೇಶದಿಂದ ನಮ್ಮ ನಾಮಪತ್ರ ಸಲ್ಲಿಸದಂತೆ ಅಧಿಕಾರಿಗಳ ಮೂಲಕ ತಡೆ ಮಾಡಿದ್ದಾರೆ ಎಂದು ನಾಮಪತ್ರ ಸಲ್ಲಿಸಲು ಬಂದಿದ್ದಂತಹ ಬಿಜೆಪಿ ಮುಖಂಡರು ಆರೋಪಿಸಿದ್ದಾರೆ.

### ಅಪಘಾತ: ಹಿಂಬದಿ ಕುಳಿತಿದ್ದ ಮಹಿಳೆ ಸಾವು

• **ಉದಯವಾಹಿನಿ, ಮುಳಬಾಗಿಲು**

ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನದಲ್ಲಿದ್ದ ಮಹಿಳೆ ರಾಷ್ಟ್ರೀಯ ಹೆದ್ದಾರಿ 75ರ ಮೇಲೇತುವೆಯ ಮೇಲಿಂದ ಕೆಳಗೆ ಬಿದ್ದು ಸಾವನ್ನಪ್ಪಿರುವ ಘಟನೆ ಮಂಗಳವಾರ ಮುಂಜಾನೆ ನಡೆದಿದೆ. ತಾಲ್ಲೂಕಿನ ತೊಂಡಹಳ್ಳಿ ಗ್ರಾಮದ ಸುಮಮ್ಮ (45) ಮೃತ ಮಹಿಳೆ. ಪತಿ ಭಾಸ್ಕರ್ ಎಂಬುವವರ ಜೊತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಕೋಲಾರ ಕಡೆಯಿಂದ ಸ್ವಗ್ರಾಮದ ಕಡೆಗೆ ಬರುವಾಗ ಸೊಣ್ಣವಾಡಿ ಮೇಲೇತುವೆ ಮೇಲೆ ಘಟನೆ ನಡೆದಿದೆ. ದ್ವಿಚಕ್ರ ವಾಹನ ಸವಾರ ಭಾಸ್ಕರ್ ಅವರಿಗೂ ಗಂಭೀರ ಗಾಯಗಳಾಗಿ ಕೋಲಾರ ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಾಳು ಭಾಸ್ಕರ್, ಪತ್ನಿ ಸುಮಮ್ಮ ಕೋಲಾರ ಸಮೀಪದ ಸಂಬಂಧಿಕರ ಮನೆಗೆ ಹೋಗಿ ಬೆಳಗ್ಗೆ ತಮ್ಮ ಗ್ರಾಮಕ್ಕೆ ಮರಳುತ್ತಿದ್ದರು. ದ್ವಿಚಕ್ರ ವಾಹನಕ್ಕೆ ಕಾರು ಅಡ್ಡ ಬಂದಿದೆ. ಏಕಾಏಕಿ ಬ್ರೇಕ್ ಹಾಕಿ ದಾಗ ಹಿಂಬದಿಯಲ್ಲಿದ್ದ ಸುಮಮ್ಮ ಸೇತುವೆಯ ಮೇಲಿಂದ ಕೆಳಗೆ ಬಿದ್ದು ಸಾವನ್ನಪ್ಪಿದರೆ, ಭಾಸ್ಕರ್ ಸೇತುವೆಯ ಮೇಲೆಯೇ ರಸ್ತೆಯಲ್ಲಿ ಬಿದ್ದು ಗಾಯಗೊಂಡಿದ್ದಾರೆ ಎಂದು ಸಂಬಂಧಿಕರು ತಿಳಿಸಿದರು. ಮೃತರಿಗೆ ಪತಿ, ಮಗಳು ಹಾಗೂ ಮಗ ಇದ್ದಾರೆ. ಮುಳಬಾಗಿಲು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಲಕ್ಷ್ಮೀದೇವಿ ಅಗ್ನಿಕೊಂಡ ಮಹೋತ್ಸವ

• **ಉದಯವಾಹಿನಿ, ಕುದೂರು**

ಗ್ರಾಮದ ಲಕ್ಷ್ಮೀದೇವಿ ಅಗ್ನಿಕೊಂಡ ಮಹೋತ್ಸವ ಮಾರ್ಚ್ 24 ರಂದು ನಡೆಯಲಿದೆ ಎಂದು ಲಕ್ಷ್ಮೀದೇವಿ ಉತ್ಸವ ಸಮಿತಿ ಅಧ್ಯಕ್ಷ ಕೆ.ಆರ್. ಯತಿರಾಜು ತಿಳಿಸಿದ್ದಾರೆ. ಮಾರ್ಚ್ 22 ರಂದು ಸಂಜೆ 4.30ಕ್ಕೆ ಸೌದೆ ತುಂಬಿದ ಎತ್ತಿನ ಗಾಡಿಗಳ ಮೆರವಣಿಗೆ, ರಾತ್ರಿ 10ಕ್ಕೆ ದಾಸಪ್ಪನಪಾಳ್ಯ ಗ್ರಾಮಸ್ಥರಿಂದ ಗಂಗೆಪೂಜೆ, ಮಡಲಕ್ಕಿ ಸೇವೆ ನಡೆಯಲಿದೆ. ಮಾರ್ಚ್ 23 ರಂದು ರಾತ್ರಿ 8.30ಕ್ಕೆ ಗ್ರಾಮಸ್ಥರಿಂದ ಉಪ್ಪಾರಸೇವೆ ಮತ್ತು ಅಗ್ನಿವಂಶ ಕ್ಷತ್ರಿಯರಿಂದ ಅಗ್ನಿಕೊಂಡ ನಿರ್ಮಾಣ ನಡೆಯಲಿದೆ. 24 ರಂದು ಬೆಳಿಗ್ಗೆ 10.20ಕ್ಕೆ ಅಗ್ನಿಕುಂಡಕ್ಕೆ ಮಹಾಮಂಗಳರಾತಿ ಮತ್ತು ಅಗ್ನಿಸ್ಪರ್ಶ ನಡೆಯಲಿದೆ.

## ಹೊಸ ತಂತ್ರಜ್ಞಾನದ ಆವಿಷ್ಕಾರದತ್ತ ದಾಪುಗಾಲಿಡಿ

• **ಉದಯವಾಹಿನಿ, ಕುಶಾಲನಗರ**

ಇಂದಿನ ವಿದ್ಯಾರ್ಥಿ ಯುವ ಸಮೂಹ ಹೊಸ ಹೊಸ ತಂತ್ರಜ್ಞಾನ ಆವಿಷ್ಕಾರದತ್ತ ದಾಪುಗಾಲಿಡಬೇಕು ಎಂದು ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ತಜ್ಞ ಡಾ. ಉದಯಶಂಕರ್ ಪುರಾಣಿಕ್ ಸಲಹೆ ನೀಡಿದರು.

ಕೊಡಗು ವಿಶ್ವವಿದ್ಯಾಲಯದಲ್ಲಿ ಎರಡು ದಿನಗಳ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಗಳವಾರ ಅವರು ಕೃತಕ ಬುದ್ಧಿಮತ್ತೆ ಮಹತ್ವದ ಕುರಿತು ಉಪನ್ಯಾಸ ನೀಡಿದರು.

ವಿಶ್ವಮಟ್ಟದಲ್ಲಿ ಕೃತಕ ಬುದ್ಧಿಮತ್ತೆಗೆ ಭಾರತಕ್ಕೆ ಇರುವ ಮಹತ್ವ ಹಾಗೂ ಮನ್ನಣೆ ಬೇರಾವ ದೇಶಕ್ಕೂ ಇಲ್ಲ ಹಾಗಾಗಿ ದೇಶದ ಯುವ ಸಮೂಹ ಭವಿಷ್ಯದ ಬಗ್ಗೆ ಯಾವುದೇ ಆತಂಕ ಪಡದೇ ಉದ್ಯೋಗಗಳ ಕೌಶಲ್ಯದ ಕುರಿತು ಹೆಚ್ಚು ಆಸಕ್ತರಾಗಬೇಕು ಎಂದು ತಿಳಿಸಿದರು. ಗ್ರಾಮೀಣ ಪ್ರದೇಶದ ಸಾಮಾನ್ಯ ರೈತನೂ ಬಳಸುವ ಮೊಬೈಲ್‌ಗೆ ಪ್ರಸಕ್ತ ಸನ್ನಿವೇಶಗಳ ಆಧುನಿಕ ತಂತ್ರಜ್ಞಾನದ ಮಾಹಿತಿ ಲಭಿಸಬೇಕು. ಆ ಮೂಲಕ ಕೃಷಿಕನಿಗೆ ಮಳೆ, ಬೆಳೆ, ಹವಾಮಾನಗಳ ಪೂರ್ಣ ಚಿತ್ರಣ ಲಭಿಸುವಂತಾಗಬೇಕು. ಈ ನಿಟ್ಟಿನಲ್ಲಿ ಇಂದಿನ ವಿದ್ಯಾರ್ಥಿ ಯುವ ಸಮೂಹ ಹೊಸ ಹೊಸ ತಂತ್ರಜ್ಞಾನ ಆವಿಷ್ಕಾರದತ್ತ ಗಮನ ಹರಿಸಬೇಕು ಎಂದು ಸಲಹೆ ಹೇಳಿದರು. ಯಾವುದೇ ಉದ್ಯೋಗ ಅಥವಾ ಕಲಿಕೆಯಲ್ಲಿ ಆಸಕ್ತಿ ಮುಖ್ಯ. ವಿಶ್ವವಿದ್ಯಾಲಯಗಳು ಹಾಗೂ ಸಾಧಕರು ಜೀವನಕ್ಕೆ ದಾರಿ ತೋರಿಸಬಹುದು. ಆದರೆ, ತಮ್ಮ ಉಜ್ವಲ ಭವಿಷ್ಯವನ್ನು ತಾವೇ ಕಟ್ಟಿಕೊಳ್ಳಬೇಕು. ಹಳ್ಳಿಗಾಡುಗಳಲ್ಲಿ ಎಂತಹ ಸಾಮಾನ್ಯರು ಕೂಡ ಅತೀ ಅವಶ್ಯವಿರುವ 'ಯುಪಿಐ' ಬಳಸುವುದನ್ನು ಕಲಿತಷ್ಟೇ ಆಸಕ್ತಿಯಿಂದ ಇನ್ನಿತರ ಕೌಶಲ್ಯಗಳಲ್ಲಿ ಪ್ರಾವೀಣ್ಯತೆ ಸಾಧಿಸಬೇಕು ಎಂದರು. 4 ಕೋಟಿಯಷ್ಟು ಉದ್ಯೋಗಗಳನ್ನು ಒದಗಿಸಿರುವ ಭಾರತ ದೇಶ ಜಗತ್ತಿನ ಮೂರನೇ ದೇಶವಾಗಿದ್ದು, ಲಕ್ಷಾಂತರ ಕೋಟಿ ರೂಗಳ ಹೂಡಿಕೆಯಾಗುತ್ತಿದೆ. ಸೈಬರ್


ಉದಯವಾಹಿನಿ ಚಿತ್ರ

**ದಶಕಗಳ ಹಿಂದೆ ನಮ್ಮ ಹಣ ನಾವು ಪಡೆಯೋಕೆ ಸಾಲಾಗಿ ಬ್ಯಾಂಕುಗಳಲ್ಲಿ ನಿಲ್ಲುತ್ತಿದ್ದೆವು. ಆದರೆ, ಇಂದು ಮೊಬೈಲ್‌ಗಳೇ ಬ್ಯಾಂಕ್‌ಗಳಾಗಿವೆ. ಆದ್ದರಿಂದ ಕೇಂದ್ರ ಸರ್ಕಾರ ಉಚಿತವಾಗಿ ನೀಡಿರುವ ಸ್ವಯಂ ವೆಬ್‌ಸೈಟ್ ಅನ್ನು ಹೆಚ್ಚಾಗಿ ಬಳಸುವ ಮೂಲಕ ತಮಗೆ ಬಿಡುವಿನ ಸಮಯದಲ್ಲಿ ತಮಗೆ ಸಾಧ್ಯ ಹಾಗೂ ಸರಳ ಎನಿಸುವ ಯಾವುದೇ ಕೌಶಲ್ಯಗಳತ್ತ ತೊಡಗಿಸಿಕೊಳ್ಳಲು ಒತ್ತು ಎಂದು ಡಾ.ಪುರಾಣಿಕ್ ಹೇಳಿದರು.**

ಸೆಕ್ಯೂರಿಟಿಯಲ್ಲಿ 50 ಲಕ್ಷ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಗಿಟ್ಟಿಸಲು ಯಾವುದೇ ವಿದ್ಯಾಭ್ಯಾಸ ಅಥವಾ ಏನೂ ಇಲ್ಲದೆಯೇ ಎಲ್ಲಾವನ್ನು ಕೇವಲ ಕೌಶಲದಿಂದ ಪಡೆದುಕೊಳ್ಳಬೇಕು ಎಂದರು.

ಈ ವೇಳೆ ಕೊಡಗು ವಿಶ್ವವಿದ್ಯಾಲಯದ ಕುಲಪತಿ ಡಾ.ಅಶೋಕ್ ಸಂಗಪ್ಪ ಆಲೂರ, ಚಾಮರಾಜನಗರ ವಿಶ್ವವಿದ್ಯಾಲಯದ ಡಾ. ಎಂ.ಆರ್.ಗಂಗಾಧರ್, ಹಾಸನ ವಿಶ್ವವಿದ್ಯಾಲಯದ ಕುಲಪತಿ ಡಾ.ತರೀಕೆರೆ ತಾರಾನಾಥ್, ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಸುರೇಶ್ ಎಚ್.ಜಂಗಮಶೆಟ್ಟಿ, ಬೆಂಗಳೂರಿನ ಉದ್ಯಮ ಸಂಸ್ಥೆಯ ಮುಖ್ಯಸ್ಥ ಬಿ.ಪಿ.ವೆಂಕಟೇಶ ಮೂರ್ತಿ, ನಾಗಪುರದ ಐಐಎಂ ಸಂಸ್ಥೆಯ ಡಾ.ಒ.ಪಿ.ಗೋಯಲ್ ಉಪನ್ಯಾಸ ನೀಡಿದರು.

# ಬೇಸಿಗೆಯಲ್ಲೇ ಜೇನಿನ ಹೊಸ ಹೊಸ ಕುಟುಂಬಗಳು ಸೃಷ್ಟಿ


### ಜೇನು ಹುಳಗಳ ತಂಟೆಗೆ ಹೋಗದಿರುವುದೇ ಉತ್ತಮ ಜೇನಿನೊಂದಿಗೆ ಬೇಕಿದೆ ಮನುಷ್ಯರ ಸಹಬಾಳ್ವೆ

• **ಉದಯವಾಹಿನಿ, ಮಡಿಕೇರಿ**

ಕೊಡಗು ಜಿಲ್ಲೆಯಲ್ಲಿ ಈಚೆಗೆ ಜೇನ್ನೊಣಗಳ ದಾಳಿಗೆ ಸಿಲುಕಿ ವಿರಾಜಪೇಟೆ ತಾಲ್ಲೂಕಿನ ಕಡಂಗ ಅರಪಟ್ಟು ಸಮೀಪದ ಪೊದ್ದುಮಾಣಿ ಎಂಬಲ್ಲಿ ಕಾರ್ಮಿಕರೊಬ್ಬರು ಮೃತಪಟ್ಟಿದ್ದರು. ಈಚೆಗೆ ವಿರಾಜಪೇಟೆ ಸಮೀಪದ ಅಮ್ಮತ್ತಿ ಒಂಟಿಯಂಗಡಿಯ ಬೈರಂಬಾಡದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರ ಮೇಲೆ ಜೇನ್ನೊಣಗಳು ಎರಗಿ ಗಾಯಗೊಳಿಸಿದ್ದವು. ಸುಮಾರು 19 ವಿದ್ಯಾರ್ಥಿಗಳು ಹಾಗೂ ಇಬ್ಬರು ಶಿಕ್ಷಕರು ಗಾಯಗೊಂಡಿದ್ದರು. ಪಾಲಿಬೆಟ್ಟದ ಶಾಲೆಯ 1 ಮತ್ತು 2ನೇ ತರಗತಿಗಳ ವಿದ್ಯಾರ್ಥಿಗಳಿಗೂ ಜೇನ್ನೊಣಗಳು ಚುಚ್ಚಿದ್ದವು. ಸಾಮಾನ್ಯವಾಗಿ ಬೇಸಿಗೆಯ ಬಿಸಿಲನ್ನು ತಾಳಲಾರದೇ ಜೇನ್ನೊಣಗಳು ಗೂಡಿನಿಂದ ಹೊರಬಂದು ಗಾಯ ಗೊಳಿಸುತ್ತವೆ ಎಂಬ ನಂಬಿಕೆ ಸಾರ್ವಜನಿಕರಲ್ಲಿದೆ. ಆದರೆ, ಬೇಸಿಗೆಯ ಬಿಸಿಲಿಗೆ ಜೇನ್ನೊಣಗಳು ದಾಳಿ ನಡೆಸುತ್ತವೆ ಎಂಬುದರ ಬಗ್ಗೆ ಯಾವುದೇ ವೈಜ್ಞಾನಿಕ ಸಾಕ್ಷಾಧಾರಗಳಿಲ್ಲ ಎಂದು ಕೀಟವಿಜ್ಞಾನಿಗಳು ಹೇಳುತ್ತಾರೆ.

ಆದರೆ, ಬೇಸಿಗೆಯಲ್ಲೇ ಜೇನಿನ ಹೊಸ ಹೊಸ ಕುಟುಂಬಗಳು ಸೃಷ್ಟಿಯಾಗುತ್ತವೆ. ಅದಕ್ಕಾಗಿ ಅವು ಹಾರಾಡುತ್ತವೆ. ಇದಕ್ಕೂ ಮಿಗಿಲಾದ ವಿಚಾರ ಎಂದರೆ, ಬೇಸಿಗೆಯಲ್ಲಿ ಆಹಾರ ಸಂಗ್ರಹಿಸುವ ವಯಸ್ಸಾದ ಕೆಲಸಗಾರ ಜೇನು ಹುಳಗಳು ಬಿಸಿಲಿರುವುದರಿಂದ ಆಹಾರ ಸಂಗ್ರಹಿಸಲು ಹೋಗದೇ ಗೂಡಲ್ಲೇ ಇರುತ್ತವೆ. ಇಂತಹ ಹುಳಗಳಿಗೆ ಸ್ವಲ್ಪ ತೊಂದರೆಯಾದರೂ ಸಿಟ್ಟಿಗೇಳುತ್ತವೆ. ಹಾಗಾಗಿ, ಇವು ದಾಳಿ ನಡೆಸಲು ತೊಡಗುತ್ತವೆ ಎಂದು ಪೊನ್ನಂಪೇಟೆಯ ಅರಣ್ಯ ಮಹಾವಿದ್ಯಾಲಯದ ಅರಣ್ಯಜೀವ ಶಾಸ್ತ್ರ ಮತ್ತು ವೃಕಾಭಿವೃದ್ಧಿ ವಿಭಾಗದ ಮುಖ್ಯಸ್ಥ ಹಾಗೂ ಕೀಟಶಾಸ್ತ್ರದ ಪ್ರಾಧ್ಯಾಪಕ ಡಾ.ಆರ್.ಎನ್.ಕೆಂಚಾರೆಡ್ಡಿ ಹೇಳುತ್ತಾರೆ. ಯಾವ ಕಾರಣಕ್ಕಾದರೂ ಸರಿ ತೊಂದರೆಯಾದಾಗ, ಬೇಸಿಗೆಯಲ್ಲಿ


ಉದಯವಾಹಿನಿ ಚಿತ್ರ



**ಜೇನು ಹುಳುಗಳು ಸುಮ್ಮನೇ ಸಿಟ್ಟಿಗೇಳುವುದಿಲ್ಲ ಕಾರಣವಿಲ್ಲದೇ ದಾಳಿ ಮಾಡುವುದಿಲ್ಲ. ತೊಂದರೆಯಾದಾಗ ಮಾತ್ರ ದಾಳಿ ಮಾಡುವ ಸಾಧ್ಯತೆ ಇರುತ್ತದೆ**

**-ಡಾ. ಆರ್.ಎನ್.ಕೆಂಚಾರೆಡ್ಡಿ**
**ಕೀಟಶಾಸ್ತ್ರ ಪ್ರಾಧ್ಯಾಪಕ**

ಜೇನ್ನೊಣಗಳು ಕೋಪೋದ್ರಿಕ್ತಗೊಂಡು ದಾಳಿ ನಡೆಸುವ ಸಾಧ್ಯತೆ ಅಧಿಕ ಇದೆ ಎಂಬುದನ್ನು ಇತ್ತೀಚಿನ ಘಟನೆಗಳು ಸಾಬೀತುಪಡಿಸುತ್ತವೆ. ತೋಟದಲ್ಲಿ ಕಾರ್ಮಿಕರೊಬ್ಬರು ಮೃತಪಟ್ಟರೆ, ಶಾಲಾ ಮಕ್ಕಳು ಗಾಯಗೊಂಡಿದ್ದಾರೆ. ಇಂತಹ ಘಟನೆಗಳು ನಡೆಯದಂತೆ ಮಾಡಲು ಇರುವ ಏಕೈಕ ದಾರಿ ಎಂದರೆ ಮುಂಜಾಗ್ರತೆ.

ಮುಖ್ಯವಾಗಿ, ತೋಟಗಳಲ್ಲಿ ಕೆಲಸ ಮಾಡುವವರು ಯಾವಾಗಲೂ ದಪ್ಪವಾದ ಶಾಲು ಇಲ್ಲವೇ ಕಂಬಳಿಯನ್ನು ತಮ್ಮ ಜೊತೆ ಇಟ್ಟುಕೊಂಡಿರುವುದು ಒಳಿತು. ತೋಟದಲ್ಲಿ ಯಾವುದೇ ಸಂದರ್ಭದಲ್ಲಿ ಜೇನ್ನೊಣಗಳು ದಾಳಿ ಮಾಡಿದರೂ ಕಂಬಳಿಯಿಂದ ರಕ್ಷಿಸಿಕೊಳ್ಳಬಹುದು.

**ಇದು ಜೇನು ಹುಳಗಳಿಗೆ ಸುಗ್ಗಿಯ ಕಾಲ**

**ಬೇಸಿಗೆ ಸಾಮಾನ್ಯವಾಗಿ ಜೇನು ಹುಳಗಳಿಗೆ ಸುಗ್ಗಿಯ ಕಾಲ ಎಂದು ಪೊನ್ನಂಪೇಟೆಯ ಅರಣ್ಯ ಮಹಾವಿದ್ಯಾಲಯದ ಅರಣ್ಯಜೀವ ಶಾಸ್ತ್ರ ವೃಕ್ಷಾಭಿವೃದ್ಧಿ ವಿಭಾಗದ ಮುಖ್ಯಸ್ಥ ಹಾಗೂ ಕೀಟಶಾಸ್ತ್ರದ ಪ್ರಾಧ್ಯಾಪಕ ಡಾ.ಆರ್.ಎನ್.ಕೆಂಚಾರೆಡ್ಡಿ ಹೇಳುತ್ತಾರೆ. ಬೇಸಿಗೆಯಲ್ಲಿ ಎಲ್ಲೆಂದರಲ್ಲಿ ಕಾಡು ಹೂಗಳು ಹೆಚ್ಚಾಗಿ ಅರಳಿರುತ್ತವೆ. ಕಾಫಿ ಹೂ ಸಹ ಇದೇ ಸಮಯದಲ್ಲಿ ಅರಳುತ್ತದೆ. ಕೆಲವೊಂದು ಪ್ರಭೇದದ ಮರಗಳ ತುಂಬೆಲ್ಲ ಹೂಗಳೇ ಅರಳಿರುತ್ತವೆ. ಇದರಿಂದ ಹೆಚ್ಚು ಮಕರಂದ ಹುಳಗಳಿಗೆ ಸಿಗುತ್ತದೆ. ಹಾಗಾಗಿ ಬೇಸಿಗೆ ಜೇನು ಹುಳಗಳ ಪಾಲಿಗೆ ಸುಗ್ಗಿಯ ಕಾಲ. ಜೇನುಗೂಡಿನಲ್ಲಿರುವ ರಾಣಿ ಜೇನು ಸಾಮಾನ್ಯವಾಗಿ 3ರಿಂದ 5 ವರ್ಷಗಳ ಕಾಲ 'ಕೆಲಸಗಾರ ಜೇನು ಹುಳ'ಗಳು 2ರಿಂದ 6 ತಿಂಗಳ ಕಾಲ ಹಾಗೂ ಗಂಡು ನೊಣಗಳು 40ರಿಂದ 45 ದಿನಗಳ ಬದುಕುತ್ತವೆ ಎಂದು ಅವರು ವಿವರಿಸುತ್ತಾರೆ.**



ಕಾಡಂಚಿನ ಶಾಲೆಗಳಲ್ಲಿ ಹಾಗೂ ಜೇನು ದಾಳಿ ಸಾಂಭವ್ಯ ಪ್ರದೇಶದ ಶಾಲೆಗಳಲ್ಲಿ, ಮನೆಗಳಲ್ಲಿ ತಕ್ಷಣಕ್ಕೆ ಬೆಂಕಿ ಹಾಕುವ ಅಥವಾ ಹೊಗೆ ಹಾಕುವ ಪರಿಕರಗಳನ್ನು ಸನ್ನದ್ಧ ಸ್ಥಿತಿಯಲ್ಲಿರಿಸಿಕೊಂಡಿರುವುದು ಒಳ್ಳೆಯದು. ಎಲ್ಲಿಂದಲಾದರೂ ಜೇನ್ನೊಣಗಳು ದಾಳಿ ಇಟ್ಟರೆ ಕೂಡಲೇ ಬೆಂಕಿ ಹಾಕಿ ಹೊಗೆ ಹಾಕಿದರೆ ಸಾಂಭವ್ಯ ದಾಳಿಯಿಂದ ಪಾರಾಗಬಹುದು ಎಂದು ತಜ್ಞರು ಸಲಹೆ ನೀಡುತ್ತಾರೆ. ಸದ್ಯ, ಕೊಡಗಿನಲ್ಲಿ ಹೆಚ್ಚೇನು, ಮೂಳಿ ಜೇನು, ತುಡುವೆ ಜೇನು, ಕೋಲು ಜೇನುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ಜೇನುಗೂಡುಗಳ ಸಂಖ್ಯೆ ಇಳಿಕೆಯಾಗುತ್ತಿದೆ. ಇದಕ್ಕೆ ಅತಿಯಾಗಿ ಬಳಕೆ ಮಾಡುವ ರಾಸಾಯನಿಕಗಳು ಬಹು ಮುಖ್ಯವಾದ ಕಾರಣವಾಗಿವೆ. ರಾಸಾಯನಿಕ ಗೊಬ್ಬರಗಳನ್ನು, ಕೀಟ ನಾಶಕಗಳನ್ನು ಸಿಂಪಡಿಸುವ ವೇಳೆ ಹೊರಹೊಮ್ಮುವ ಅತಿಯಾದ ವಾಸನೆಯಿಂದ ಅವು ವಾಸ ಮಾಡುವುದು ಕಷ್ಟಸಾಧ್ಯವಾಗುತ್ತದೆ.

ಜೇನು ಹುಳಗಳನ್ನು ಕೊಲ್ಲದೇ ಸ್ಥಳಾಂತರಿಸಿ ಒಂದು ವೇಳೆ ಶಾಲೆಗಳ ಬಳಿ ಜನನಿಬಿಡ ಪ್ರದೇಶಗಳಲ್ಲಿ ಜೇನುಗೂಡುಗಳಿದ್ದರೆ ಅವುಗಳಿಗೆ ಕೀಟನಾಶಕಗಳನ್ನು ಸಿಂಪಡಿಸಿ ಕೊಲ್ಲಬಾರದು. ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿರುವ ಜೀವವೈವಿಧ್ಯತೆ ಇದರಿಂದ ಮತ್ತಷ್ಟು ಕಡಿಮೆಯಾಗಲಿದೆ. ಹಾಗೂ ಬೆಳೆಗಳ ಇಳುವರಿಯೂ ಕಡಿಮೆಯಾಗುತ್ತದೆ. ಹಾಗಾಗಿ ಜನರು ಜೇನಿನೊಂದಿಗೆ ಸಹಬಾಳ್ವೆ ಮಾಡಲೇಬೇಕಿದೆ. ಹಾಗೆಂದು ಶಾಲಾ ಮಕ್ಕಳಿರುವ ಕಡೆ ವಯಸ್ಸಾದವರು ಓಡಾಡುವ ಕಡೆ ಆಸ್ಪತ್ರೆ ಸೇರಿದಂತೆ ಇತರೆ ಸೂಕ್ಷ್ಮ ಸ್ಥಳಗಳಲ್ಲಿ ಜೇನುಗೂಡುಗಳಿದ್ದರೆ ಮುಂಜಾಗ್ರತಾ ಕ್ರಮವಾಗಿ ಅವುಗಳನ್ನು ಜೀವಂತವಾಗಿಯೇ ಬೇರೆಡೆಗೆ ಸ್ಥಳಾಂತರಿಸಬೇಕಿದೆ. ಈ ರೀತಿ ಮಾಡುವುದರಿಂದ ಜೇನು ಹುಳಗಳ ಸಾಮೂಹಿಕ ಹನನವನ್ನು ತಪ್ಪಿಸಬಹುದು.

# ಅಂತರಾಳದಿಂದ.. EDITORIAL

# ಗಾಳಿಯ ಮಾಲಿನ್ಯ ತಡೆಗೆ ತುರ್ತು ಕ್ರಮ ಅಗತ್ಯ



ಸ್ವಿಟ್ಜರ್‌ಲೆಂಡ್‌ನ 'ಐಕ್ಯುಏರ್' ಸಂಸ್ಥೆಯು ವಿಶ್ವ ಗಾಳಿ ಗುಣಮಟ್ಟ ವರದಿಯನ್ನು ಇತ್ತೀಚೆಗೆ ಬಿಡುಗಡೆಗೊಳಿಸಿದೆ. ಭಾರತಕ್ಕೆ ಈ ವರದಿಯು ನೀಡಿರುವ ಸಂದೇಶವು ಅಹಿತಕರವೇ ಆಗಿದೆ. ಜಗತ್ತಿನಲ್ಲಿ ಅತಿ ಹೆಚ್ಚು ವಾಯುಮಾಲಿನ್ಯ ಇರುವ 20 ನಗರಗಳ ಪೈಕಿ 13 ನಗರಗಳು ಭಾರತದಲ್ಲಿವೆ ಎಂದು ವರದಿ ಹೇಳಿದೆ. ಪ್ರತಿ ಘನ ಮೀಟರ್ ವಾಯುಪ್ರದೇಶದಲ್ಲಿ 2.5 ಮೈಕ್ರೋ ಮೀಟರ್ ಅಥವಾ ಅದಕ್ಕಿಂತ ಚಿಕ್ಕ ದೂಳಿನ ಕಣಗಳ ಪ್ರಮಾಣವು ಐದು ಮೈಕ್ರೋ ಗ್ರಾಂಗಿಂತ ಕಡಿಮೆ ಇರಬೇಕು ಎಂಬ ಮಾನದಂಡವನ್ನು ವಿಶ್ವ ಆರೋಗ್ಯ ಸಂಸ್ಥೆ ನಿಗದಿ ಮಾಡಿದೆ. ಆದರೆ, ಭಾರತದ ಮೂರನೇ ಒಂದರಷ್ಟು ನಗರಗಳಲ್ಲಿ ಈ ಪ್ರಮಾಣವು ಇದರ 10 ಪಟ್ಟಿಗಿಂತಲೂ ಹೆಚ್ಚು ಇದೆ. ಪಂಜಾಬ್‌ನ ಮುಲ್ಲಾಂಪುರ ಪಟ್ಟಣ ಕೂಡ ಹೆಚ್ಚು ಮಾಲಿನ್ಯ ಹೊಂದಿದೆ. ದೇಶದ ಒಟ್ಟಾರೆ ವಾಯುಮಾಲಿನ್ಯದಲ್ಲಿ ಸ್ವಲ್ಪ ಸುಧಾರಣೆ ಕಂಡಿದೆ. ಭಾರತವು ಮೂರನೇ ಸ್ಥಾನದಿಂದ ಐದನೇ ಸ್ಥಾನಕ್ಕೆ ಏರಿದೆ. ಆದರೆ, ಇದು ಭಾರಿ ಸಮಾಧಾನಪಟ್ಟುಕೊಳ್ಳುವಂತಹ ಸುಧಾರಣೆ ಏನಲ್ಲ. ಗಾಳಿಯ ಮಾಲಿನ್ಯ ಭಾರತದಲ್ಲಿ ಜನರ ಆರೋಗ್ಯಕ್ಕೆ ಗಂಭೀರವಾದ ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಜನರ ನಿರೀಕ್ಷಿತ ಜೀವಿತಾವಧಿಯಲ್ಲಿ 5.2 ವರ್ಷ ಕಡಿತವಾಗುತ್ತದೆ. 2009ರಿಂದ 2019ರ ನಡುವೆ ಪ್ರತಿವರ್ಷ 15 ಲಕ್ಷ ಜನರು ಗಾಳಿಯ ಮಾಲಿನ್ಯದಿಂದಾಗಿ ಮೃತಪಟ್ಟಿದ್ದಾರೆ ಎಂದು ಲೆಕ್ಕ ಹಾಕಲಾಗಿದೆ. ಈಗ

> **ಭಾರತವು ಜಗತ್ತಿನಲ್ಲಿ ಐದನೇ ಅತಿ ಹೆಚ್ಚು ಮಲಿನಗೊಂಡ ದೇಶವಾಗಿದೆ. ದೆಹಲಿಯು ಸತತ ಆರನೇ ವರ್ಷವೂ ಅತಿ ಹೆಚ್ಚು ಮಾಲಿನ್ಯವಿರುವ ರಾಜಧಾನಿ ಎಂಬ ಹೆಸರು ಪಡೆದುಕೊಂಡಿದೆ. ಗಾಳಿಯ ಮಾಲಿನ್ಯವು ನಗರಕ್ಕೆ ಸೀಮಿತವಾದ ವಿಚಾರವಾಗಿ ಉಳಿದಿಲ್ಲ. ಮೇಘಾಲಯದ ಬರ್ನಿಹಾಟ್ ಪಟ್ಟಣದ ಗಾಳಿಯು ಭಾರತದಲ್ಲಿಯೇ ಅತಿ ಹೆಚ್ಚು ಮಾಲಿನ್ಯವನ್ನು ಹೊಂದಿದೆ.**

ಈ ಸಂಖ್ಯೆ ಇನ್ನೂ ಹೆಚ್ಚಾಗಿರಬಹುದು. ಸಾವಷ್ಟೇ ಅಲ್ಲದೆ, ವಿವಿಧ ರೀತಿಯ ಆರೋಗ್ಯ ಸಮಸ್ಯೆಗಳಿಗೆ ವಾಯುಮಾಲಿನ್ಯವು ಕಾರಣವಾಗುತ್ತದೆ. ಜನಸಾಂದ್ರತೆ ಹೆಚ್ಚಾಗಿರುವ ಕಾರಣ ಬೇರೆ ದೇಶಗಳಿಗಿಂತ ನಮ್ಮ ದೇಶದಲ್ಲಿ ಗಾಳಿಯ ಮಾಲಿನ್ಯವು ಹೆಚ್ಚಿನ ಸಮಸ್ಯೆ ಉಂಟು ಮಾಡುತ್ತದೆ. ಆರ್ಥಿಕವಾಗಿ ಬಹುದೊಡ್ಡ ಮೊತ್ತ ವೆಚ್ಚವಾಗಲು ಕಾರಣವಾಗುತ್ತದೆ. ಉತ್ಪಾದಕತೆಯೂ ಕುಂಠಿತವಾಗುತ್ತದೆ. ಗಾಳಿಯ ಮಾಲಿನ್ಯದ ಕುರಿತಾಗಿ ನಮಗೆ ದೊರೆತಿರುವ ಚಿತ್ರಣವು ಸಮಗ್ರವಲ್ಲ. ಮಾಲಿನ್ಯ ಸ್ಥಿತಿಯು ಇನ್ನೂ ಕೆಟ್ಟದಾಗಿ ಇರಬಹುದು. ಏಕೆಂದರೆ, ದೇಶದ ಬಹುಭಾಗವು ಗಾಳಿಯ ಗುಣಮಟ್ಟ ನಿಗಾ ವ್ಯವಸ್ಥೆಯನ್ನು ಹೊಂದಿಲ್ಲ.

ಕೈಗಾರಿಕೆಗಳು ಮತ್ತು ವಾಹನಗಳು ಉಗುಳುವ ಹೊಗೆ, ಕಟ್ಟಡ ನಿರ್ಮಾಣ ಕಾಮಗಾರಿಯಿಂದ ಉಂಟಾಗುವ ದೂಳು ಹಾಗೂ ಆಯಾ ಕಾಲಕ್ಕೆ ಕೃಷಿ ತ್ಯಾಜ್ಯಕ್ಕೆ ಹಾಕುವ ಬೆಂಕಿಯು ಗಾಳಿಯ ಮಾಲಿನ್ಯದ ಮುಖ್ಯ ಕಾರಣಗಳು. 'ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮ'ವೊಂದು ಅಸ್ತಿತ್ವದಲ್ಲಿ ಇದೆ. ಆದರೆ, ಅನುಷ್ಠಾನ ಬಹಳ ಕಳಪೆಯಾಗಿದೆ. ದೆಹಲಿಯಂತಹ ನಗರಗಳು ಚಳಿಗಾಲದಲ್ಲಿ ಗಾಳಿಯ ಮಾಲಿನ್ಯದಿಂದ ತತ್ತರಿಸಿದಾಗ ಬಿಟ್ಟರೆ ಬೇರೆ ಸಂದರ್ಭಗಳಲ್ಲಿ ಗಾಳಿಯ ಮಾಲಿನ್ಯವು ಗಂಭೀರವಾದ ಸಮಸ್ಯೆ ಎಂದೇ ಪರಿಗಣಿತವಾಗಿಲ್ಲ. ನೀತಿ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿ ಮಾಡಬೇಕಾದ ಕೆಲಸಗಳು ಬಹಳಷ್ಟಿವೆ. ಸರ್ಕಾರಗಳು ಮತ್ತು ವಿವಿಧ ಸಂಸ್ಥೆಗಳು ಸಾಮಾನ್ಯವಾಗಿ ಪರಸ್ಪರ ದೂಷಿಸುತ್ತಾ ಇರುತ್ತವೆ. ಗಾಳಿಯ ಮಾಲಿನ್ಯ ತಡೆಗಟ್ಟಲು ಅತ್ಯಗತ್ಯವಾದ ಕ್ರಮಗಳನ್ನೂ ಕೈಗೊಳ್ಳಲಾಗಿಲ್ಲ. ರಾಜಕೀಯ ಇಚ್ಛಾಶಕ್ತಿಯ ಕೊರತೆಯಂತೂ ವ್ಯಾಪಕವಾಗಿದೆ. ಕಠಿಣವಾದ ನಿಯಂತ್ರಣ ಕ್ರಮಗಳನ್ನು ಯೋಜಿಸಿ, ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾಗಿದೆ. ಶುದ್ಧ ಇಂಧನದತ್ತ ವರ್ಗಾವಣೆಗೊಳ್ಳುವುದಕ್ಕೆ ಮತ್ತು ಮಾಲಿನ್ಯ ತಡೆ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಉತ್ತೇಜನ ನೀಡಬೇಕಿದೆ. ಒಂದು ಕಾಲದಲ್ಲಿ ಅತ್ಯಂತ ಮಲಿನ ನಗರವಾಗಿದ್ದ ಬೀಜಿಂಗ್, ಈಗ ಶುದ್ಧ ನಗರವಾಗಿ ಪರಿವರ್ತನೆಯಾಗಿದೆ. ಈ ನಗರವನ್ನು ನೋಡಿ ನಾವೂ ಪಾಠ ಕಲಿಯಬೇಕಾಗಿದೆ.



# ರಾಮಾಯಣ

## ಕೌಸಲ್ಯಾ ದೇವಿಯು ಶ್ರೀರಾಮನಿಗೆ ಮಾಡಿದ ಆಶೀರ್ವಾದ

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ನೀನು ಮಾಡಿದ ಪಿತೃಸೇವೆ ಮಾತೃಸೇವೆಗಳಿಂದಲೂ ನಿನ್ನ ಸತ್ಯವಿಂದಲೂ ರಕ್ಷಿಸಲ್ಪಟ್ಟವನಾಗಿ ಚಿರಂಜೀವಿಯಾಗಿ ಬದುಕು ಯಾಗಾದಿ ಸತ್ಕರ್ಮಗಳಿಗೆ ಯೋಗ್ಯವಾದ ಪಲಾಶ ಸಮಿತ್ತುಗಳು ದರ್ಭೆಗಳು ಯಜ್ಞಾಂಗದ ವೇದಿಗಳು ಆಯತನಂಗಳು ಸ್ಥಂಡಿಲಗಳು ನಾನಾಪ್ರಕಾರವಾದ ವೃಕ್ಷಗಳು ಪರ್ವತಗಳು ಪುಣ್ಯನದಿಗಳು ಪವಿತ್ರವಾದ ಸರೋವರಗಳು ಗರುಡಾದಿ ಪುಣ್ಯ ಪಕ್ಷಿಗಳು ಮಹಾಶೇಷಾದಿ ಪುಣ್ಯಸರ್ಪಗಳು ಸಿಂಹಾದಿ ಮೃಗಗಳು ಮೊದಲಾದವೂ ನಿನ್ನನ್ನು ರಕ್ಷಿಸಲಿ! ಮತ್ತು ಸಾಧ್ಯರೆಂಬ ದೇವತೆಗಳು ವಿಶ್ವೇದೇವತೆಗಳು ಮರುತ್ತುಗಳು ಸಪ್ತಋಷಿಗಳು ಧಾತೃಗಳು ವಿಧಾತೃಗಳು ಪೂಷಾದೇವತೆ ಭಗದೇವತೆಗಳು ಅರಮದೇವತೆಗಳು ಲೋಕಪಾಲಕರು ಸಂವತ್ಸರ ಋತು ಮಾಸ ಪಕ್ಷ ತಿಥಿ ನಕ್ಷತ್ರ ಯೋಗ ಕರಣ ದಿನ ಮುಹೂರ್ತಗಳು ಮೊದಲಾದವು ನಿನ್ನನ್ನು ರಕ್ಷಿಸಲಿ ! ಸ್ಮೃತಿ ಧೃತಿ ಧರ್ಮ ಷಣ್ಮುಖ ಸೋಮ ಬೃಹಸ್ಪತಿ ಸಪ್ತರ್ಷಿಗಳು ನಾರದ ಮೊದಲಾದವರೆಲ್ಲರೂ ಯಾವಾಗಲೂ ನಿನ್ನನ್ನು ರಕ್ಷಿಸಲಿ! ಸಿದ್ಧರೂ ದಿಕ್ಕುಗಳೂ ದ್ವಾದಶಾದಿತ್ಯರೂ ನಿತ್ಯವೂ ನಿನ್ನನ್ನು ರಕ್ಷಿಸಲಿ! ಸಮುದ್ರ ಅಂತರಿಕ್ಷ ಭೂಮಿ ಜಲ ತೇಜೋನಿಲಗಳೂ ಹಗಲಿರುಳುಗಳೂ ಪ್ರಾತಃಸಂಧ್ಯಾ ಸಾಯಂಸಂಧ್ಯಾಕಾಲಗಳೂ ವನವಾಸದಲ್ಲಿರುವ ನಿನ್ನನ್ನು ರಕ್ಷಿಸಲಿ! ಕಲಾ ಕಾಷ್ಠಾದಿಗಳು ನಿನ್ನನ್ನು ರಕ್ಷಿಸಲಿ! ವನದಲ್ಲಿ ಇರುವ ನಿನಗೆ ಪಿಶಾಚಿಗಳಿಂದಲೂ ಮಹಾಭಯಂಕರ ರಾಗಿ ಕ್ರೂರಕರ್ಮಿಗಳೂ ಮಾಂಸಭಕ್ಷಕರೂ ಆದ ರಾಕ್ಷಸರಿಂದಲೂ ಭಯವಿಲ್ಲದಿರಲಿ ! ಹುಲಿ ಕರಡಿ ಕಾಡುಹಂದಿ ಕಾಡೆಮ್ಮೆ ಕೋಣಗಳಿಂದ ನಿನಗೆ ಉಪದ್ರವವಾಗದಿರಲಿ ! ಮನುಷ್ಯರನ್ನು ಕೊಲ್ಲುವ ದುಷ್ಟ ಮೃಗಗಳಿಂದ ನಿನಗೆ ಬಾಧೆಯಿಲ್ಲದಿರಲಿ! ಮಹಾಪರಾಕ್ರಮವುಳ್ಳ ಸಮಸ್ತ ಮಂತ್ರಾಸ್ತ್ರಗಳೂ ನಿನಗೆ ಸಿದ್ಧಿಸಲಿ! ಅಂತರಿಕ್ಷಮಾರ್ಗದಲ್ಲಿ ಚರಿಸುವ ಪ್ರಾಣಿಗಳಿಂದಲೂ ಸಮಸ್ತ ದೇವತೆಗಳಿಂದಲೂ ಭೂಮಿಯಲ್ಲಿ ಚರಿಸುವ ಪ್ರಾಣಿಗಳಿಂದಲೂ ಶತ್ರುಗಳಿಂದಲೂ ನಿನಗೆ ಭಯವಾಗದಿರಲಿ ! ಶುಕ್ರ ಸೋಮ ರುದ್ರ ಕುಬೇರ ಯಮ ಮೊದಲಾದವರು ನಿನ್ನನ್ನು ರಕ್ಷಿಸಲಿ ! ಅಗ್ನಿ ವಾಯು ಮಂತ್ರಾದಿ ದೇವತೆಗಳೂ ನಿನ್ನನ್ನು ಸ್ನಾನಕಾಲದಲ್ಲಿ ರಕ್ಷಿಸಲಿ ! ಸಮಸ್ತ ಸೃಷ್ಟಿಗಳಿಗೂ ಕರ್ತನಾದ ಬ್ರಹ್ಮ ದೇವನೂ ಮರೀಚಿ ಕಶ್ಯಪರು ಮೊದಲಾದ ಋಷಿಗಳೂ ದಂಡಕಾರಣ್ಯವಾಸಿಯಾದ ನಿನ್ನನ್ನು ರಕ್ಷಿಸಲಿ! ಹೀಗೆ ಆಶೀರ್ವಾದವನ್ನು ಮಾಡಿದಮೇಲೆ ಆತನ ಪ್ರಯಾಣಕ್ಕೆ ಉಚಿತವಾದ ಮಂಗಳಹೋಮವನ್ನು ಬ್ರಾಹ್ಮಣರಿಂದ ಮಾಡಿಸಿ ದೇವಪೂಜಾರ್ಥವಾಗಿ ಪೂಜಾದ್ರವ್ಯಗಳನ್ನು ಸಂಪಾದಿಸಿ, ಗಂಧಾಕ್ಷತೆ ಧೂಪ ದೀಪ ಪುಷ್ಪಾದಿಗಳಿಂದಲೂ ಸ್ತೋತ್ರವಾರಗಳಿಂದಲೂ ಇಷ್ಟದೇವತಾ ಪ್ರಾರ್ಥನೆಯನ್ನು ಮಾಡಿ, ಉತ್ತಮವಾದ ಪುಪ್ಪ ತುಪ್ಪ ಹೋಮಯೋಗ್ಯವಾದ ಸಮಿತ್ತುಗಳು ಬಿಳಿಯ ಸಾಸುವ ಮೊದಲಾದವುಗಳಿಂದ ಶಾಂತಿ ಹೋಮಗಳನ್ನು ಮಾಡಿಸಿ, ಜೇನುತುಪ್ಪ ಮೊಸರು ದರ್ಭೆ ತುಪ್ಪಗಳಿಂದ ಆ ದೇವತೆಗಳಿಗೆ ವಿಧ್ಯುಕ್ತವಾಗಿ ಬಲಿ ಹಾಕಿಸಿ, ವೇದವೇದಾಂಗ ಪಾರಂಗತರಾದ ಬ್ರಾಹ್ಮಣರಿಂದ ಶಾಂತಿಸೂಕ್ತಗಳನ್ನು ಹೇಳಿಸಿ, ಪ್ರಯಾಣಕಾಲೋಚಿತವಾದ ಪುಣ್ಯಾಹವಾಚನವನ್ನು ಮಾಡಿಸಿ, ಹೋಮವನ್ನು ಮಾಡಿದ ಆಚಾರ್ಯರಿಗೆ ಬೇಕಾದ ವಸ್ತುಗಳನ್ನು ದಕ್ಷಿಣೆಯಾಗಿ ಕೊಟ್ಟಳು. ಆನಂತರ ಶ್ರೀರಾಮನನ್ನು ಕುರಿತು ಶ್ರೀರಾಮ ಪೂರ್ವದಲ್ಲಿ ಸಮಸ್ತ ದೇವತೆಗಳಿಗೂ ಒಡೆಯನಾದ ದೇವೇಂದ್ರನು ವೃತ್ರಾಸುರನನ್ನು ಕೊಲ್ಲುವುದಕ್ಕೆ ಹೊರಟಾಗ ಬೃಹಸ್ಪತಿ ಮೊದಲಾದ ದೇವತೆಗಳು ಆತನಿಗೆ ಜಯವಾಗಬೇಕೆಂದು ಯಾವ ಮಂಗಳವನ್ನು ಮಾಡಿಸಿದರೋ ಆ ಮಂಗಳವು ನಿನಗಾಗಲಿ ! ಅಮೃತಮಥನವನ್ನು ಮಾಡುವ ಸಮಯದಲ್ಲಿ ದೇವಾಸುರರು ಯಾವ ಮಂಗಳವನ್ನು ಮಾಡಿದರೋವೇವೇಂದ್ರನು ದೈತ್ಯರನ್ನು ಜಯಿಸಬೇಕೆಂದು ವಜ್ರಾಯುಧವನ್ನು ತೆಗೆದುಕೊಂಡು ಹೊರಡುವಾಗ ದೇವಮಾತೆಯಾದ ಅದಿತಿಯು ಯಾವ ಮಂಗಳ ವನ್ನು ಮಾಡಿದಳೋ ಅಂಥ ಮಂಗಳವು ನಿನಗಾಗಲಿ ತ್ರಿವಿಕ್ರಮಾವತಾರದಲ್ಲಿ ಬಲಿ ಚಕ್ರವರ್ತಿಯನ್ನು ಜಯಿಸಬೇಕೆಂದು ಪರಮಪುರುಷನಿಗೆ ಯಾವ ಮಂಗಳವನ್ನು ಮಾಡಿದರೋ ಅಂಥ ಮಂಗಳವು ನಿನಗಾಗಲಿ!

ಮುಂದುವರಿಯುವುದು...

# ಅರಿತ ಜ್ಞಾನ ಹಾಯಿಕುಗಳು




ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ




ಅರಿತ ಜ್ಞಾನ ಹಾಯಿಕುಗಳು ಇಂದು ಉತ್ತಮ ಎ. ದೊಡ್ಮನಿ ಅವರ ಕವನ ಸಂಕಲನ. ಈ ಕೃತಿಗೆ ಶಂಭುಲಿಂಗ ವಾಲ್ದೊಡ್ಡಿ ಅವರು ಮುನ್ನುಡಿ ಬರೆದಿದ್ದಾರೆ. ಬುದ್ಧಾಂಕುರ ಪ್ರಕಾಶನ ಅವರಿಂದ ಪ್ರಕಟಗೊಂಡಿದೆ.


**ಕೃತಿಯ ಮಾಹಿತಿ:** ಈ ಕೃತಿಯಲ್ಲಿ ಸುಮಾರು 300 ಚುಟುಕುಗಳಿವೆ. ಮೌಢ್ಯತೆ, ಕಂದಪಾರಗಳ ಬೆಂಕಿಯಲ್ಲಿ ಇದ್ದು ನರ ನರ ನಾಯುತ್ತಿದ್ದರು. ಮನುಷ್ಯ ಮನುಷ್ಯರ ನಡುವೆ ದೊಡ್ಡ ಕಂದರವೆ ನಿರ್ಮಾಣವಾಗಿತ್ತು. ಏನ ದಂತರ, ಹೆಣ್ಣು ಮಕ್ಕಳ, ಸಾಮಾನ್ಯ ಜನರ ಬದುಕು ನರಕಕ್ಕಿಂತಲು ಕಡೆಯಾಣತ್ತು. ಅಂತಹ ಸಮಯದಲ್ಲಿ ಬುದ್ಧರು ಈ ಪಲಯ ಘನ ಘೋರ ಶೀಷಣೆ ಕಂಡು ಬಲು ನೊಂದು ಬೌದ್ಧ ಧರ್ಮ ಸ್ಥಾಪಿಸಿದರು. ಈ ಧರ್ಮದ ವಿಚಾರಗಳು ಕೆಲವೆ ಕೆಲವು ವರ್ಷಗಳಲ್ಲಿ ಭಾರತ ಅಷ್ಟೆ ಅಲ್ಲ ಜಗತ್ತಿನ ಜನರ ಮನಸ್ಸಿನ ಮೇಲೆ ಮಹಾ ಪರಿಣಾಮ ಜೀಲತು. ಹೊರದೇಶದಲ್ಲಿ ಬೌದ್ಧ ಧರ್ಮ ತನ್ನ ಬೇರುಗಳು ಇಡುತ್ತ ಬಂತು. ಆದರೆ ಭಾರತದಲ್ಲದ್ದ ಹಲವು ಧರ್ಮಗಂಗೆ ಈ ಧರ್ಮದಿಂದ ತುಂಬ ತೊಂದರೆ ಆಗತೊಡಗಿತು. ಆ ಸಮಯದಲ್ಲಿ ಭಾರತದಲ್ಲಿ ಆಳುತ್ತಿದ್ದ ಅರಸಲಗೆ ಬೌದ್ಧ ಧರ್ಮದ ಬಗ್ಗೆ ಇಲ್ಲ ಸಲ್ಲದ ಸುಳ್ಳು ಹಚ್ಚಿಸಿ ಆ ಬೌದ್ಧ ಧರ್ಮವು ಭಾರತದಲ್ಲಿನೆಲೆ ಉರದಂತೆ ಮಾಡಿದರು. ಹಲವು ಧರ್ಮಿಯರು.




ಯಾವತ್ತು ನಮ್ಮ ಮನಸ್ಸು ಕೆಟ್ಟ ಅನೇ ಕಾರ್ಯ, ಕೆಟ್ಟ ವಿಚಾರ, ಹಿಂಸೆಯನ್ನು ಸಹಿಸುವುದಿಲ್ಲ, ಆದರೂ ನಾವು ಮನಸ್ಸಿನ ವಿರೋಧವಾಗಿ ನಡೆದುಕೊಂಡರೆ ಅದು ನಮಗೆ ಹೆಜ್ಜೆ ಹೆಜ್ಜೆಗು ಹಿಂಸೆ ಕೊಡುತ್ತೆ, ಜಗತ್ತಿನ ಇತಿಹಾಸದಲ್ಲ ಅನೇಕ ಬದಲಾವಣೆಗಳು ಆಗಿವೆ. ಕೆಲವು ರಕ್ತಪಾತದಿಂದ ಬದಲಾದರೆ ಇನ್ನ ಕೆಲವು ಪೆನ್ನಿನಿಂದಲು ಬದಲಾವಣೆ ಕಂಡುದು ನಾವು ಇತಿಹಾಸದಲ್ಲಿ ನೋಡಿದ್ದೇವೆ. ಅದರಂತ ಮುಂದೆಯು ಯಾವುದೇ ರೀತಯ ಬದಲಾವಣೆಗಳು ಆದರೂ ಅವು ಹಿಂಸೆಯಿಂದ ಆಗು ಪೆನ್ನಿನಿಂದಲೆ ಅಗಲ ಎಂಬುದು ಕಾವ್ಯದ ಆಸೆಯಾಗಿದೆ. ಎಂದು ಮುನ್ನುಡಿಯಲ್ಲಿ ಬರೆದಿದ್ದಾರೆ. ಈ ಕೃತಿಯ ಓದು ಗರ ಮನ ಸೆಳೆಯುವುದು. ಈ ಕೃತಿಯಲ್ಲಿ ಅನೇಕ ಮಾಹಿತಿಗಳನ್ನು ಬರೆದು ಸುಂದರ ಚುಟುಕುಗಳನ್ನು ಚಿತ್ರಿಸಿದ್ದಾರೆ. ಈ ಕೃತಿಯು ಚುಟುಕುಗಳ ಸಾಗರ ಎಂದು ಹೇಳಿದರೆ ತಪ್ಪಾಗದು. ಲೇಖಕರು ಹೀಗೆ ಇನ್ನಷ್ಟು ಚುಟುಕುಗಳನ್ನು ಬರೆದು ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಹೊಸ ಛಾಪನ್ನು ಮೂಡಿಸಲು ಎಂದು ಹಾರೈಸುವೆ.




# ನ್ಯಾಯ ಎಲ್ಲಿದೆ ಕಲಿಯುಗದಿ



ಹೆಚ್.ಎಸ್. ಪ್ರತಿಮಾ

ಸಮಾಜದಿ ಬದುಕುತಿರುವಾಗ ನೀನು ಶೋಷಣೆಯು
ಆದಾಗ ನ್ಯಾಯ ಕೇಳದಿರು ನ್ಯಾಯ ಕೇಳಲು ಸಿದ್ದ
ವಾದರೆ ಕಲಿಯುಗದಿ ಕೇಳಿದವ ಹುಚ್ಚರು, ಪೆದ್ದರು,
ನಿಷ್ಟುರವಾದಿ...
ನ್ಯಾಯದ ಹುಡುಕಾಟದಿ
ಪೆದ್ದರು ಕಲಿಯುಗದ ಜಗದಿ
ನಂಬಿಕೆಯು ಎಲ್ಲಿದೆ
ನ್ಯಾಯ ಎಲ್ಲಿದೆ
ಕಲಿಯುಗದಿ, ಹಸಿದ
ಹೊಟ್ಟೆ, ಹರಕಲು ಬಟ್ಟೆ
ಬದುಕಲಾರದ
ಭಾವನೆ, ಸ್ವಾಭಿ
ಮಾನಕ್ಕೆ ಜಗವೆಲ್ಲಿದೆ ...
ಅಸಾಯಕತೆಯ ಕಂಡು ನಗು ವವರು ಎಲ್ಲಾ ಕಾಯುತಿರಿ
ನಿಮಗೂ ಫಲಿತಾಂಶ ಬೇಗ ಸಿಗಲಿದೆ ಸಾಸಿವೆಯ ನ್ಯಾಯಕ್ಕೂ
ದಂಡ ಕಟ್ಟುತ್ತ ಸಾಗುತ ನಿರೀಕ್ಷೆಯ ಬದುಕಿಗೆ ಬೆಲೆಯೆಲ್ಲಿದೆ
ಮನುಜ...
ಬಳಲುವ ಬದುಕಿನಲಿ ಹೊಗಳಿಕೆ ಜಾಗವಿಲ್ಲ
ಜೀವನದ ಹಾದಿಯಲಿ ಬದುಕಲ್ಲೂ ಅರಿತಿಹೆನು ಎಲ್ಲಾ ದಿನವೂ
ಮೋಸ ಮಾಡುವವರದು ಆಗುವುದಿಲ್ಲ ನಾವು ಸತ್ತರು ಸತ್ಯ ಒಂದಲ್ಲ
ಒಂದು ದಿನ ಗೆಲ್ಲುವುದಲ್ಲ...
ವಿಪರ್ಯಾಸ ನಾವು ನೋಡಲು ಇರುವುದಿಲ್ಲ
ಬೆಲೆಯಿರದ ಜಾಗದಿ ಚಪ್ಪಲಿಯ ಬಿಡದವರು
ನಿನ್ನ ನಾಟಕವನು ಕಂಡರು ಜೊತೆಗೆ ಇರುವುದಿಲ್ಲ
ಬದುಕು ನಶ್ವರವು ಮಾಡುವ ಕಾರ್ಯ ಒಳಿತಾದರೆ ಸಾಕಲ್ಲ...

# ಕುತ್ತಿಗೆಯಲ್ಲಿ ಅಡಗಿದೆ ನಿಮ್ಮ ವ್ಯಕ್ತಿತ್ವ



ಪ್ರತಿಯೊಬ್ಬರು ಗುಣಸ್ವಭಾವ ಹಾಗೂ ವಿಭಿನ್ನ ವ್ಯಕ್ತಿತ್ವವನ್ನು ಹೊಂದಿರುತ್ತಾರೆ. ಹೀಗಾಗಿ ಎಲ್ಲರೂ ಒಂದೇ ರೀತಿ ಇರುತ್ತಾರೆ ಎಂದು ಹೇಳುವುದು ಕಷ್ಟಕರ. ಆದರೆ ಒಬ್ಬ ವ್ಯಕ್ತಿಯು ಹೇಗೆ ಎಂದು ತಿಳಿಯಲು ಆತನ ಜೊತೆಗೆ ಸ್ವಲ್ಪ ಸಮಯವಾದರೂ ಕಳೆಯಬೇಕಾಗುತ್ತದೆ. ಆದರೆ ಒಬ್ಬ ವ್ಯಕ್ತಿ ನಡೆಯುವ ಶೈಲಿಯಿಂದ, ಕುಳಿತುಕೊಳ್ಳುವ ಭಂಗಿ, ನಿಂತುಕೊಳ್ಳುವ ಭಂಗಿ, ಮೂಗು, ಮುಖ, ಹಣೆ, ಕಣ್ಣು, ಕಿವಿ, ಮೂಗು ಕೈ ಬೆರಳುಗಳ ಆಕಾರ ಹೀಗೆ ದೇಹದ ಪ್ರತಿಯೊಂದು ಅಂಗಗಳ ಆಕಾರದಿಂದ ನಿಮ್ಮ ವ್ಯಕ್ತಿತ್ವ ಹೇಗೆಂಬುದನ್ನು ತಿಳಿಯಬಹುದು. ಅದೇ ರೀತಿ ವ್ಯಕ್ತಿಯ ಕುತ್ತಿಗೆಯ ಉದ್ದವು ವ್ಯಕ್ತಿತ್ವವನ್ನು ಬಹಿರಂಗಪಡಿಸುತ್ತದೆ. ಉದ್ದ ಕುತ್ತಿಗೆ ಹಾಗೂ ಗಿಡ್ಡ ಕುತ್ತಿಗೆ ಹೊಂದಿದ್ದವರ ವ್ಯಕ್ತಿತ್ವ ಹೇಗಿದೆ ಎನ್ನುವ ಕುತೂಹಲಕಾರಿ.

**ಉದ್ದನೆಯ ಕುತ್ತಿಗೆ ಹೊಂದಿದ್ದರೆ:** ಉದ್ದವಾದ ಕುತ್ತಿಗೆ ಇದ್ದರೆ, ಆ ವ್ಯಕ್ತಿಗಳು ಸುಂದರ, ಬುದ್ಧಿವಂತರಾಗಿರುತ್ತದೆ. ಈ ಜನರು ಶಾಂತ ಸ್ವಭಾವ ಹೊಂದಿದ್ದು ತನ್ನ ಸಭ್ಯ ಗುಣಗಳಿಂದ ಎಲ್ಲರಿಗೂ ಇಷ್ಟವಾಗುತ್ತಾರೆ. ಮುಕ್ತವಾಗಿ ಮಾತನಾಡಿ ಎಲ್ಲರೊಂದಿಗೆ ಬೆರೆಯುವ ಗುಣ ಈ ವ್ಯಕ್ತಿಗಳಲ್ಲಿ ಅಧಿಕ ವಾಗಿರುತ್ತದೆ. ಉತ್ತಮ ಸಂವಹನಕಾರರಾಗಿದ್ದು ಸ್ವಾವಲಂಬಿ ಜೀವನ ನಡೆಸುತ್ತಾರೆ. ಈ ಜನರು ಬುದ್ಧಿವಂತರಾಗಿರುವ ಕಾರಣ ಜ್ಞಾನದ ಹಸಿವು ಹೆಚ್ಚಿರುತ್ತದೆ. ಹೀಗಾಗಿ ಹೊಸ ಹೊಸ ವಿಷಯ ಗಳನ್ನು ತಿಳಿದುಕೊಳ್ಳಲು ಇಷ್ಟ ಪಡುತ್ತಾರೆ. ಪ್ರಕೃತಿ ಪ್ರೇಮಿಗಳಾಗಿದ್ದು, ಹಚ್ಚ ಹಸಿರಿನ ಪರಿಸರದ ನಡುವೆ ಕಾಲ ಕಳೆಯಲು ಇಷ್ಟ ಪಡುತ್ತಾರೆ. ಇವರು ಸ್ವತಂತ್ರ್ಯವನ್ನು ಪ್ರೀತಿಸುತ್ತಾರೆ, ಹೀಗಾಗಿ ಸ್ವತಂತ್ರರಾಗಿದ್ದು ತಮ್ಮ ವ್ಯಕ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ.

**ವ್ಯಕ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನ**

**ಗಿಡ್ಡ ಕುತ್ತಿಗೆ ಹೊಂದಿದ್ದರೆ :** ಕೆಲವು ವ್ಯಕ್ತಿಗಳು ಗಿಡ್ಡ ಕುತ್ತಿಗೆ ಹೊಂದಿರುತ್ತಾರೆ, ಈ ವ್ಯಕ್ತಿಗಳು ಕೆಲಸದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಶ್ರಮ ಜೀವಿಗಳಾಗಿದ್ದು ಬೆವರು ಸುರಿಸುತ್ತಾರೆ. ಸಮಸ್ಯೆಗಳು ಎದುರಾದಾಗ ಆದರಿಂದ ಹೊರಬರಲು ದಾರಿಯನ್ನು ಕಂಡುಕೊಳ್ಳುತ್ತಾರೆ. ಕುತ್ತಿಗೆ ಗಿಡ್ಡವಾಗಿದ್ದರೆ ಅದು ಸ್ಥಿರತೆಯನ್ನು ಸೂಚಿಸುತ್ತದೆ. ಈ ವ್ಯಕ್ತಿಗಳು ಬಲವಾದ ವ್ಯಕ್ತಿತ್ವ ಹೊಂದಿರುತ್ತಾರೆ. ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಾಕಷ್ಟು ಬಾರಿ ಯೋಚಿಸುತ್ತಾರೆ. ಬೇರೆಯವರ ಅಭಿಪ್ರಾಯಗಳ ಮೇಲೆ ಹೆಚ್ಚು ಪ್ರಭಾವಿತರಾಗಿರುವುದಿಲ್ಲ. ಈ ವ್ಯಕ್ತಿಗಳು ತಮ್ಮ ಜೀವನದಲ್ಲಿ ತುಂಬಾ ಪ್ರಾಯೋಗಿಕರಾಗಿದ್ದು, ಎಲ್ಲಾವನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವ ಗುಣ ಇವರಲ್ಲಿ ಕಾಣಬಹುದು. ಸನ್ನಿವೇಶಕ್ಕೆ ಅನುಗುಣವಾಗಿ ಹೊಂದಿಕೊಳ್ಳುವ ಗುಣ ಹೊಂದಿದ್ದು, ಎಲ್ಲಾರನ್ನು ಪ್ರೀತಿ ವಿಶ್ವಾಸದಿಂದ ಕಾಣುತ್ತಾರೆ.

# ಗುಬ್ಬಚ್ಚಿಗಳ ದಿನಾಚರಣೆ ಶುರುವಾದದ್ದು ಹೇಗೆ?

ಭೂಮಿಯ ಮೇಲಿನ ಹಳೆಯ ಪಕ್ಷಿ ಪ್ರಭೇದಗಳಲ್ಲಿ ಗುಬ್ಬಚ್ಚಿಯೂ ಒಂದು. ಇದು ಮನುಷ್ಯರ ನಡುವೆ ವಾಸಿಸಲು ಇಷ್ಟ ಪಡುವ ಪಕ್ಷಿ ಎನ್ನಬಹುದು. ಹಿಂದೆಲ್ಲಾ ಮನೆಯ ಹಂಚಿನಲ್ಲಿ ಗುಬ್ಬಚ್ಚಿಗಳು ಗೂಡು ಕಟ್ಟಿಕೊಂಡು ಮನೆಯ ಸದಸ್ಯರೆನ್ನುವಂತೆ ಇದ್ದವು. ಆದರೆ ಇದೀಗ ಗುಬ್ಬಚ್ಚಿಗಳು ಅಳಿವಿನಂಚಿಗೆ ತಲುಪಿದೆ. ಭಾರತ ಸೇರಿದಂತೆ ಪ್ರಪಂಚದಾದಂತ್ಯ ಈ ಗುಬ್ಬಚ್ಚಿಗಳ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗುತ್ತಿದೆ. ಹೀಗಾಗಿ ಕಣ್ಮರೆಯಾಗುವ



ಈ ಗುಬ್ಬಚ್ಚಿಗಳ ರಕ್ಷಣೆ ಮತ್ತು ಸಂರಕ್ಷಣೆಗಾಗಿ ವಿಶ್ವ ಗುಬ್ಬಚ್ಚಿ ದಿನವನ್ನು ಆಚರಿಸುವುದು ನಿಜಕ್ಕೂ ಶ್ಲಾಘನೀಯ. ಈ ಹಿನ್ನಲೆಯಲ್ಲಿ ಪ್ರತಿ ವರ್ಷ ಮಾರ್ಚ್ 20 ರಂದು ವಿಶ್ವ ಗುಬ್ಬಚ್ಚಿ ದಿನವನ್ನು ಆಚರಿಸುತ್ತಾ ಬರಲಾಗುತ್ತಿದೆ.

**ವಿಶ್ವ ಗುಬ್ಬಚ್ಚಿ ದಿನದ ಇತಿಹಾಸ:** ನಾಸಿಕ್ ನಿವಾಸಿ ಮೊಹಮ್ಮದ್ ದಿಲಾವರ್ ಅವರು ಫಾರೆವರ್ ಸೊಸೈಟಿ ಸ್ಥಾಪಿಸಿದರು. ನೇಚರ್ ಫಾರೆವರ್ ಸೊಸೈಟಿ ಮತ್ತು ಇಕೋಸಿಸ್ ಆಕ್ಷನ್ ಫೌಂಡೇಶನ್ ಸಹಯೋಗದೊಂದಿಗೆ 2010ರಂದು ಮೊದಲ ಬಾರಿಗೆ ವಿಶ್ವ ಗುಬ್ಬಚ್ಚಿಗಳ ದಿನವನ್ನು ಆಚರಿಸಲಾಯಿತು. ಅಂದಿನಿಂದ ಪ್ರತಿ ವರ್ಷ ಮಾ. 20 ರಂದು ವಿಶ್ವ ಗುಬ್ಬಚ್ಚಿ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಕಣ್ಮರೆಯಾಗುತ್ತಿರುವ ಈ ಗುಬ್ಬಚ್ಚಿಗಳ ಸಂತತಿಗಳನ್ನು ಉಳಿಸುವ ಉದ್ದೇಶವನ್ನು ಹೊಂದಿದೆ.

## ಗುಬ್ಬಚ್ಚಿಗಳ ಸಂರಕ್ಷಣೆ ಮಾಡುವುದು ಹೇಗೆ?

- **ನಿಮ್ಮ ಮನೆಯಲ್ಲಿ ಗುಬ್ಬಚ್ಚಿಗಳು ಗೂಡನ್ನು ಕಟ್ಟಿಕೊಂಡರೆ ಅದನ್ನು ತೆಗೆದುಹಾಕಬೇಡಿ. ಅವುಗಳ ಸಂತತಿ ಅಭಿವೃದ್ಧಿಗೆ ಈ ರೀತಿ ಕೈ ಜೋಡಿಸಿ.**
- **ಬೆಳಗ್ಗೆ, ಸಂಜೆಯ ವೇಳೆಯಲ್ಲಿ ಅಂಗಳ, ಕಿಟಕಿಗಳ ಮೇಲೆ ಧಾನ್ಯ, ನೀರನ್ನು ಇರಿಸಿ ಅವುಗಳ ಹಸಿವನ್ನು ನೀಗಿಸಿ.**
- **ಮಕ್ಕಳಿಗು ಗುಬ್ಬಚ್ಚಿಗಳಿಗೆ ಆಹಾರಕ್ಕಾಗಿ ಬಾಲ್ಕನಿಯಲ್ಲಿ ನೀರು ಮತ್ತು ಧಾನ್ಯಗಳ ಬಟ್ಟಲನ್ನು ಇಡಲು ಪ್ರೋತ್ಸಾಹಿಸಿ.**
- **ಮನೆಯಲ್ಲಿ ಬಿಸಾಡಲು ಇಟ್ಟಿರುವ ಶೂ ಕ್ಯಾನ್ಸ್, ದೊಡ್ಡ ಪ್ಲಾಸ್ಟಿಕ್ ಬಾಟಲಿಗಳು ಮತ್ತು ಮಡಿಕೆಗಳಿದ್ದರೆ ಅದನ್ನು ಮರದ ರೆಂಬೆ ಕೊಂಬೆಗಳಿಗೆ ನೇತು ಹಾಕಿ, ಇದು ಗುಬ್ಬಚ್ಚಿಗಳು ಗೂಡು ಕಟ್ಟಲು ಅನುವು ಮಾಡಿಕೊಟ್ಟಂತೆ ಆಗುತ್ತದೆ.**

**ವಿಶ್ವ ಗುಬ್ಬಚ್ಚಿ ದಿನದ ಮಹತ್ವ ಹಾಗೂ ಆಚರಣೆ:** ಪಕ್ಷಿ ಪ್ರಬೇಧಗಳಲ್ಲಿ ಒಂದಾದ ಈ ಗುಬ್ಬಚ್ಚಿಗಳು ಕ್ರಮೇಣವಾಗಿ ಅಳಿವಿನಂಚಿಗೆ ಸಾಗುತ್ತಿವೆ. ನಗರೀಕರಣ, ಮೊಬೈಲ್ ಟವರ್ ಗಳ ಹೆಚ್ಚಳ ಹಾಗೂ ಹೆಚ್ಚುತ್ತಿರುವ ಪರಿಸರ ಮಾಲಿನ್ಯದ ಪರಿಣಾಮವಾಗಿ ಗುಬ್ಬಚ್ಚಿಗಳ ಸಂತತಿಗಳು ಕಣ್ಮರೆಯತ್ತ ಸಾಗುತ್ತಿವೆ. ಹೀಗಾಗಿ ಎಲ್ಲೋ ಒಂದೆರಡು ಗುಬ್ಬಚ್ಚಿಗಳನ್ನು ಮಾತ್ರ ನೋಡುವಂತಾಗಿದೆ. ಹೀಗಾಗಿ ಈ ಅಳಿವಿನಂಚಿನಲ್ಲಿರುವ ಗುಬ್ಬಚ್ಚಿ ಪ್ರಬೇಧಗಳ ಸಂರಕ್ಷಣೆ ಹಾಗೂ ಅವುಗಳ ಸಂತತಿ ಉಳಿಸುವಿಕೆಯ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ಗುಬ್ಬಚ್ಚಿ ದಿನ ಮಹತ್ವದ್ದಾಗಿದೆ. ಈ ಹಿನ್ನಲೆಯಲ್ಲಿ ವಿವಿಧ ಸಂಘ ಸಂಸ್ಥೆಗಳು ಗುಬ್ಬಚ್ಚಿಗಳ ಸಂತತಿಗಳ ರಕ್ಷಣೆಗಾಗಿ ಜಾಗೃತಿ ಕಾರ್ಯಕ್ರಮ ಸೇರಿದಂತೆ ಇನ್ನಿತ್ತರ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗುತ್ತದೆ.

# ಸೊಂಟ ನೋವು ಕಾಡುತ್ತಿದೆಯೇ?



ಬೆನ್ನು ನೋವು ಅಥವಾ ಸೊಂಟ ನೋವು ಕಾಡಲು ಒಂದಲ್ಲ ಹಲವಾರು ಕಾರಣಗಳಿವೆ. ಅವುಗಳಿಗೆ ಕಾರಣವನ್ನು ಪತ್ತೆಹಚ್ಚಿ ಚಿಕಿತ್ಸೆ ಪಡೆಯದಿದ್ದರೆ ಅದು ಇನ್ನಷ್ಟು ಸಮಸ್ಯೆಗೆ ಕಾರಣವಾಗಬಲ್ಲದು. ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಸಮಯದಲ್ಲಿ ಯಾವುದೋ ಕಾರಣದಿಂದಾಗಿ ಬೆನ್ನುನೋವು ಅಥವಾ ಸೊಂಟ ನೋವು ಕಾಡಲಾರಂಭಿಸುತ್ತದೆ. ಹೆಚ್ಚಿನವರು ಈ ಸೊಂಟ ನೋವನ್ನು ಕಡೆಗಣಿಸುತ್ತಾರೆ. ಆದರೆ ನಿಮಗೆ ಗೊತ್ತಾ ಈ ಸೊಂಟ ನೋವು ನಿಮ್ಮ ಮೂಳೆಗಳು, ನರಗಳಿಗೆ ಸಂಪರ್ಕ ಹೊಂದಿದೆ. ಇದನ್ನು ಹಾಗೆಯೇ ಬಿಟ್ಟರೆ ಕಾಲಾನಂತರದಲ್ಲಿ ಗಂಭೀರ ರೂಪವನ್ನು ಪಡೆಯಬಹುದು. ನಾವಿಲ್ಲಿ ಸೊಂಟ ನೋವು ಯಾವೆಲ್ಲಾ ಕಾರಣಗಳಿಂದ ಬರಬಹುದು. ಅದರ ಲಕ್ಷಣಗಳ ಬಗ್ಗೆ ತಿಳಿಯೋಣ.

**ಆಯಾಸ:** ಬೆನ್ನುನೋವಿಗೆ ಪ್ರಮುಖ, ಸಾಮಾನ್ಯ ಕಾರಣವೆಂದರೆ ಆಯಾಸ. ಭಾರವಾದ ವಸ್ತುಗಳನ್ನು ಎಳೆಯುವುದರಿಂದ ಬೆನ್ನುಮೂಳೆಯ ಸುತ್ತಲಿನ ಸ್ನಾಯುಗಳ ಮೇಲೆ ಒತ್ತಡ ಉಂಟಾಗುತ್ತದೆ. ಪುನರಾವರ್ತಿತ ಒತ್ತಡವು ಸ್ನಾಯು ಸೆಳೆತಕ್ಕೆ ಅಪಾಯಕಾರಿ ಅಂಶವಾಗಿದೆ. ಹಾಗಾಗಿ ಸರಿಯಾಗಿ ವಿಶ್ರಾಂತಿ ತೆಗೆದುಕೊಳ್ಳುವುದು ಮುಖ್ಯ.

**ಕಡೆ ಗಣಿಸಿದರೆ ಅಪಾಯ ಖಂಡಿತ**

**ಸಂಧಿವಾತ:** ಬೆನ್ನುನೋವಿಗೆ ಪ್ರಮುಖ ಕಾರಣಗಳಲ್ಲಿ ಅಸ್ಥಿಸಂಧಿವಾತವೂ ಒಂದು. ಬೆನ್ನಿನ ಕೆಳಭಾಗದಲ್ಲಿರುವ ಕೀಲುಗಳ ಕಾರ್ಟಿಲೇಜ್‌ನಲ್ಲಿ ಏನಾದರೂ ಸಮಸ್ಯೆ ಉಂಟಾದಾಗ ಈ ಸ್ಥಿತಿ ಉಂಟಾಗುತ್ತದೆ. ಅಸ್ಥಿಸಂಧಿವಾತವು ಬೆನ್ನುಮೂಳೆಯ ಸ್ಟೆನೋಸಿಸ್ ಆಗಿ ಕೂಡ ಉಲ್ಬಣಗೊಳ್ಳಬಹುದು. ಬೆನ್ನುಹುರಿಯ ಸುತ್ತ ಲಿನ ಜಾಗ ಕಡಿಮೆಯಾಗುವ ಸ್ಥಿತಿಯಿಂದಾಗಿ ಇದು ಸಂಭವಿಸುತ್ತದೆ. ಸ್ಕೋಲಿಯೋಸಿಸ್ ಎಂದರೆ ಬೆನ್ನು ಮೂಳೆಯು ಒಂದು ಬದಿಗೆ ಅಸಹಜವಾಗಿ ಬಾಗಿದ ಸ್ಥಿತಿ. ಈ ಸ್ಥಿತಿಯು ಮಧ್ಯವಯಸ್ಸಿನಲ್ಲಿ ಸಂಭವಿಸಬಹುದು ಮತ್ತು ಸಾಮಾನ್ಯವಾಗಿ ನೋವಿನಿಂದ ಕೂಡಿರುತ್ತದೆ. ಮೂತ್ರಪಿಂಡದ ಸೋಂಕು ಉಂಟಾದರೂ ಸೊಂಟ ನೋವು ಕಾಡುತ್ತೆ



**ಮೂತ್ರಪಿಂಡದ ಕಲ್ಲುಗಳು:** ಮೂತ್ರಪಿಂಡಗಳ ಒಳಗೆ ರೂಪುಗೊಳ್ಳುವ ಕಲ್ಲುಗಳಿಂದಲೂ ಸೊಂಟ ನೋವು ಕಾಣಿಸಿಕೊಳ್ಳುತ್ತದೆ.

**ಬೆನ್ನು ನೋವಿಗೆ ಹೇಗೆ ಚಿಕಿತ್ಸೆ ನೀಡಬೇಕು?:** ಬೆನ್ನು ನೋವು ಸಾಮಾನ್ಯವಾಗಿ ತನ್ನಿಂದ ತಾನೇ ಗುಣವಾಗುವ ಸ್ಥಿತಿಯಾಗಿದೆ. ಆದರೆ ಅದು ಗುಣವಾಗದಿದ್ದರೆ, ನೀವು ಚಿಕಿತ್ಸೆಯನ್ನು ತೆಗೆದುಕೊಳ್ಳಬೇಕು. ಬೆನ್ನು ನೋವನ್ನು ಗುಣಪಡಿಸಲು ಅಕ್ಯುಪಂಕ್ಚರ್ ಅಥವಾ ಶಿಯಾಟ್ಸು ಚಿಕಿತ್ಸೆಯನ್ನು ಸಹ ಮಾಡಬಹುದು. ಇದನ್ನು ಬೆರಳಿನ ಒತ್ತಡ ಚಿಕಿತ್ಸೆ ಎಂದೂ ಕರೆಯುತ್ತಾರೆ. ಶಿಯಾಟ್ಸು ಎಂದರೆ ದೇಹದಲ್ಲಿರುವ ಶಕ್ತಿಯ ರೇಖೆಗಳ ಉದ್ದಕ್ಕೂ ಬೆರಳುಗಳು, ಹೆಬ್ಬೆರಳುಗಳು ಮತ್ತು ಮೊಣಕೈಗಳಿಂದ ಒತ್ತಡ ಹೇರುವುದು. ಅಲ್ಲದೆ, ನಿಮ್ಮ ಒಟ್ಟಾರೆ ಆರೋಗ್ಯ ಸುಧಾರಿಸಲು ನೀವು ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು. ದೈನಂದಿನ ಕೆಲಸಗಳನ್ನು ಸರಿಯಾಗಿ ಮಾಡುವುದು ಮತ್ತು ಯಾವುದೇ ಹಠಾತ್ ಕೆಲಸ ಮಾಡುವುದನ್ನು ತಪ್ಪಿಸುವುದರಿಂದ ಬೆನ್ನು ನೋವನ್ನು ತಪ್ಪಿಸಲು ಸಹಾಯ ಮಾಡುತ್ತದೆ.

## ಡಿಸ್ಕ್ ಸಮಸ್ಯೆಗಳು

**ಬೆನ್ನುಮೂಳೆಯು ಪರಸ್ಪರ ಸಂಪರ್ಕ ಹೊಂದಿದ ಮೂಳೆಗಳಿಂದ ಮಾಡಲ್ಪಟ್ಟಿದೆ. ಅದು ಒಂದರ ಮೇಲೊಂದು ಜೋಡಿಸಲ್ಪಡುತ್ತದೆ. ಎರಡು ಸತತ ಕಶೇರುಖಂಡಗಳ ನಡುವೆ ಒಂದು ಡಿಸ್ಕ್ ಇದ್ದು ಅದು ಕುಶನ್ ಆಗಿ ಕಾರ್ಯನಿರ್ವಹಿಸುತ್ತದೆ. ಈ ಒಂದು ಅಥವಾ ಹೆಚ್ಚಿನ ಡಿಸ್ಕ್‌ಗಳು ಹರ್ನಿಯೇಟೆಡ್ ಅಥವಾ ಛಿದ್ರವಾದಾಗ ಬೆನ್ನು ನೋವು ಉಂಟಾಗುತ್ತದೆ. ಉಬ್ಬುವ ಡಿಸ್ಕ್ ನಿಂದ ನರವು ಸಂಕುಚಿತಗೊಂಡಾಗ ನೋವು ಹೆಚ್ಚಾಗಿ ಸಂಭವಿಸುತ್ತದೆ. ಇಂತಹ ಸ್ಥಿತಿಯನ್ನು ಸಿಯಾಟಿಕಾ ಎಂದು ಕರೆಯಲಾಗುತ್ತದೆ.**

# ಹೃದಯಾಘಾತ ತಡೆಯಲು ಬೇಸಿಗೆಯಲ್ಲಿ ತರಕಾರಿಯ ರಸ ಕುಡಿಯಿರಿ

ಸೌತೆಕಾಯಿ ರಸವು ಉತ್ತಮ ಡಿಟಾಕ್ಸ್ ಪಾನೀಯವಾಗಿಯೂ ಕಾರ್ಯನಿರ್ವಹಿಸುತ್ತದೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ. ಪ್ರತಿದಿನ ಬೆಳಿಗ್ಗೆ ಈ ತರಕಾರಿಯ ರಸವನ್ನು ಕುಡಿದರೆ, ದೇಹದಿಂದ ಬೇಡದ ತ್ಯಾಜ್ಯಗಳು ಹೊರಗೆ ಹೋಗಿ ದೇಹವು ಶುದ್ಧವಾಗುತ್ತದೆ. ಇದು ನಮ್ಮನ್ನು ಅನೇಕ ರೋಗಗಳಿಂದ ರಕ್ಷಿಸುತ್ತದೆ. ಹಾಗಾದರೆ ಇದರಿಂದ ಆರೋಗ್ಯಕ್ಕೆ ಯಾವ ರೀತಿಯ ಉಪಯೋಗವಿದೆ ಎಂಬುದನ್ನು ತಿಳಿದುಕೊಳ್ಳಿ.

ಸೌತೆಕಾಯಿ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಇದರಲ್ಲಿರುವ ಸಮೃದ್ಧ ಪೋಷಕಾಂಶಗಳು ದೇಹಕ್ಕೆ ತುಂಬಾ ಒಳ್ಳೆಯದು. ಪೊಟ್ಯಾಸಿಯಮ್, ಮೆಗ್ನೀಸಿಯಮ್ ಸಮೃದ್ಧವಾಗಿರುವ ಇದು ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವವರಿಗೆ ಉತ್ತಮ ಆಹಾರವಾಗಿದೆ. ಬೇಸಿಗೆಯಲ್ಲಿ ಪ್ರತಿದಿನ ಸೌತೆಕಾಯಿಯ ಜ್ಯೂಸ್ ಸೇವನೆ ಮಾಡುವುದರಿಂದ ಆರೋಗ್ಯಕ್ಕೆ ಯಾವ ರೀತಿಯ ಪ್ರಯೋಜನಗಳಿವೆ ಎಂಬುದನ್ನು ತಿಳಿದುಕೊಳ್ಳಿ.





ಸೌತೆಕಾಯಿ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಇದರಲ್ಲಿರುವ ಸಮೃದ್ಧ ಪೋಷಕಾಂಶಗಳು ದೇಹಕ್ಕೆ ತುಂಬಾ ಒಳ್ಳೆಯದು. ಪೊಟ್ಯಾಸಿಯಮ್, ಮೆಗ್ನೀಸಿಯಮ್ ಸಮೃದ್ಧವಾಗಿರುವ ಇದು ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವವರಿಗೆ ಉತ್ತಮ ಆಹಾರವಾಗಿದೆ. ಬೇಸಿಗೆಯಲ್ಲಿ ಪ್ರತಿದಿನ ಸೌತೆಕಾಯಿಯ ಜ್ಯೂಸ್ ಸೇವನೆ ಮಾಡುವುದರಿಂದ ಆರೋಗ್ಯಕ್ಕೆ ಯಾವ ರೀತಿಯ ಪ್ರಯೋಜನಗಳಿವೆ ಎಂಬುದನ್ನು ತಿಳಿದುಕೊಳ್ಳಿ. ಸೌತೆಕಾಯಿ ರಸವು ಉತ್ತಮ ಡಿಟಾಕ್ಸ್ ಪಾನೀಯವಾಗಿಯೂ ಕಾರ್ಯನಿರ್ವಹಿಸುತ್ತದೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ. ಪ್ರತಿದಿನ ಬೆಳಿಗ್ಗೆ ಈ ತರಕಾರಿಯ ರಸವನ್ನು ಕುಡಿದರೆ, ದೇಹದಿಂದ ಬೇಡದ ತ್ಯಾಜ್ಯಗಳು ಹೊರಗೆ ಹೋಗಿ ದೇಹವು ಶುದ್ಧವಾಗುತ್ತದೆ. ಇದು ನಮ್ಮನ್ನು ಅನೇಕ ರೋಗಗಳಿಂದ ರಕ್ಷಿಸುತ್ತದೆ.

ಸೌತೆಕಾಯಿ ರಸವು ಉತ್ತಮ ಡಿಟಾಕ್ಸ್ ಪಾನೀಯವಾಗಿಯೂ ಕಾರ್ಯನಿರ್ವಹಿಸುತ್ತದೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ. ಪ್ರತಿದಿನ ಬೆಳಿಗ್ಗೆ ಈ ತರಕಾರಿಯ ರಸವನ್ನು ಕುಡಿದರೆ, ದೇಹದಿಂದ ಬೇಡದ ತ್ಯಾಜ್ಯಗಳು ಹೊರಗೆ ಹೋಗಿ ದೇಹವು ಶುದ್ಧವಾಗುತ್ತದೆ. ಇದು ನಮ್ಮನ್ನು ಅನೇಕ ರೋಗಗಳಿಂದ ರಕ್ಷಿಸುತ್ತದೆ. ಪ್ರತಿದಿನ ಸೌತೆಕಾಯಿ ಜ್ಯೂಸ್ ಕುಡಿಯುವುದರಿಂದ ದೇಹದಲ್ಲಿನ ಹೆಚ್ಚುವರಿ ಕೊಬ್ಬನ್ನು ಕರಗಿಸುತ್ತದೆ. ತೂಕ ಕೂಡ ಬೇಗನೆ ಕಡಿಮೆಯಾಗುತ್ತದೆ. ಹೊಟ್ಟೆಯಲ್ಲಿರುವ ಕೊಬ್ಬು ಸಹ ಕರಗುತ್ತದೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ. ಸ್ಥೂಲಕಾಯತೆ ಇರುವವರಿಗೆ ಸೌತೆಕಾಯಿ ರಸವು ತುಂಬಾ ಉಪಯುಕ್ತವಾಗಿದೆ. ಆದ್ದರಿಂದ ಇದನ್ನು ಪ್ರತಿದಿನ ಸೇವನೆ ಮಾಡುವುದು ಬಹಳ ಉತ್ತಮ.

**ಪ್ರತಿದಿನ ಸೌತೆಕಾಯಿ ಜ್ಯೂಸ್ ಕುಡಿಯುವುದರಿಂದ ದೇಹದಲ್ಲಿನ ಹೆಚ್ಚುವರಿ ಕೊಬ್ಬನ್ನು ಕರಗಿಸುತ್ತದೆ. ತೂಕ ಕೂಡ ಬೇಗನೆ ಕಡಿಮೆಯಾಗುತ್ತದೆ. ಹೊಟ್ಟೆಯಲ್ಲಿರುವ ಕೊಬ್ಬು ಸಹ ಕರಗುತ್ತದೆ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ. ಸ್ಥೂಲಕಾಯತೆ ಇರುವವರಿಗೆ ಸೌತೆಕಾಯಿ ರಸವು ತುಂಬಾ ಉಪಯುಕ್ತವಾಗಿದೆ. ಆದ್ದರಿಂದ ಇದನ್ನು ಪ್ರತಿದಿನ ಸೇವನೆ ಮಾಡುವುದು ಬಹಳ ಉತ್ತಮ.**

## ಕೊಲೆಸ್ಟ್ರಾಲ್ ನಿಯಂತ್ರಣ

**ಬೇಸಿಗೆಯ ದಿನಗಳಲ್ಲಿ ಸೌತೆಕಾಯಿ ಜ್ಯೂಸ್ ಕುಡಿಯುವುದರಿಂದ ಶಾಖದ ಅನುಭವವನ್ನು ಕಡಿಮೆ ಮಾಡುವ ಮೂಲಕ ದೇಹವನ್ನು ತಂಪಾಗಿಸುತ್ತದೆ. ಸನ್ ಸ್ಟ್ರೋಕ್ ನಿಂದ ರಕ್ಷಿಸುತ್ತದೆ ಎಂದು ತಜ್ಞರು ಹೇಳುತ್ತಾರೆ. ಅಲ್ಲದೆ ಇದರಲ್ಲಿರುವ ಪೊಟ್ಯಾಸಿಯಮ್ ಅಧಿಕ ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ. ನಮ್ಮ ದೇಹದಲ್ಲಿನ ಸಕ್ಕರೆ, ಕೊಲೆಸ್ಟ್ರಾಲ್ ಮಟ್ಟವನ್ನು ನಿಯಂತ್ರಣದಲ್ಲಿಡುತ್ತದೆ. ಜೊತೆಗೆ ಇದು ನಮ್ಮ ಹೃದಯವನ್ನು ಆರೋಗ್ಯಕರವಾಗಿರಿಸುತ್ತದೆ.**

# ರಸ್ತೆ ಪಕ್ಕದ ತಗ್ಗಿಗೆ ಉರುಳಿರುವ ಬಸ್: ಪ್ರಯಾಣಿಕರಿಗೆ ಗಾಯ

• ಉದಯವಾಹಿನಿ, ಮುದ್ದೇಬಿಹಾಳ

ಏಕಾಏಕಿ ಅಡ್ಡಬಂದ ವಯೋವೃದ್ದೆಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ನಿಯಂತ್ರಣ ತಪ್ಪಿದ ಸಾರಿಗೆ ಸಂಸ್ಥೆಯ ಬಸ್ಸೊಂದು ರಸ್ತೆ ಪಕ್ಕದ ತಗ್ಗಿಗೆ ಉರುಳಿದ್ದು ಚಾಲಕ, ನಿರ್ವಾಹಕ, ನಾಲ್ವರು ಪ್ರಯಾಣಿಕರು ಗಾಯಗೊಂಡಿರುವ ಘಟನೆ ಬುಧವಾರ ಸಂಜೆ ಗೆದ್ದಲಮರಿ ಗ್ರಾಮದ ಹತ್ತಿರ ಆಲಮಟ್ಟಿ ರಸ್ತೆಯಲ್ಲಿ ನಡೆದಿದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಾಗಲಕೋಟೆ ಸಾರಿಗೆ ಘಟಕಕ್ಕೆ ಸೇರಿದ ಬಾಗಲಕೋಟೆ-ಮುದ್ದೇಬಿಹಾಳ ಮಾರ್ಗದ ಬಸ್ (ಕೆಎ29 ಎಫ್1173) ಮುದ್ದೇಬಿಹಾಳ ಬಸ್ ನಿಲ್ದಾಣಕ್ಕೆ ಬಂದು ಮರಳಿ ಬಾಗಲಕೋಟೆಗೆ ಹೋಗುವಾಗ ಈ ಘಟನೆ ನಡೆದಿದೆ.


ಉದಯವಾಹಿನಿ ಚಿತ್ರ

ಬಸ್ಸಿನಲ್ಲಿ ಐವರು ಪ್ರಯಾಣಿಕರಿದ್ದರು. ಗಾಯಗೊಂಡ ಎಲ್ಲರಿಗೂ ಮುದ್ದೇಬಿಹಾಳದ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ಗಂಭೀರವಾಗಿ ಗಾಯಗೊಂಡಿರುವ ತಾಯಿ ಈರಮ್ಮ ಕಂಬಾರ, ಮಗಳು ಸಂಗಿತಾ ಕಂಬಾರ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಾಗಲಕೋಟೆ ಆಸ್ಪತ್ರೆಗೆ ಕಳಿಸಿಕೊಡಲಾಗಿದೆ. ಈ ಕುರಿತು ಚಾಲಕ ಬಸವರಾಜ ಗೋಪಾಲ ರಾಠೋಡ ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಘಟನಾ ಸ್ಥಳಕ್ಕೆ ಪಿಎಸ್ಐ ಸಂಜಯ್ ತಿಪ್ಪರಡ್ಡಿ, ಮುದ್ದೇಬಿಹಾಳ ಸಾರಿಗೆ ಘಟಕ ವ್ಯವಸ್ಥಾಪಕ ಎ.ಎಚ್.ಮದಭಾವಿ ಅವರು ಧಾವಿಸಿ ಬಸ್ ಅನ್ನು ಕ್ರೇನ್ ಸಹಾಯದಿಂದ ಮೇಲೆತ್ತಿ ಸಂಚಾರ ಸುಗಮಗೊಳಿಸಲು ನೆರವಾದರು. ಚಾಲಕನ ಸಮಯ ಪ್ರಜ್ಞೆಯಿಂದ ವಯೋವೃದ್ದೆಯ ಪ್ರಾಣ ಉಳಿಯಿತಾದರೂ ಬಸ್‌ನಲ್ಲಿರುವ ಪ್ರಯಾಣಿಕರು ಗಾಯಗೊಂಡದ್ದು ಚರ್ಚೆಗೆಡೆಮಾಡಿಕೊಟ್ಟಿತು.

# ತೆಲಂಗಾಣಕ್ಕೆ 10 ಟಿಎಂಸಿ ನೀರು: ಜಿಗಜಿಣಗಿ ವಿರೋಧ

• ಉದಯವಾಹಿನಿ, ವಿಜಯಪುರ

ನಾರಾಯಣಪೂರ ಜಲಾಶಯದಿಂದ ತೆಲಂಗಾಣಕ್ಕೆ 1.2 ಟಿಎಂಸಿ ನೀರು ಬಿಡುತ್ತೇವೆಂದು ಹೇಳಿ ಈಗ 10 ಟಿಎಂಸಿ ನೀರು ಬಿಟ್ಟಿರುವ ರಾಜ್ಯ ಸರ್ಕಾರದ ಕ್ರಮವನ್ನು ಸಂಸದ ರಮೇಶ ಜಿಗಜಿಣಗಿ ಖಂಡಿಸಿದ್ದಾರೆ. ಬಿರು ಬೇಸಿಗೆಯ ಸಂದರ್ಭದಲ್ಲಿ ವಿಜಯಪುರ ನಗರ ಸೇರಿದಂತೆ ಜಿಲ್ಲಾದ್ಯಂತ ಕುಡಿಯುವ ನೀರಿನ ಕೊರತೆಯಾದರೆ ಯಾರು ಹೊಣೆ ಎಂದು ಪ್ರಶ್ನಿಸಿದ್ದಾರೆ. ಕೆರೆಗಳಿಗೆ ನೀರು ತುಂಬಿಸಿ ಎಂದು ನಾವೇ ಹೇಳಿದರೆ ಬೇಸಿಗೆಯ ಸಂದರ್ಭವಿದೆ ಜಿಲ್ಲೆಯ ಜನತೆಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ ಎಂದು ಹೇಳುತ್ತಿರುವ ರಾಜ್ಯ ಸರ್ಕಾರ ಈಗ ನೆರೆಯ ತೆಲಂಗಾಣಕ್ಕೆ 10 ಟಿಎಂಸಿ ನೀರು ಬಿಟ್ಟಿರುವ ಔಚಿತ್ಯ ಎನಿತ್ತು ಎಂದು ಪ್ರಶ್ನಿಸಿದ್ದಾರೆ.



ಸದ್ಯವೇ ವಿಜಯಪುರ ನಗರಕ್ಕೆ 4-8 ದಿನಗಳಿಗೊಮ್ಮೆ ನೀರು ಪೂರೈಕೆಯಾಗುತ್ತಿದೆ. ಮುಂದಿನ 75 ದಿನಗಳ ಕಾಲ ಬೇಸಿಗೆ ಕಾಲವಾಗಿರುವದರಿಂದ ಮುಂದಿನ ದಿನಗಳಲ್ಲಿ ಏನಾದರೂ ಕುಡಿಯುವ ನೀರಿನ ಸಮಸ್ಯೆಯಾದರೆ ರಾಜ್ಯ ಸರ್ಕಾರವೇ ಹೊಣೆಯಾಗುತ್ತದೆ ಎಂದು ಸಂಸದ ರಮೇಶ ಜಿಗಜಿಣಗಿ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

## ಎಸ್‌ಎಸ್‌ಎಲ್‌ಸಿ ಪೂರ್ವಭಾವಿ ಸಭೆ ಇಂದು

• ಉದಯವಾಹಿನಿ, ಮುದ್ದೇಬಿಹಾಳ

ಬಿಇಓ ಕಾರ್ಯಾಲಯದ ಸಭಾ ಭವನದಲ್ಲಿ ಮಾ.20ರಂದು ಬೆಳಿಗ್ಗೆ 10 ಗಂಟೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಮಿತಿ ಅಧ್ಯಕ್ಷ, ತಹಶೀಲ್ದಾರ್ ಬಲರಾಮ ಕಟ್ಟಿಮನಿ ಅವರ ಅಧ್ಯಕ್ಷತೆಯಲ್ಲಿ ತಯಾರಿ ಕುರಿತಾದ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ. ಪರೀಕ್ಷೆಗೆ ನಿಯೋಜನೆಗೊಂಡಿರುವ ಎಲ್ಲಾ ಹಂತಗಳ ಅಧಿಕಾರಿ ವರ್ಗದವರು ಹಾಜರಾಗಬೇಕು ಎಂದು ಸಮಿತಿ ಕಾರ್ಯದರ್ಶಿ ಬಿಇಓ ಬಿ.ಎಸ್.ಸಾವಳಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯುವಕನ ಕೊಲೆ: ಆರೋಪಿಗಳ ಬಂಧನ

• ಉದಯವಾಹಿನಿ, ಕಲಬುರಗಿ

ನಗರದ ರಾಜಾಪುರ ಕ್ರಾಸ್ ಹತ್ತಿರ ಈಚೆಗೆ ನಡೆದ ಪ್ರಶಾಂತ ನಗರದ ರೇವಣಸಿದ್ದಪ್ಪ ತಂದೆ ರಾಮಣ್ಣ ಪಾಳೇಕಾರ್ (33) ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಠಾಣೆ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಆಕಾಶ, ಪ್ರಶಾಂತ ಪೂಜಾರಿ ಮತ್ತು ಕೃಷ್ಣ ರಾಠೋಡ್ ಬಂಧಿತ ಆರೋಪಿಗಳು. ಪ್ರಶಾಂತ ನಗರದ ರೇವಣಸಿದ್ದಪ್ಪ ಪಾಳೇಕಾರ್ ಅವರನ್ನು ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು. ಈ ಸಂಬಂಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

## ಮರದ ಕೊಂಬೆ ಮುರಿದು ಮೂವರು ವಿದ್ಯಾರ್ಥಿನಿಯರಿಗೆ ಗಾಯ

• ಉದಯವಾಹಿನಿ, ಮಂಗಳೂರು

ನಗರದ ಹಂಪನಕಟ್ಟೆ ಬಳಿಯ ಶೆಟ್ಟಿ ಆಟೋ ಪಾರ್ಕ್‌ನಲ್ಲಿ ಸಂಜೆ ಹಳೆಯ ಮರವೊಂದರ ದೊಡ್ಡ ಕೊಂಬೆ ಏಕಾಏಕಿ ಮುರಿದು ಬಿದ್ದ ಪರಿಣಾಮ ಮೂವರು ವಿದ್ಯಾರ್ಥಿನಿಯರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಗೊಂಡ ವಿದ್ಯಾರ್ಥಿನಿಯರನ್ನು ಮಲ್ಲೂರು ಉದ್ದಬೆಟ್ಟು ನಿವಾಸಿಗಳಾದ ಮರಿಯಂ ಮುಫೀದಾ(18), ಫಾಹಿಮಾ ಮರಿಯಂ(17) ಹಾಗೂ ಅಬ್ಬೆಟ್ಟು ನಿವಾಸಿ ಅಫ್ರತ್(18) ಎಂದು ಗುರುತಿಸಲಾಗಿದೆ. ಈ ಪೈಕಿ ಅಫ್ರತ್‌ಗೆ ಗಂಭೀರ ಗಾಯಗಳಾಗಿದ್ದು, ಉಳಿದವರಿಗೂ ಪೆಟ್ಟಾಗಿದೆ ಎಂದು ತಿಳಿದು ಬಂದಿದೆ. ಬಲ್ಮಠದ ಖಾಸಗಿ ಕಾಲೇಜಿನ ವಿದ್ಯಾರ್ಥಿನಿಯರಾದ ಇವರು, ಎಂದಿನಂತೆ ಸಂಜೆ 4:30ರ ಸುಮಾರಿಗೆ ಮನೆಗೆ ತೆರಳಲು ಹಂಪನಕಟ್ಟೆ ಬಳಿ ಬಸ್‌ಗಾಗಿ ಕಾಯುತ್ತಿದ್ದರು. ಜನನಿಬಿಡ ಪ್ರದೇಶದಲ್ಲಿ ಇದ್ದಕ್ಕಿದ್ದಂತೆ ಮರದ ಕೊಂಬೆ ಮುರಿದು ಬಿದ್ದಿದೆ. ಈ ವೇಳೆ ಸುತ್ತಮುತ್ತಲಿದ್ದವರು ಅಪಾಯದಿಂದ ಪಾರಾಗಿದ್ದರೂ, ಮೂವರು ವಿದ್ಯಾರ್ಥಿನಿಯರು ಮಾತ್ರ ದುರಾದೃಷ್ಟವಶಾತ್ ಸಿಲುಕಿಕೊಂಡಿದ್ದಾರೆ.

### ಯಾವುದೇ ಲೋಪಕ್ಕೆ ಆಸ್ಪದ ನೀಡದೇ ಕಾರ್ಯ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಅಧಿಕಾರಿ, ಸಿಬ್ಬಂದಿಗಳಿಗೆ ಸೂಚನೆ

# ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಸೂತ್ರವಾಗಿ ಹಾಗೂ ಪಾರದರ್ಶಕವಾಗಿ ನಿರ್ವಹಿಸಿ

• ಉದಯವಾಹಿನಿ, ವಿಜಯಪುರ

ಮಾರ್ಚ್ 21 ರಿಂದ ಆರಂಭವಾಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ -1 ಪಾರದರ್ಶಕವಾಗಿ, ಸುಸೂತ್ರವಾಗಿ ಹಾಗೂ ಸಮರ್ಪಕವಾಗಿ ನಡೆಯುವ ನಿಟ್ಟಿನಲ್ಲಿ ಯಾವುದೇ ಲೋಪಕ್ಕೆ ಆಸ್ಪದ ನೀಡದೇ ಕಾರ್ಯ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಪರೀಕ್ಷೆಗೆ ನಿಯೋಜಿತ ಅಧಿಕಾರಿ, ಸಿಬ್ಬಂದಿಗಳಿಗೆ ಸೂಚನೆ ನೀಡಿದರು.

ಮಂಗಳವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮದಿರದಲ್ಲಿ ನಡೆದ 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ರ ಪೂರ್ವ ಸಿದ್ಧತೆ, ಅನುಸರಣೆ ಹಾಗೂ ಅನುಷ್ಠಾನದ ಕುರಿತು ಪುನಶ್ಚೇತನ-ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪರೀಕ್ಷೆಗೆ ನಿಯೋಜಿತ ವಿವಿಧ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ನಿರ್ವಹಿಸಿಬೇಕಾದ ಕರ್ತವ್ಯ, ಜವಾಬ್ದಾರಿ ಕುರಿತು ಸೂಚನೆಗಳನ್ನು ನೀಡಿದರು. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಗಾಳಿ, ಬೆಳಕು ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನೀಡಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪರೀಕ್ಷೆಯಲ್ಲಿ ವೆಬ್ ಕಾಸ್ಟಿಂಗ್ ಕಡ್ಡಾಯವಾಗಿದ್ದು ಇದಕ್ಕೆ ಪೂರಕವಾಗಿ ಸಮರ್ಪಕ ಇಂಟರ್ ನೆಟ್ ಹಾಗೂ ಯಾವುದೇ ತಾಂತ್ರಿಕ ಸಮಸ್ಯೆಗಳು ಉದ್ಭವಿಸದಂತೆ ಪರಿಹಾರ ಸೌಲಭ್ಯ ಕಲ್ಪಿಸಿರುವುದನ್ನು ಮೇಲಾಧಿಕಾರಿಗಳು ಮುಂಚೆಯೇ ಖಚಿತಪಡಿಸಿಕೊಳ್ಳಬೇಕು. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ನಿರಂತರ ವಿದ್ಯುತ್ ಪೂರೈಕೆಯಾಗುವ ನಿಟ್ಟಿನಲ್ಲಿ ಕ್ರಮವಹಿಸಬೇಕು. ಪ್ರಿಸ್ಕಿಂಗ್ ಕಾರ್ಯವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸುವ ಮೂಲಕ ಯಾವುದೇ ಲೋಪವಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ಸಿದ್ಧತೆಯ ಬಗ್ಗೆ ಮಾಹಿತಿ**

**ಮಾರ್ಚ್ 21 ರಿಂದ ಏಪ್ರಿಲ್ 04ರವರೆಗೆ ನಡೆಯುವ ಪರೀಕ್ಷೆಗೆ ಜಿಲ್ಲೆಯಲ್ಲಿ 22,908 ಬಾಲಕರು 20,168 ಬಾಲಕೀಯರು ಸೇರಿದಂತೆ ಒಟ್ಟು 43,076 ವಿದ್ಯಾರ್ಥಿಗಳು ಪರೀಕ್ಷೆ ನೋಂದಾಯಿಸಿಕೊಂಡಿದ್ದಾರೆ. 131 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತಿದ್ದು, ಯಾವುದೇ ಲೋಪವಾಗದಂತೆ ಎಲ್ಲಾ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಟಿ.ಎಸ್. ಕೋಲಾರ ಅವರು ಪರೀಕ್ಷಾ ಪೂರ್ವ ಸಿದ್ಧತೆಯ ಬಗ್ಗೆ ಮಾಹಿತಿ ನೀಡಿದರು.**

> **ಪರೀಕ್ಷಾ ಕೇಂದ್ರಗಳಿಗೆ ನಿಗದಿತ ಸಮಯಕ್ಕೆ ಪ್ರಶ್ನೆ ಪತ್ರಿಕೆಗಳು ತಲುಪುವಂತೆ ನೋಡಿಕೊಳ್ಳಬೇಕು. ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ಅತ್ಯಂತ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕು. ಪರೀಕ್ಷಾ ಕೇಂದ್ರಗಳಿಗೆ ಕಲ್ಪಿಸಿರುವ ವ್ಯವಸ್ಥೆ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಯಾವುದೇ ಸಮಸ್ಯೆಗಳು ಉದ್ಭವವಾದಲ್ಲಿ ತಕ್ಷಣ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಬೇಕು. ಪರೀಕ್ಷಾ ಮಾರ್ಗ ಸೂಚಿಗಳಂತೆ ಯಾವುದೇ ಲೋಪವಾಗದಂತೆ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುವಂತೆ ಅವರು ಸೂಚಿಸಿದರು -ರಿಷಿ ಆನಂದ, ಜಿ.ಪಂ ಮುಖ್ಯ ಕಾರ್ಯನಿರ್ವಾಹನಾಧಿಕಾರಿ ರಿಷಿ ಆನಂದ**

ಪರೀಕ್ಷಾ ದಿನಗಳಂದು ವೆಬ್‌ಕಾಸ್ಟಿಂಗ್ ಕಡ್ಡಾಯವಾಗಿರುವುದರಿಂದ ಅಳವಡಿಸಿರುವ ಸಿಸಿಟಿವಿ ಮುಂಚಿತವಾಗಿಯೇ ಪರಿಶೀಲನೆ ನಡೆಸಬೇಕು. ಹೈಸ್ಪೀಡ್ ಇಂಟರನೆಟ್ ಸೌಲಭ್ಯ ಕಲ್ಪಿಸಿರಬೇಕು. ಮುಂಜಾಗ್ರತಾ ಕ್ರಮವಾಗಿ ಯುಪಿಎಸ್ ಬ್ಯಾಟರಿ ಬ್ಯಾಕ್ ಅಪ್ ವ್ಯವಸ್ಥೆ ಅಳವಡಿಸಿರಬೇಕು. ಯಾವುದೇ ಗೊಂದಲಕ್ಕೆ ಒಳಗಾಗದೇ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಪಾರದರ್ಶಕ ಹಾಗೂ ಸುವ್ಯವಸ್ಥಿತವಾಗಿ ಪರೀಕ್ಷೆ ನಡೆಸುವ ದೃಷ್ಟಿಯಿಂದ ಮುಂಜಾಗೃತ ಕ್ರಮವಾಗಿ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮಿ. ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಲಾಗಿದೆ. ತುರ್ತು ಸಂದರ್ಭದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ವೈದ್ಯಕೀಯ ಸೌಲಭ್ಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮನಗೌಡ ಹಟ್ಟಿ, ಬೆಳಗಾವಿ ವಿಭಾಗದ ಜಂಟಿ ನಿರ್ದೇಶಕ ಸಕ್ರೆಪ್ಪ ಬಿರಾದಾರ, ಜಮಖಂಡಿಯ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರು ಆದ ಜಿಲ್ಲಾ ನೋಡಲ್ ಅಧಿಕಾರಿ ಮಂಗಳಾ ನಾಯಕ, ಪರೀಕ್ಷೆಗೆ ನಿಯೋಜಿತ ಅಧಿಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ನದಿ ತೀರದ ಕಪ್ಪು ಮಣ್ಣು ಅಕ್ರಮ ಸಾಗಾಟ

## ಹಿಟಾಚಿ, 3 ಟಿಪ್ಪರ್ ವಶ: 6 ಜನರ ಮೇಲೆ ಪ್ರಕರಣ

• ಉದಯವಾಹಿನಿ, ಮುದ್ದೇಬಿಹಾಳ

ತಾಲ್ಲೂಕಿನ ಕೃಷ್ಣಾ ನದಿ ತೀರದ ಅಮರಗೋಳ ಗ್ರಾಮ ವ್ಯಾಪ್ತಿಯಲ್ಲಿ ಸರ್ಕಾರದ ಅನುಮತಿ ಅಥವಾ ರಾಯಲ್ಟಿ ಸಂದಾಯದ ದಾಖಲೆ ಇಲ್ಲದೆ ಕಳ್ಳತನದಿಂದ ಅಕ್ರಮವಾಗಿ ಕಪ್ಪು ಎರೆ ಮಣ್ಣನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಿಸಲು ಮುಂದಾಗಿದ್ದ ತಂಡದ ಮೇಲೆ ಮುದ್ದೇಬಿಹಾಳ ಪಿಎಸ್ಐ ಸಂಜಯ್ ತಿಪ್ಪರಡ್ಡಿ ನೇತೃತ್ವದ ತಂಡ ಮಂಗಳವಾರ ದಾಳಿ ನಡೆಸಿ ಮೂರು ಟಿಪ್ಪರ್, ಒಂದು ಹಿಟಾಚಿ ಯಂತ್ರ ವಶಪಡಿಸಿಕೊಂಡಿದೆ.


ಉದಯವಾಹಿನಿ ಚಿತ್ರ

**ದಾಖಲೆ ಇಲ್ಲದೆ ಕಳ್ಳತನ**

ಇದಲ್ಲದೆ ಅಕ್ರಮದಲ್ಲಿ ತೊಡಗಿದ್ದ ಮುದ್ದೇಬಿಹಾಳ ತಾಲ್ಲೂಕು ಢವಳಗಿಯ ರಮೇಶ ಸಂಗಣ್ಣ ಭೀರಗೊಂಡ, ಅರಸನಾಳದ ಮಹೇಶ ಸಿದ್ದಪ್ಪ ಮೂಲಿಮನಿ, ಮಲ್ಲೇಶ ಸಿದ್ದಪ್ಪ ಕೆಸಾಪುರ, ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕು ಕಕ್ಕೇರಾದ ಮಾಳಿಂಗರಾಯ ಸೋಮಣ್ಣ ಐದುಬಾವಿ, ಬಾಗಲಕೋಟ ಜಿಲ್ಲೆ ಹುನಗುಂದ ತಾಲ್ಲೂಕು ಮರಟಗೇರಿಯ ರೇಣುಕಾ ಹಣಮಂತಪ್ಪ ಯರಜೇರಿ, ಹಣ ಮಂತಪ್ಪ ಯರಜೇರಿ ವಿರುದ್ಧ ಬಿಎನ್‌ಎಸ್ ಕಾಯ್ದೆ 303ರ ಅಡಿಯಲ್ಲಿ ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಕ್ರಮ ಮಣ್ಣು ಅಗೆತ, ಸಾಗಾಟ ತಡೆಯುವಂತೆ ಆಗ್ರಹಿಸಿ ತಾಲ್ಲೂಕು ಆಡಳಿತ ಸೌಧ ಆವರಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಬಣ, ಯುವಜನ ಸೇನೆ ಸಂಘಟನೆ ಪದಾಧಿಕಾರಿಗಳು, ಸದಸ್ಯರು ಕಣ್ಣು, ಕಿವಿ, ಬಾಯಿ ಮುಚ್ಚುಕೊಂಡ ಮಂಗಗಳ ಫ್ಲೆಕ್ಸ್ ಹಿಡಿದು ತಮ್ಮ ಕಣ್ಣಿಗೆ, ಕಿವಿಗೆ, ಬಾಯಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಪ್ರತಿಭಟನೆ ನಡೆಸಿದ್ದೂ ಅಲ್ಲದೆ ಒಂದು ದಿನದ ಸಾಂಕೇತಿಕ ಧರಣಿ ಸತ್ಯಾಗ್ರಹ ನಡೆಸಿದ್ದ ಮತ್ತು ಎರಡು ದಿನಗಳ ಹಿಂದೆ ವಿಜಯಪುರ ಲೋಕಾಯುಕ್ತ ಪೊಲೀಸ್ ಇನ್ಸಪೆಕ್ಟರ್ ಆನಂದ ಠಕ್ಕನವರ್ ಅವರು ಅಕ್ರಮ ನಡೆಯುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಸಂಗ್ರಹಿಸಿದ್ದ ಹಿನ್ನೆಲೆ ಪೊಲೀಸರು ಸ್ವಯಂಪ್ರೇರಿತರಾಗಿ ಈ ಕ್ರಮ ಕೈಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ವೈಟ್ ಕೋಬ್ರಾದೊಂದಿಗೆ ಕಾದಾಡಿ ಮಕ್ಕಳ-ಕಾರ್ಮಿಕರ ಉಳಿಸಿ ಪ್ರಾಣ ಬಿಟ್ಟ ಪಿಟ್ ಬುಲ್

• ಉದಯವಾಹಿನಿ, ಹಾಸನ

ನಾಯಿ ನಿಯತ್ತಿನ ಪ್ರಾಣಿ ಎಂದು ಪದೇ ಪದೇ ಸಾಬಿತಾಗುತ್ತಿದೆ. ಶ್ವಾನಗಳೆರಡು ಬೃಹತ್ ಕಾಳಿಂಗ ಸರ್ಪದೊಂದಿಗೆ ಕಾದಾಡಿ ಮಕ್ಕಳು ಹಾಗೂ ಕೂಲಿ ಕಾರ್ಮಿಕರನ್ನು ಕಾಪಾಡಿದ್ದು, ನೆಚ್ಚಿನ ಶ್ವಾನವೊಂದು ಜೀವತೆತ್ತಿವೆ.

ತಾಲ್ಲೂಕಿನ ಕಟ್ಟಾಯ ಗ್ರಾಮದ ಶ್ರಮಂತ್ ಎಂಬುವರು ತಮ್ಮ ತೋಟದಲ್ಲಿ ಪಿಟ್ ಬುಲ್ ಹಾಗೂ ಡಾಬರ್ ಮನ್ ನಾಯಿಗಳನ್ನು ಸಾಕಿದ್ದರು. ಬಿಟ್‌ಬುಲ್ ಶ್ವಾನಕ್ಕೆ ಪ್ರಿತಿಯಿಂದ ಮಾಲೀಕ ಭೀಮ ಎಂದು ಹೆಸರಿಟ್ಟಿದ್ದರು.

ತೋಟದಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾಗ ಶಬ್ದ ಆಲಿಸಿದ ಸುಮಾರು 12 ಅಡಿ ಉದ್ದದ ಬಿಳಿಬಣ್ಣದ ಕಾಳಿಂಗ ಸರ್ಪ ಮನೆ ಬಳಿ ಆಟವಾಡುತ್ತಿದ್ದ ಮಕ್ಕಳ ಬಳಿಗೆ ಬಂದು, ಸರ್ಪ ತೆಂಗಿನ ಗರಿಯ ಕೆಳಗೆ ಅವಿತು ಕುಳಿತಿತ್ತು. ಇದನ್ನು ಗಮನಿಸಿದ ಶ್ವಾನಗಳು ಏಕಾಏಕಿ ಕಾಳಿಂಗ ಸರ್ಪದ ಮೇಲೆ ಎರಗಿವೆ. ಮಾಲೀಕ ಕರೆದರೂ ಬಾರದೆ ಸುಮಾರು 15 ನಿಮಿಷಗಳಿಗೂ ಹೆಚ್ಚು ಕಾಲಿ ವೈಟ್ ಕೊಬ್ರಾ ಜೊತೆ ಸೆಣಸಾಡಿವೆ.

ಈ ವೇಳೆ ಹಾವು ಪಿಟ್ ಬುಲ್ ನಾಯಿಯ ಮುಖಕ್ಕೆ ಕಚ್ಚಿದೆ. ಆದರೂ ಹಠಬಿಡದ ಶ್ವಾನ ನಿರಂತರವಾಗಿ ಹಾವಿನೊಂದಿಗೆ ಸೆಣಸಾಡಿ 12 ಉದ್ದದ ಸರ್ಪವನ್ನು 10 ತುಂಡುಗಳಾಗಿ ಮಾಡಿ ಸಾಯಿಸಿ ಬಿಟ್ಟಿವೆ.

ಆದರೆ ವಿಷ ವೇರಿ ಬಿಟ್ ಬುಲ್ ಶ್ವಾನ ಪ್ರಾಣಬಿಟ್ಟಿದೆ. ಒಂದು ವೇಳೆ ಶ್ವಾನಗಳು ಬಾರದಿದ್ದರೆ ಕೂಲಿ ಕಾರ್ಮಿಕರು ಅಥವಾ ಮಕ್ಕಳ ಮೇಲೆ ವೈಟ್ ಕೊಬ್ರಾ ದಾಳಿ ಮಾಡುತಿತ್ತು. ಶ್ವಾನಗಳ ಸಮಯ ಪ್ರಜ್ಞೆಯಿಂದ ಸಂಭವಿಸಬಹುದಾದ ದುರಂತವೊಂದು ತಪ್ಪಿದಂತಾಗಿದೆ.

# ಸುಖ ಶಾಂತಿಯ ಸೂತ್ರವೇ ಜೀವನ ದರ್ಶನದ ಮಾರ್ಗಸೂಚಿ

• ಉದಯವಾಹಿನಿ, ಭಾಲ್ಕಿ

ಮನುಷ್ಯನ ಬದುಕಿನಲ್ಲಿ ಸುಖ ಶಾಂತಿ, ಸಮಾಧಾನ ಅತೀ ಮುಖ್ಯವಾದದ್ದು ಅದಕ್ಕಾಗಿ ಈ 3 ದಿವಸಗಳ ಅವಧಿಯಲ್ಲಿ ಹುಬ್ಬಳ್ಳಿಯ ವರಿಷ್ಠ ರಾಜಯೋಗ ಶಿಕ್ಷಕಿ ಬ್ರಹ್ಮಕುಮಾರಿ ಸಹೋದರಿ ವೀಣಾಜಿಯವರು ಹೇಳಿಕೊಟ್ಟ ಸೂತ್ರವೇ ಜೀವನ ದರ್ಶನದ ಮಾರ್ಗಸೂಚಿಯಾಗಿದೆ ಎಂದು ಬೀದರಿನ ಪಾವನ ಧಾಮದ ಬ್ರಹ್ಮಕುಮಾರಿ ಪ್ರತಿಮಾ ಬೆಹನಜಿ ಪ್ರತಿಪಾದಿಸಿದರು. ಪಟ್ಟಣದ ಭಾಲ್ಕೇಶ್ವರ ಮಂದಿರದ ಆವರಣದಲ್ಲಿ, ಬ್ರಹ್ಮಕುಮಾರಿ ಸಹೋದರಿ ವೀಣಾಜಿಯವರು ಸಹಯೋಗದಲ್ಲಿ, 89ನೇ ತ್ರೀಮೂರ್ತಿ ಮಹಾಶಿವರಾತ್ರಿ ಮಹೋತ್ಸವ ನಿಮಿತ್ಯ ಆಯೋಜಿಸಿದ್ದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು.

ಬ್ರಹ್ಮಕುಮಾರಿ ಸಹೋದರಿ ವೀಣಾಜಿಯವರು ಮೂರು ದಿವಸಗಳ ಪರ್ಯಂತ ಎಲ್ಲಾ ಶಿವ ಭಕ್ತರನ್ನು ಉದ್ದೇಶಿಸಿ ಮಾತನಾಡಿ ಪರಿಪೂರ್ಣತೆಯೊಡೆಗಿನ ಪ್ರಯಾಣವೆ ನಿಜವಾದ ಜೀವನ ದರ್ಶನವಾಗಿದೆ ನಮ್ಮಲ್ಲಿ ಎಲ್ಲವೂ ಇದೇ, ಆದರೆ ನಾವು ಸುಖವಾಗಿಲ್ಲ. ಕಾರಣ ನಮ್ಮಲ್ಲಿರುವ ಅತಿಯಾದ ಇಚ್ಛೆ, ನಮ್ಮಲ್ಲಿರುವ ಅತಿಯಾದ ಇಚ್ಛೆಯನ್ನು ಹೊರತಳ್ಳಿ, ಇದ್ದಷ್ಟರಲ್ಲಿಯೇ ಸಂತುಷ್ಟರಾಗಿರುವುದೇ ನಿಜ ಜೀವನವಾಗಿದೆ. ಜೀವನದಲ್ಲಿ ಪ್ರಕಾಶ ತುಂಬಿ ಸದಾ ಪರಮಾತ್ಮನನ್ನು ಯಾರು ಕಾಣಲು ಪ್ರಯತ್ನಿಸುತ್ತಾರೆಯೋ ಅವರು ಸುಖಿ ಜೀವನ ಸಾಗಿಸುವರು. ಮನುಷ್ಯನ ಬಂಧನ ಮತ್ತು ಮೋಕ್ಷಕ್ಕೆ ಕಾರಣ ಮನಸ್ಸು, ಈ ಮನಸ್ಸನ್ನು ತಿಳಿಗೊಳಿಸಿ, ದೇವರತ್ತ ತಿರುಗಿಸಿದರೆ ಬಂಧ ಮುಕ್ತರಾಗಲು ಸಾಧ್ಯ. ಪ್ರಕೃತಿಯ ನಿರ್ಮಾತೃ ಆ ಪರಮಾತ್ಮನನ್ನು ತಿಳಿಯುವ ಕಾರ್ಯವಾಗಬೇಕು. ಪರಮಾತ್ಮನನ್ನು ಯಾವಾತ ತಿಳಿದುಕೊಳ್ಳುತ್ತಾನೋ ಅವನು ಸುಖಿ ಜೀವನ ನಡೆಸುತ್ತಾನೆ. ಅದಕ್ಕೆ ಸದಾ ಧ್ಯಾನಸ್ಥರಾಗಿ, ನಮ್ಮ ನಿಜ ಸ್ವರೂಪವನ್ನು ಅರಿತುಕೊಳ್ಳಬೇಕು ಎಂದು ಹೇಳಿದರು.



ಉದಯವಾಹಿನಿ ಚಿತ್ರ

> **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಭಾಲ್ಕಿಯ ಸಹೋದರಿ ರಾಧಾ ಬೆಹನಜಿಯವರ ಕಾರ್ಯ ಹಾಗೂ ಶಿಸ್ತು ಬದ್ಧತೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ, ಇಂದಿನ ದಿನಮಾನಗಳಲ್ಲಿ ಮಾನವನ ಜೀವನದಲ್ಲಿ ಭೌತಿಕ ಸುಖಕ್ಕಿಂತ ಮಾನಸಿಕ ಸುಖ, ಶಾಂತಿ ನೆಮ್ಮದಿಯ ಬದುಕು ಅವಶ್ಯಕವಾಗಿದೆ ಅಂತಹ ಕಾರ್ಯ ಓಂ ಶಾಂತಿಯ ಕೇಂದ್ರದವರು ಮಾಡಿತ್ತಿರುವುದು ಸಂತಸ ತಂದಿದೆ -ಗುರುಬಸವ ಪಟ್ಟದ್ದೇವರು, ಹಿರೇಮಠ ಸಂಸ್ಥಾನದ ಸ್ವಾಮೀಜಿ**

ಇದೇ ಸಂದರ್ಭದಲ್ಲಿ ಸರಕಾರಿ ಪದವಿ ಕಾಲೇಜಿನ ಪ್ರಾಚಾರ್ಯ ಮಲ್ಲಿಕಾರ್ಜುನ ಕಾಂಬಳೆ ಮಾತನಾಡಿ, ದೇವರು ಅಭೌತಿಕ ಶಕ್ತಿ, ತಾಯಿಯ ಪ್ರೀತಿಯಂತೆ ದೇವರ ಅನುಭೂತಿ, ತಾಯಿ ಪ್ರೀತಿ ನಮ್ಮ ಕಣ್ಣಿಗೆ ಕಾಣದಿದ್ದರೂ ಅದು ಅನುಭವ ಯೋಗವಾಗಿದೆ ಎಂದು ಹೇಳಿದರು. ಇದೇವೇಳೆ ಪುಟಾಣಿ ಮಕ್ಕಳಿಂದ ನಡೆಸಿಕೊಟ್ಟ ರೂಪಕ ಎಲ್ಲರ ಗಮನ ಸೆಳೆಯಿತು.

### ಸಣ್ಣಪುಟ್ಟ ಭೇದಭಾವ ಮರೆತು ಎಲ್ಲರೂ ಒಗ್ಗೂಡಿ: ಕರುಣೇಶ್ವರ ಶಿವಾಚಾರ್ಯರು ಕರೆ

# ಏ.9ರಂದು ರೇಣುಕಾಚಾರ್ಯ ಜಯಂತಿ ಅದ್ಧೂರಿ ಆಚರಣೆ

• ಉದಯವಾಹಿನಿ, ಚಿಂಚೋಳಿ

ಬೇರೆ ಜಿಲ್ಲೆ ತಾಲ್ಲೂಕುಗಳಲ್ಲಿ ಸಾಮರಸ್ಯ ಭಾವನೆ ಹಾಳಾಗಿ ಹೋಗಿದೆ ಆದರೆ ಚಿಂಚೋಳಿ ತಾಲ್ಲೂಕಿನಲ್ಲಿ ಒಳ್ಳೆಯ ಸಾಮರಸ್ಯ ಭಾವನೆ ವಿದೆ ಎಲ್ಲೋರು ಸಣ್ಣಪುಟ್ಟ ಭೇದಭಾವ ಮರೆತು ಒಗ್ಗಟ್ಟಾಗಿ ಏಪ್ರಿಲ್ 09ರಂದು ಅಣವಾರ ರಸ್ತೆಯ ಪಕ್ಕದಲ್ಲಿರುವ ಪುರಾತನ ಕಾಲದ ರೇವಣಸಿದ್ದೇಶ್ವರ ದೇವಾಸ್ಥಾನವು ನೂತನ ನಿರ್ಮಾಣಕ್ಕೆ ಬೆಳಿಗ್ಗೆ 10ಗಂಟೆಗೆ ಅಡಿಗಲ್ಲು ಸಮಾರಂಭ ಮತ್ತು 11ಗಂಟೆಗೆ ರೇಣುಕಾಚಾರ್ಯ ಜಯಂತ್ಯೋತ್ಸವ ಕಾರ್ಯಕ್ರಮ ವೇದಿಕೆ ಧರ್ಮಸಭೆಯನ್ನು ಯಶಸ್ವಿಗೊಳಿಸುವಂತೆ ನಿಡಗುಂದಾದ ಕಂಚಾಳಕುಂಟಿ ನಂದೀಶ್ವರ ಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಷ.ಬ್ರ.ಕರುಣೇಶ್ವರ ಶಿವಾಚಾರ್ಯರು ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಜಯಂತ್ಯೋತ್ಸವದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು,ತಾಲ್ಲೂಕಿನಲ್ಲಿ ಅನೇಕ ವರ್ಷಗಳಿಂದ ರೇಣುಕಾಚಾರ್ಯರ ಜಯಂತಿ ಅದ್ದೂರಿಯಾಗಿ ಆಚರಣೆ ಮಾಡುತ್ತಾ ಬಂದಿರುವುದು ಸಾಮರಸ್ಯ ಭಾವನೆ ಉತ್ತಮವಾಗಿವೆ.

ಈ ವರ್ಷ ವಿಶೇಷವಾಗಿ ಜಯಂತಿ ಆಚರಣೆ ಜೋತೆ ರೇವಣಸಿದ್ದೇಶ್ವರ ದೇವಾಸ್ಥಾನದ ಅಡಿಗಲ್ಲು ಸಮಾರಂಭ ಮಾಡುವುದಿದೆ ಅತ್ಯಂತ ವಿಜೃಂಭಣೆಯಿಂದ ವೀರಶೈವ ಸಮಾಜದವರು ಒಗ್ಗೂಡಿ ಆಚರಿಸಿ,ಪ್ರತಿಯೊಂದು ಜಯಂತಿಗಳು ಆಚರಣೆ ಮಾಡುವುದರಿಂದ ಕ್ಷೇತ್ರದಲ್ಲಿ ಉತ್ತಮ ಸಾಮರಸ್ಯ ಭಾವನೆ ಮೂಡುತ್ತದೆ ಎಂದರು. ಈ ಕಾರ್ಯಕ್ರಮಕ್ಕೆ ಕಾಶಿ ಮತ್ತು ಉಜ್ಜೇನಿಯ ಜಗದ್ಗುರುಗಳು ಹಾಗೂ ಜಿಲ್ಲೆಯ ಅಂತರ ಜಿಲ್ಲೆಯ ತಾಲ್ಲೂಕುಗಳ ಹರಗುರು ಚರಮೂರ್ತಿ ಗುರುಗಳು ಸ್ವಾಮಿಗಳು ಆಗಮಿಸುತ್ತಿದ್ದಾರೆ.


ಉದಯವಾಹಿನಿ ಚಿತ್ರ

> **ಚಂದನಕೇರಾದ ಪರಮಪೂಜ್ಯ ಷ.ಬ್ರ.ಅಭಿನವ ರಾಚೋಟೇಶ್ವರ ಶಿವಾಚಾರ್ಯರು ಮಾತನಾಡಿ ಮಾನವ ಕುಲಕ್ಕೆ ಸರ್ವ ಸಮಾನತೆ ಸಾರಿದವರು ಬಸವಣ್ಣನವರು ಮತು ರೇಣುಕಾಚಾರ್ಯರರ ಆದರ್ಶ ತತ್ವಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಏಪ್ರಿಲ್ 09ರಂದು ಅಣವಾರ ರಸ್ತೆ ಪಕ್ಕದಲ್ಲಿರುವ ರೇವಣಸಿದ್ದೇಶ್ವರ ನೂತನ ದೇವಾಸ್ಥಾನದ ಅಡಿಗಲ್ಲು ಸಮಾರಂಭ ಮತ್ತು ರೇಣುಕಾಚಾರ್ಯರ ಜಯಂತ್ಯೋತ್ಸವ ಧರ್ಮಸಭೆ ಬೆಳಿಗ್ಗ 10ಗಂಟೆಗೆ ಹಮ್ಮಿಕೊಳ್ಳಲಾಗಿದೆ. -ಷ.ಬ್ರ.ಕರುಣೇಶ್ವರ ಶಿವಾಚಾರ್ಯರು**

ಹಾಗೂ ರಾಜಕೀಯ ಮುಖಂಡರುಗಳಾದ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ,ಅರಣ್ಯ ಸಚಿವ,ಈಶ್ವರ ಖಂಡ್ರೆ,ಶಾಸಕ ಡಾ.ಅವಿನಾಶ ಜಾಧವ,ಬೀದರ ಸಂಸದ ಸಾಗರ್ ಖಂಡ್ರೆ ಸೇರಿದಂತೆ ಹಾಲಿ ಶಾಸಕರು,ಮಾಜಿ ಶಾಸಕರು,ಸಂಸದರು ಅನೇಕ ರಾಜಕೀಯ ನಾಯಕರು ಪಾಲ್ಗೊಳ್ಳುತ್ತಿದ್ದಾರೆ ಕಾರಣ ಸಮಾಜದ ಮುಖಂಡರು ವಿವಿಧ ಪಕ್ಷಗಳ ಮತ್ತು ಸಮಾಜದ ಮುಖಂಡರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಕೋರಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶರಣುಪಾಟೀಲ ಮೋತಕಪಳ್ಳಿ ನಿರೂಪಿಸಿದರು. ಶ್ರೀ ರೇಣುಕಾಚಾರ್ಯರ ಜಯಂತ್ಯೋತ್ಸವ ಸಮಿತಿಯ ಅಧ್ಯಕ್ಷ ಶಿವಬಸಯ್ಯಸ್ವಾಮಿ ಸ್ವಾಗತಿಸಿ ವಂದಿಸಿದರು.

ಈ ಸಂದರ್ಭದಲ್ಲಿ ಸಂಗಯ್ಯಸ್ವಾಮಿ ಅಣವಾರ, ಮಲ್ಲಿಕಾರ್ಜುನ ಬುಶೆಟ್ಟಿ, ನೀಲಕಂಠ ಸೀಳಿನ, ವೀರೇಶ ಯಂಪಳ್ಳಿ, ಶಂಕರ ಶಿವಪೂರಿ, ಸಂತೋಷ, ಗುಂಡಯ್ಯಸ್ವಾಮಿ, ಚನ್ನವೀರಯ್ಯ, ಸುರೇಶ ಸುಕಂದ, ಮಾಂತಯ್ಯಸ್ವಾಮಿ, ಮಂಜುನಾಥ,ಗಣೇಶ, ಸಂಜು ಪಾಟೀಲ ಯಂಪಳ್ಳಿ, ಸುರೇಶ ದೇಶಪಾಂಡೆ, ಸೇರಿದಂತೆ ಅನೇಕರಿದ್ದರು.

## ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ಯಾಡ್ ವಿತರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಔರಾದ್

ತಾಲ್ಲೂಕಿನಲ್ಲಿ ಪ್ರಸ್ತಕ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲಿರುವ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಎಬಿವಿಪಿ ಹಿರಿಯ ಕಾರ್ಯಕರ್ತ ಅಶೋಕ ಶೆಂಬೆಳ್ಳಿ ಅವರು ಪ್ಯಾಡ್ ಮತ್ತು ಪೆನ್ನುಗಳು ವಿತರಣೆ ಮಾಡುವ ಮೂಲಕ ಗಮನ ಸೆಳೆದರು.

ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆ, ಆದರ್ಶ ವಿದ್ಯಾಲಯ, ಯನಗುಂದಾ, ಸಂತ ಪೂರನ ಸರ್ಕಾರಿ ಪ್ರೌಢಶಾಲೆ, ಅನುಭವ ಮಂಟಪ ಗುರುಕುಲ, ಕೌಡಗಾಂವ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ ಪ್ಯಾಡ್ ಮತ್ತು ಪೆನ್ನುಗಳು ವಿತರಣೆ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ನಂತರ ಮಾತನಾಡಿದ ಅಶೋಕ ಶೆಂಬೆಳ್ಳಿ, ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎಂಬ ಆತಂಕದಿಂದ ಹೊರಬರಬೇಕು. ಪರೀಕ್ಷೆಗೆ ಸಿದ್ಧತೆ ನಡೆಸುವಾಗ ಕಷ್ಟಪಟ್ಟು ಅಲ್ಲದೇ, ಇಷ್ಟಪಟ್ಟ ಅಭ್ಯಾಸ ಮಾಡಬೇಕು. ಯಾರು ಮೊಬೈಲ್ ಗೀಳಿಗೆ ಒಳಗಾಗಬೇಡಿ ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು. ಉತ್ತಮ ಅಭ್ಯಾಸದಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಗಳಿಸುವ ಮೂಲಕ ಶಾಲೆಗೆ ಮತ್ತು ಪೋಷಕರಿಗೆ ಕೀರ್ತಿ ತರಬೇಕು ಎಂದು ತಿಳಿಸಿದರು.

ಬಿಸಿಯೂಟ ಇಲಾಖೆಯ ಸಹಾಯಕ ನಿರ್ದೇಶಕ ಧೂಳಪ್ಪ ಮಳೆನೂರೆ ಮಾತನಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎಂಬುವುದು ಜೀವನ ಪ್ರಮುಖ ಹಂತವಾಗಿದೆ. ಆತ್ಮವಿಶ್ವಾಸದಿಂದ ಚೆನ್ನಾಗಿ ಓದಿ ಪರೀಕ್ಷೆ ಬರೆಯಲು ಮುಂದಾಗಬೇಕು ಎಂದರು. ಅಶೋಕ ಶೆಂಬೆಳ್ಳಿ ಅವರು ತಮ್ಮ ಜನ್ಮದಿನ ನಿಮಿತ್ತ ತಾಲ್ಲೂಕಿನ 1500 ವಿದ್ಯಾರ್ಥಿಗಳಿಗೆ ಪ್ಯಾಡ್ ಮತ್ತು ಪೆನ್ನುಗಳು ನೀಡಿರುವುದು ಮಾದರಿಯಾಗಿದೆ ಎಂದು ಶ್ಲಾಘನೀಯ ವ್ಯಕ್ತಪಡಿಸಿದರು.

ಮುಖ್ಯಗುರು ಮಹಾದೇವ ಬಿಜಾಪೂರೆ, ಮಾತನಾಡಿ, ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುವ ದೃಷ್ಟಿಕೋನದಿಂದ ಅಶೋಕ ಶೆಂಬೆಳ್ಳಿ ಅವರು ಪ್ಯಾಡ್ ಮತ್ತು ಪೆನ್ನುಗಳು ವಿತರಣೆ ಮಾಡಿದ್ದಾರೆ. ಅವರ ಈ ಕಾರ್ಯ ಎಲ್ಲರಿಗೂ ಪ್ರೇರಣೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

### ತುಂಗಭದ್ರಾ ಎಡದಂಡೆಯ 31ನೇ ಉಪವಿಭಾಗ ಕಾಲುವೆಗೆ ನೀರು ಕೊಟ್ಟರೆ ಮಾತ್ರ ಬೆಳೆ ಸಮರ್ಪಕವಾಗಿ ಬರುವ ಸಾಧ್ಯತೆ

# ನೀರು ಬಿಡುವಂತೆ ವಿವಿಧ ರೈತಪರ ಸಂಘಟನೆಗಳಿಂದ ಬೃಹತ್ ಪ್ರತಿಭಟನೆ

• ಉದಯವಾಹಿನಿ ಕಾರಟಗಿ

ತುಂಗಭದ್ರಾ ಎಡದಂಡೆಯ 31ನೇ ಉಪವಿಭಾಗ ಕಾಲುವೆಗೆ ಏಪ್ರಿಲ್ 20ರ ವರೆಗೆ ನೀರು ಬಿಡುವಂತೆ ಬೂದುಗುಂಪ ತಿಮ್ಮಾಪುರ ಹಾಲ ಸಮುದ್ರ, ರಾಜಕ್ಯಾಂಪ,ಕೆಳಭಾಗದ ರೈತರು ಆಕ್ರೋಶ ವ್ಯಕ್ತಪಡಿಸಿ. ಪ್ರತಿ ವರ್ಷದಂತೆ ಈ ವರ್ಷವು ಸಹ ನಮಗೆ ಸಸಿ ಹಚ್ಚುವ ಸಮಯವು ಕೂಡ ಮೇಲ್ಬಾಗಕ್ಕಿಂತ 10ರಿಂದ 15 ದಿನಗಳ ವ್ಯತ್ಯಾಸವಿರುತ್ತದೆ ಕಾರಣ ನಮ್ಮ ಕೆಳಭಾಗಕ್ಕೆ ಸರಿಯಾದ ಸಮಯಕ್ಕೆ ನೀರು ಲಭ್ಯವಿರುವುದಿಲ್ಲ ಕಾರಣ ಮೇಲ್ಬಾಗದ ರೈತರು ಗದ್ದೆ ಹಚ್ಚಿದ ನಂತರ ನಮಗೆ ನೀರು ಬರುತ್ತದೆ.

ಆದ್ದರಿಂದ ಈ ವರ್ಷವು ಸಹ ನಮಗೆ ಏಪ್ರಿಲ್ 20ರವರೆಗೆ ನೀರು ಕೊಟ್ಟರೆ ಮಾತ್ರ ನಮ್ಮ ಈ ಕೆಳಭಾಗದ ಗ್ರಾಮಗಳಾದ ಬೂದುಗುಂಪ ತಿಮ್ಮಾಪುರ ಹಾಲಸಮುದ್ರ, ರಾಜಕ್ಯಾಂಪ್ ರೈತರುಗಳ ಬೆಳೆ ಸಮರ್ಪಕವಾಗಿ ಬರುವ ಸಾಧ್ಯತೆ ಇದೆ. ಇಲ್ಲದಿದ್ದರೆ ಎಕ್ಕರೆಗೆ 30,ಸಾವಿರ ರೂ ಖರ್ಚು ಮಾಡಿದ್ದು.. ಒಂದು ವೇಳೆ ಏಪ್ರಿಲ್ 20ವರೆಗೆ ನೀರಿನ ಸೌಲಭ್ಯ ಕೊಡದಿದ್ದರೆ 30,ಸಾವಿರ ನಷ್ಟ ಅನುಭವಿಸಬೇಕಾಗುತ್ತದೆ. ಇದಕ್ಕೆ ಸರ್ಕಾರವೆ ಪರಿಹಾರ ಕೊಡಬೇಕಾಗುತ್ತದೆ ಎಂದು ಅಖಿಲ ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘ ರಾಜ್ಯ ಉಪಾಧ್ಯಕ್ಷ ಶರಣಪ್ಪ ಕೊತ್ವಾಲ್, ಮತ್ತು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಶರಣಪ್ಪ ದೊಡ್ಡಮನಿ, ಮತ್ತು ರೈತ ಸಂಘದ ಬಸವರಾಜ್ ಬಿಲ್ಗಾರ, ಮರಿಯಪ್ಪ ಸಾಲೋಣಿ, ಮತ್ತು ಬೂದುಗುಂಪ, ತಿಮ್ಮಾಪುರ, ಹಾಲಸಮುದ್ರ, ಹಾಗೂ ಚನ್ನಹಳ್ಳಿ ಗ್ರಾಮಗಳ ರೈತರು ಮತ್ತು ನೀರು ಸರಬರಾಜು ಸಹಕಾರ ಸಂಘದ ಪದಾಧಿಕಾರಿಗಳು, ಪಟ್ಟಣದ ಜಾಗೃತ ಯುವಕ ಸಂಘ ಸೇರಿದಂತೆ ವಿವಿಧ ರೈತಪರ ಸಂಘಟನೆಗಳು ಸಾವಿರಾರು ಸಂಖ್ಯೆಯಲ್ಲಿ ಪಟ್ಟಣದ 31ನೇ ವಿತರಣಾ ಕಾಲುವೆಯ ಮೂಲಕ ಕನಕದಾಸ ವೃತ್ತದಲ್ಲಿ ಬೃಹತ್ ಪ್ರತಿಭಟನೆಯ ರ್‍ಯಾಲಿ ನಡೆಸಿದರು. 31ನೇ ಉಪ ವಿಭಾಗ ಕಾಲುವೆ ವ್ಯಾಪ್ತಿಯ ಹಾಗೂ ಕೇಳ ಭಾಗದ ರೈತರ ಬೆಳೆಗಳಿಗೆ 20 ರವರೆಗೆ ಸಮರ್ಪಕವಾಗಿ ನೀರು ಹರಿಸಿ ನಮ್ಮ ಬೆಳೆಯನ್ನು ರಕ್ಷಿಸುವಂತೆ ಒತ್ತಾಯಿಸಿದರು.



ಉದಯವಾಹಿನಿ ಚಿತ್ರ

**ಉಗ್ರ ಹೋರಾಟಕ್ಕೆ ಸಜ್ಜಾಗಬೇಕಾಗುತ್ತದೆ**

**ಈ ಬಗ್ಗೆ ಯಾವುದೇ ರೀತಿಯ ಕ್ರಮ ಕೈಗೊಳ್ಳದಿದ್ದರೆ, ಗಂಗಾವತಿ, ಕಾರಟಗಿ, ಸಿಂಧನೂರು, ಮಸ್ಕಿ, ಮಾನ್ವಿ, ಸಿರವಾರ ಎಲ್ಲಾ ತಾಲ್ಲೂಕುಗಳ ಎಡದಂಡೆ ನಾಲೆಯ ರೈತರೆಲ್ಲರು ಸಂಘಟಿತರಾಗಿ ಉಗ್ರ ಹೋರಾಟಕ್ಕೆ ಸಜ್ಜಾಗಬೇಕಾಗುತ್ತದೆ. ಎಂದು ಅಗ್ರಹಿಸಿ ಮಾನ್ಯ ಶ್ರೀ ಡಿ.ಕೆ ಶಿವಕುಮಾರ ಉಪ ಮುಖ್ಯಮಂತ್ರಿಗಳು ಹಾಗೂ ಜಲ ಸಂಪನ್ಮೂಲ ಸಚಿವರಿಗೆ, ತಾಲ್ಲೂಕಿನ ದಂಡಾಧಿಕಾರಿ ತಹಶೀಲ್ದಾರ್ ರವರಿಗೆ ಮನವಿ ಪತ್ರ ಸಲ್ಲಿಸಿ ಸರ್ಕಾರಕ್ಕೆ ರೈತರ ನೀರಿನ ಸಮಸ್ಯೆಯನ್ನು ಮನಮುಟ್ಟುವಂತೆ ಹೇಳಲು ಒತ್ತಾಯಿಸಿ ಮನವಿ ಪತ್ರ ಸಲ್ಲಿಸಿದರು.**

ಬಳಿಕ ರೈತ ಮುಖಂಡ ಮರಿಯಪ್ಪ ಸಾಲೋನಿ, ಶರಣಪ್ಪ ದೊಡ್ಡಮನಿ, ಮಾತನಾಡಿ ತುಂಗಭದ್ರ ಎಡದಂಡೆ ಕಾಲುವೆಯ ಭಾಗದ ರೈತರು ಬೇಸಿಗೆ ಬೆಳೆಯಲ್ಲಿ ಭತ್ತವನ್ನು ನಾಟಿ ಮಾಡಿದ್ದು, ಈಗ ಭತ್ತ ತೆನೆ ಬಿಡುವ ಹಂತದಲ್ಲಿದ್ದು, ಭತ್ತಕ್ಕೆ ಎಪ್ರಿಲ್ 20 ರ ವರೆಗೆ ನೀರಿನ ಅವಶ್ಯಕತೆ ತುಂಬಾ ಇದೆ.

ರೈತರು ಬೆಳೆದಂತಹ ಭತ್ತದ ಬೆಳೆಗಳು ರೈತರ ರೈತರ ಕೈಸೇರುವ ಹಂತದಲ್ಲಿದೆ. ಈಗ ಕಾಲುವೆಗೆ ನೀರು ತೆಗೆದರೆ ರೈತರು ತೊಂದರೆ ಅನುಭವಿಸುತ್ತಾರೆ. ಈಗಾಗಲೇ ನಮ್ಮ ಭಾಗದ ಶಾಸಕರು ಹಾಗೂ ಸಚಿವರು ಮತ್ತು ಸಂಸದರು ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದು, ಭದ್ರಾ ಜಲಾಶಯದಲ್ಲಿ ಹೆಚ್ಚುವರಿ ನೀರು ಇದ್ದು, ಇದರಲ್ಲಿ 8 ಟಿ.ಎಮ್.ಸಿ ನೀರನ್ನು ಹರಿಸಲು ತಮ್ಮಲ್ಲಿ ವಿನಂತಿಸಿದ್ದಾರೆ.

ಕಾರಣ ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳ ಜೋತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಂಡು ಎಡದಂಡೆ ನಾಲೆಗೆ ಏಪ್ರಿಲ್ 20ರವರೆಗೆ ನೀರು ಹರಿಸುವಂತೆ ತಮ್ಮಲ್ಲಿ ಈ ಮೂಲಕ ವಿನಂತಿಸಿಕೊಳ್ಳುತ್ತೇವೆ. ಈ ಸಂದರ್ಭದಲ್ಲಿ ಗಂಗಾವತಿ ಕಾರಟಗಿ ಸಿಂಧನೂರು, ಮಾನ್ವಿ ಚಂದನಹಳ್ಳಿ ಸೇರಿದಂತೆ ವಿವಿಧ ತಾಲ್ಲೂಕಿನ ರೈತಪರ ಸಂಘಟನೆಗಳು ಸಾವಿರಾರು ಪದಾಧಿಕಾರಿಗಳು ಭಾಗವಹಿಸಿದ್ದರು

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ಏನಾದರೂ ಆಸಕ್ತಿದಾಯಕವಾದದ್ದನ್ನು ಓದುವ ಮೂಲಕ ಮಾನಸಿಕ ವ್ಯಾಯಾಮ ಮಾಡಿ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು.

**ವೃಷಭ** ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದು ಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ.

**ಮಿಥುನ** ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಆರ್ಥಿಕ ಜೀವನದಲ್ಲಿ ಇಂದು ಸಂತೋಷ ಉಳಿದಿರುತ್ತದೆ. ಇದರೊಂದಿಗೆ ನೀವು ಇಂದು ಸಾಲಗಳಿಂದ ಮುಕ್ತರಾಗಬಹುದು.

**ಕರ್ಕಾಟಕ** ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ.

**ಸಿಂಹ** ಪ್ರೀತಿ ಸಂಗಾತಿ ಶಾಶ್ವತತೆ ತನಕ ನೀವು ಪ್ರೀತಿ ಯಾರು ಒಂದು ಎಂದು ತಿಳಿಯುವುದಿಲ್ಲ. ನಿಮ್ಮ ಹತ್ತಿರ ಕುಟುಂಬದವರಿಗೆ ನಿಮ್ಮ ಸ್ನೇಹಿತರಿಗಾಗಿ ಸಮಯವಿಲ್ಲ ಎಂದು ಬಯಸಿದಾಗ ನಿಮ್ಮ ಮನಸ್ಸು ಕೆಟ್ಟು ಹೋಗಬಹುದು.

**ಕನ್ಯಾ** ಹಣದ ಸ್ಥಾನ ಮತ್ತು ಆರ್ಥಿಕ ಸಮಸ್ಯೆಗಳು ಒತ್ತಡದ ಮೂಲವಾಗಿರುತ್ತವೆ. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು.

**ತುಲಾ** ನಿಮಗೆ ಆಕರ್ಷಕವಾಗಿ ತೋರುವ ಯಾವುದೇ ಹೂಡಿಕೆಯ ಯೋಜನೆಯ ಬಗ್ಗೆ ಹೆಚ್ಚು ಕಂಡುಹಿಡಿಯಲು ಮೇಲ್ಮೈಗಿಂತ ಕೆಳಗೆ ಆಳವಾಗಿ ಕೆದಕಿ. ಯಾವುದೇ ಪ್ರಮಾಣ ಮಾಡುವ ಮೊದಲು ತಜ್ಞರನ್ನು ಸಂಪರ್ಕಿಸಿ.

**ವೃಶ್ಚಿಕ** ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ.

**ಧನಸ್ಸು** ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ನಿಮ್ಮ ಭಯವನ್ನು ಸಾಧ್ಯವಾದಷ್ಟೂ ಬೇಗ ತೊಡೆದುಹಾಕಬೇಕು ಏಕೆಂದರೆ ಇವು ತಕ್ಷಣವೇ ನಿಮ್ಮ ಆರೋಗ್ಯವನ್ನು ಬಾಧಿಸಬಹುದು.

**ಮಕರ** ನೀವು ಸ್ವಲ್ಪ ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ. ಮೊಮ್ಮಕ್ಕಳು ಅಪಾರ ಸಂತೋಷದ ಮೂಲವಾಗುತ್ತಾರೆ. ಪ್ರೇಮ ಧನಾತ್ಮಕ ಕಂಪನಗಳನ್ನು ತೋರಿಸುತ್ತದೆ.

**ಕುಂಭ** ವಿಜಯೋತ್ಸವವು ನಿಮಗೆ ಪ್ರಚಂಡ ಸಂತೋಷವನ್ನು ನೀಡುತ್ತದೆ. ನಿಮ್ಮ ಸಂತೋಷವನ್ನು ಅನುಭವಿಸಲು ನೀವಿದನ್ನು ನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು.

**ಮೀನ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಯಾವುದೇ ಹಳೆಯ ಸ್ನೇಹಿತ ಇಂದು ನಿಮ್ಮ ಬಳಿ ಹಣವನ್ನು ಕೇಳಬಹುದು. ನೀವು ಅವರಿಗೆ ಸಹಾಯ ಮಾಡಿದರೆ, ನಿಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

## ನಿಯಮಾನುಸಾರ ಕರ್ತವ್ಯ ನಿರ್ವಹಿಸಬೇಕು: ಜಿಲ್ಲಾಧಿಕಾರಿ

• ಉದಯವಾಹಿನಿ, ಧಾರವಾಡ

ಮಾ. 21 ರಿಂದ ಆರಂಭವಾಗುವ ಎಸ್.ಎಸ್.ಎಲ್.ಸಿ ಪರೀಕ್ಷೆ-1 ಅತ್ಯಂತ ಪಾರದರ್ಶಕವಾಗಿ ಮತ್ತು ವಿದ್ಯಾರ್ಥಿಗಳಿಗೆ ಉತ್ತಮವಾದ ವಾತಾವರಣದಲ್ಲಿ ಜರುಗಬೇಕು. ಯಾವುದೇ ರೀತಿಯ ಮಾಲ್ ಪ್ರಾಕ್ಟೀಸ್‌ಗೆ ಅವಕಾಶವಾಗದಂತೆ ನಿಯೋಜಿತ ಅಧಿಕಾರಿ, ಸಿಬ್ಬಂದಿಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು. ಅವರು ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ 2024-25 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ-1 ಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಸಭೆ ಜರುಗಿಸಿ, ಮಾತನಾಡಿದರು. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನೀಡಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪರೀಕ್ಷೆಗೆ ನಿಯೋಜಿತರು ಪಾಲಿಸಬೇಕು. ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಅಗತ್ಯ ಮೂಲ ಸೌಕರ್ಯ, ಸಿ.ಸಿ.ಟಿವಿ ಕಲ್ಪಿಸುವುದನ್ನು ಮೇಲಾಧಿಕಾರಿಗಳು ಖಾತರಿಪಡಿಸಿಕೊಳ್ಳಬೇಕು. ಪರೀಕ್ಷಾ ಕೇಂದ್ರಗಳಲ್ಲಿ ವೆಬ್‌ಕಾಸ್ಟಿಂಗ್ ಕಡ್ಡಾಯವಾಗಿದ್ದು, ವೆಬ್‌ಕಾಸ್ಟಿಂಗ್‌ಗೆ ಅಗತ್ಯವಿರುವ ತಾಂತ್ರಿಕ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅವರು ಮಾತನಾಡಿ, ಪರೀಕ್ಷೆ ಕೇಂದ್ರಗಳಿಗೆ ನಿಗದಿತ ಸಮಯಕ್ಕೆ ಪ್ರಶ್ನೆ ಪತ್ರಿಕೆಗಳು ತಲುಪಬೇಕು. ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಸಮಯದಲ್ಲಿ ಅನ್ಯ ವ್ಯಕ್ತಿಗಳು, ಸಂಬಂಧಪಡದವರು, ಮಾಧ್ಯಮಗಳಿಗೆ ಪ್ರವೇಶವಿರುವುದಿಲ್ಲ ಎಂದರು.

> ಈಗಾಗಲೇ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ತಾವು ಪ್ರವಾಸ ಮಾಡಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡಿದ್ದು, ವಿದ್ಯಾರ್ಥಿಗಳು ಯಾವುದೇ ಭಯ ಭೀತಿ ಇಲ್ಲದೆ, ಖುಷಿಯಿಂದ ಪರೀಕ್ಷೆ ಬರೆಯುವ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳಲ್ಲಿನ ಬದಲಾವಣೆ ನೋಡಿ ಸಂತಸವಾಗಿದೆ -ಜಿಲ್ಲಾಧಿಕಾರಿ


ಉದಯವಾಹಿನಿ ಚಿತ್ರ

### ದೇಶದ ಅಭಿವೃದ್ಧಿ ಸೂಚ್ಯಂಕದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಗುಣಮಟ್ಟದ ಆರೋಗ್ಯ ಪ್ರಧಾನ ಎನಿಸುತ್ತದೆ: ಎಸ್.ಜೆ.ಸೋಮಶೇಖರ್

## ಆರೋಗ್ಯ ವ್ಯವಸ್ಥೆ ಸುಧಾರಣೆಗೆ ಮಾಧ್ಯಮಗಳ ಸಹಕಾರ ಅಗತ್ಯ

• ಉದಯವಾಹಿನಿ, ಚಿತ್ರದುರ್ಗ

ಸಾರ್ವಜನಿಕರೊಂದಿಗೆ ನೇರವಾಗಿ ವ್ಯವಹರಿಸುವ ಇಲಾಖೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅತಿ ಮುಖ್ಯವಾದದು. ದೇಶದ ಅಭಿವೃದ್ಧಿ ಸೂಚ್ಯಂಕದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಗುಣಮಟ್ಟದ ಆರೋಗ್ಯ ಪ್ರಧಾನ ಎನಿಸುತ್ತದೆ. ಇಂತಹ ಆರೋಗ್ಯ ವ್ಯವಸ್ಥೆ ಸುಧಾರಣೆಗೆ ಮಾಧ್ಯಮಗಳ ಸಹಕಾರ ಅಗತ್ಯ ಎಂದು ಜಿಲ್ಲಾ ಪಂಚಾಯಿತಿ ಸಿಇಒ ಎಸ್.ಜೆ.ಸೋಮಶೇಖರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮಗಳ ಕುರಿತು, ಜಿಲ್ಲೆಯ ಪತ್ರಿಕಾ ಹಾಗೂ ವಿದ್ಯುನ್ಮಾನ ವಾಹಿನಿಗಳ ಮಾಧ್ಯಮ ಪ್ರತಿನಿಧಿಗಳಿಗೆ, ನಗರದ ಐಶ್ವರ್ಯ ನವೀನ್ ಹೋಟೆಲ್‌ನಲ್ಲಿ ಏರ್ಪಡಿಸಲಾದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಆಶಾ, ನರ್ಸ್, ಆರೋಗ್ಯ ಕಾರ್ಯಕರ್ತರು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಮುದಾಯ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜನರ ಜೀವನಾಡಿಗಳಾಗಿವೆ. ಇವುಗಳ ಹೊರತಾಗಿಯೂ ಆರೋಗ್ಯ ಇಲಾಖೆ ವತಿಯಿಂದ ಬಹಳಷ್ಟು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲೆಯಲ್ಲಿ ಗರ್ಭಿಣಿ ಹಾಗೂ ಬಾಣಂತಿಯರ ಆರೈಕೆ, ತಾಯಿ ಹಾಗೂ ಶಿಶು ಮರಣ ತಗ್ಗಿಸುವುದು, ಲಸಿಕಾಕರಣ, ಸಾಂಕ್ರಮಿಕ ಹಾಗೂ ಮಾರಕ ರೋಗಗಳ ತಡೆ ಮತ್ತು ನಿಯಂತ್ರಣ, ಶಾಲಾ ಮಕ್ಕಳ ಬೆಳವಣಿಗೆ ಹಾಗೂ ಆರೋಗ್ಯ ಬಗ್ಗೆಯೂ ನಿಗಾ ಇರಿಸಲಾಗಿದೆ. ಇದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ತಜ್ಞ ವೈದ್ಯರ ತಂಡ ಅವಿರತವಾಗಿ ಕರ್ತವ್ಯ ನಿರ್ವಹಿಸುತ್ತಿದೆ.

ಸೂಕ್ತ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಕೊರತೆಯ ನಡುವೆಯೂ ಸಾಧ್ಯವಾದಷ್ಟು ಉತ್ತಮವಾಗಿ ಕಾರ್ಯನಿರ್ವಹಿಸಲಾಗುತ್ತಿದೆ. ಆರೋಗ್ಯ ಇಲಾಖೆ ಕಾರ್ಯವೈಖರಿಯ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡುವ ಸಲುವಾಗಿ ಈ ಕಾರ್ಯಾಗಾರ ಆಯೋಜಿಸಲಾಗಿದೆ. ಜಿಲ್ಲೆಯ ಆರೋಗ್ಯ ವ್ಯವಸ್ಥೆಯ ಕುರಿತು ಮಾಧ್ಯಮಗಳು ಬಿತ್ತರ ಹಾಗೂ ಪ್ರಕಟ ಮಾಡುವ ವರದಿಗಳನ್ನು ಸಮಚಿತ್ತ ಮನೋಭಾವದಿಂದ ಸ್ವೀಕರಿಸಿ ಸುಧಾರಣೆ ಕ್ರಮ ಕೈಗೊಳ್ಳುತ್ತಿರುವುದಾಗಿ ಸಿಇಒ ಎಸ್.ಜೆ. ಸೋಮಶೇಖರ್ ತಿಳಿಸಿದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ. ಅಭಿನವ್, ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ಡಾ.ಕಾಶಿ, ಡಾ.ಚಂದ್ರಶೇಖರ್ ಕಂಬಾಳಿ ಮಠ್, ಡಾ. ನಾಗರಾಜ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಕೃಷ್ಣಾ ನಾಯಕ್, ಸಹಾಯಕ ಆರೋಗ್ಯ ಶಿಕ್ಷಣಾಧಿಕಾರಿ ಮಂಜುನಾಥ್, ಮೂಗಪ್ಪ ಸೇರಿದಂತೆ ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಮಾಧ್ಯಮ ಪ್ರತಿನಿಧಿಗಳು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

> ಆರೋಗ್ಯ ಇಲಾಖೆ ಹಾಗೂ ಮಾಧ್ಯಮಗಳು ಒಂದು ಬಂಡಿಯ ಎರಡು ಚಕ್ರಗಳಿದ್ದಂತೆ, ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಬೇಕು. ಕೋವಿಡ್ ಸಮಯದಲ್ಲಿ ಸಾಕಷ್ಟು ಮಾಧ್ಯಗಳು ಸಂಕಷ್ಟಕ್ಕೆ ಸಿಲುಕಿದವು. ಪತ್ರಕರ್ತರು ಸಹ ಕೋವಿಡ್‌ಗೆ ಬಲಿಯಾದ ಪ್ರಸಂಗಳು ನಡೆದಿವೆ. ಮಾಧ್ಯಮಗಳು ಯಾವುದೇ ಸಾಂಕ್ರಾಮಿಕ ರೋಗಗಳು ಸೇರಿದಂತೆ ಹಲವಾರು ಗಂಭೀರ ಖಾಯಿಲೆಗಳ ಕುರಿತು ವಸ್ತುಸ್ಥಿತಿ ತಿಳಿಸಬೇಕು. ಸಾರ್ವಜನಿಕರನ್ನು ಭಯ ಭೀತರನ್ನಾಗಿ ಮಾಡುವುದರ ಬದಲಾಗಿ, ಈ ಖಾಯಿಲೆಗಳ ಕುರಿತು ಜನಜಾಗೃತಿ ಮೂಡಿಸುವ, ಖಾಯಿಲೆಗಳು ಬಾರದಂತೆ ಹಾಗೂ ಹರಡದಂತೆ ತಡೆಯಲು ಕೈಗೊಳ್ಳಬೇಕಾದ ಮಾರ್ಗೋಪಾಯಗಳ ಕುರಿತ ಆರೋಗ್ಯ ಇಲಾಖೆ ಹೊರಡಿಸುವ ಪ್ರಕಟಣೆಗಳನ್ನು ವರದಿ ಮಾಡಿ, ಸಾಮಾಜಿಕ ಕಳಕಳಿ ಹಾಗೂ ಬದ್ಧತೆಯನ್ನು ಪ್ರದರ್ಶಿಸುವಂತೆ ಹೇಳಿದರು -ಬಿ.ವಿ. ತುಕಾರಾಂರಾವ್, ಜಿಲ್ಲಾ ವಾರ್ತಾಧಿಕಾರಿ

> ಜಿಲ್ಲೆಯ ಮಾಧ್ಯಮಗಳು ಆರೋಗ್ಯ ಇಲಾಖೆಯ ಬಗ್ಗೆ ಸಕಾರಾತ್ಮಕ ಹಾಗೂ ನಕಾರಾತ್ಮ ವರದಿಗಳನ್ನು ಪ್ರಕಟ ಮಾಡುತ್ತಿವೆ. ಆರೋಗ್ಯ ಇಲಾಖೆಯ ಕಾರ್ಯವೈಖರಿ ಮೆಚ್ಚಿ, ಸಕಾರಾತ್ಮ ವರದಿಗಳು ಪ್ರಕಟವಾದಾಗ ಹೆಚ್ಚಿನ ಕೆಲಸ ನಿರ್ವಹಿಸಲು ಸ್ಫೂರ್ತಿ ದೊರೆಯುತ್ತದೆ. ನಕಾರಾತ್ಮ ವರದಿಗಳು ಪ್ರಕಟವಾದ ಎಚ್ಚತ್ತು, ಲೋಪದೋಷಗಳನ್ನು ಸರಿಪಡಿಸಿ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಲು ಅವಕಾಶ ದೊರಕುತ್ತದೆ. ಈ ನಿಟ್ಟಿನಲ್ಲಿ ಜಿಲ್ಲೆಯ ಮಾಧ್ಯಮಗಳು ಇಲಾಖೆಯೊಂದಿಗೆ ಉತ್ತಮ ಬಾಂಧವ್ಯದೊಂದಿಗೆ ಕಾರ್ಯನಿರ್ವಹಿಸಬೇಕು. ಇಲಾಖೆ ಬಗ್ಗೆ ತಟಸ್ಥ ಮನೋಭಾವ ತಾಳಬಾರದು. ಇದರಿಂದ ಅವಲೋಕನ ಸುಧಾರಣೆ ತರಲು ಅಡ್ಡಿ ಉಂಟಾಗುತ್ತದೆ -ಡಾ. ರೇಣುಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

### ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಜಿಲ್ಲಾಧಿಕಾರಿ , ಜಿ.ಪಂ ಸಿಇಒ ಕರೆ

## ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಬ್ಬದಂತೆ ಆಚರಿಸಿ, ಆತಂಕ ಬೇಡ

• ಉದಯವಾಹಿನಿ, ಚಿತ್ರದುರ್ಗ




ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ವಿದ್ಯಾರ್ಥಿ ಜೀವನದ ಒಂದು ಪ್ರಮುಖ ಘಟ್ಟವಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಇದೇ ಮಾರ್ಚ್ 21ರಿಂದ ಏಪ್ರಿಲ್ 04 ರವರೆಗೆ ನಡೆಯಲಿದ್ದು, ಈ ಪರೀಕ್ಷೆಯನ್ನು ಹಬ್ಬದಂತೆ ಆಚರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಎಸ್.ಜೆ.ಸೋಮಶೇಖರ್ ಕರೆ ನೀಡಿದ್ದಾರೆ.

ಪರೀಕ್ಷೆ ಸಮೀಪಿಸಿತೆಂದು ಆತಂಕ ಬೇಡ, ನಿಮ್ಮಗಳ ದಿನನಿತ್ಯ ಕಾರ್ಯಗಳ ಜೊತೆಗೆ ಓದುವ ಅವಧಿ ಹೆಚ್ಚಿಸಿಕೊಳ್ಳಿ. ಶಿಕ್ಷಣ ಇಲಾಖೆ ನಡೆಸಿರುವ ಅನೇಕ ವಿಷಯ ಸಾಮರ್ಥ್ಯ ಬೆಳೆಸಿಕೊಳ್ಳುವ ಕಾರ್ಯಾಗಾರಗಳು ಮತ್ತು ಪೂರ್ವ ಸಿದ್ಧತಾ ಪರೀಕ್ಷೆಗಳು ನಿಮ್ಮನ್ನು ಸಬಲರನ್ನಾಗಿಸಿವೆ. ನೀವು ಸುಲಭವಾಗಿ ಪರೀಕ್ಷೆಯನ್ನು ಬರೆಯಲು ಸಮರ್ಥರಾಗಿದ್ದೀರಾ ಎಂದು ನಂಬಿದ್ದೇವೆ. ಸಿಸಿ ಟಿವಿ ಮತ್ತು ವೆಬ್ ಕಾಸ್ಟಿಂಗ್ ಬಗ್ಗೆ ಅನಗತ್ಯ ಯೋಚನೆ ಬೇಡ. ನಿಮ್ಮ ಒಳತಿಗಾಗಿ ಸರ್ಕಾರ ಈ ವ್ಯವಸ್ಥೆ ಮಾಡಿದೆ. ಅಭ್ಯಾಸದ ಕಡೆ ಹೆಚ್ಚು ಗಮನಹರಿಸಿ ಉಳಿದಂತೆ ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ವ್ಯವಸ್ಥೆಯನ್ನು ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಮಕ್ಕಳ ಸ್ನೇಹಿಯಾಗಿ ವ್ಯವಸ್ಥೆ ಮಾಡಿದೆ. ಯಾವುದೇ ಊಹಾಪೋಹ ಗೊಂದಲಗಳಿಗೆ ಕಿವಿಗೊಡಬೇಡಿ.

ಪರೀಕ್ಷಾ ಸಮಯದ 30 ನಿಮಿಷ ಮುಂಚೆಯೇ ಕೇಂದ್ರದಲ್ಲಿ ಇರುವುದನ್ನು ಮರೆಯಬೇಡಿ. ಪರೀಕ್ಷೆ ಪ್ರಾರಂಭವಾದ ನಂತರ 30 ನಿಮಿಷ ತಡವಾಗಿ ಬಂದರೆ ಪರೀಕ್ಷೆ ಬರೆಯಲು ಅವಕಾಶವಿಲ್ಲ ಎಂಬುದು ನಿಮಗೆ ತಿಳಿದಿರಲಿ. ಪ್ರವೇಶ ಪತ್ರ ನಿಮ್ಮೊಂದಿಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ. ಪ್ರಶ್ನೆ ಪತ್ರಿಕೆಯನ್ನು ಮೊದಲು ಚೆನ್ನಾಗಿ ಓದುವುದನ್ನು ಮರೆಯಬೇಡಿ, ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಬರೆದು ಉತ್ತಮ ಫಲಿತಾಂಶ ಪಡೆಯುವಂತೆ ಶುಭ ಹಾರೈಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಅಂದರೆ ಬರೀ ಮಕ್ಕಳಿಗೆ ಅಲ್ಲ. ಪೋಷಕರಿಗೂ ಒತ್ತಡದ ಕಾಲ. ಪೋಷಕರಾಗಿ ಮಕ್ಕಳ ಒತ್ತಡ ಮತ್ತು ಆತಂಕವನ್ನು ದೂರ ಮಾಡುವುದು ತಮ್ಮ ಜವಾಬ್ದಾರಿಯಾಗಿದೆ. ಧೈರ್ಯ ಮತ್ತು ಆತ್ಮವಿಶ್ವಾಸ ತುಂಬಿ, ಯಶಸ್ಸಿಗೆ ಪರಿಶ್ರಮ ಮತ್ತು ಪ್ರಯತ್ನ ಎಂಬ ನಂಬಿಕೆಯನ್ನು ಮಕ್ಕಳಲ್ಲಿ ಮೂಡಿಸಿ. ಪರೀಕ್ಷಾ ಕಾರ್ಯ ಮುಗಿಯುವವರೆಗೂ ಮಕ್ಕಳಿಗೆ ಪರೀಕ್ಷಾ ಸಿದ್ಧತೆ ಹೊರತುಪಡಿಸಿ ಬೇರೆ ಕೆಲಸ ಹೇಳಬೇಡಿ. ಪೋಷಕಯುಕ್ತ ಆಹಾರ ಮತ್ತು ಹೆಚ್ಚು ಹೆಚ್ಚು ನೀರು ಕುಡಿಯಲು ಸಲಹೆ ನೀಡಿ, ಪರೀಕ್ಷಾ ದಿನ ಶಾಂತವಾಗಿ ಮಕ್ಕಳನ್ನು ಪ್ರೋತ್ಸಾಹಿಸಿ, ವೇಳೆಗೆ ಸರಿಯಾಗಿ ಪರೀಕ್ಷಾ ಕೇಂದ್ರಕ್ಕೆ ತಲುಪುವಂತೆ ಎಚ್ಚರವಹಿಸಿ. ಪರೀಕ್ಷೆಗಳು ಮುಗಿಯುವವರೆಗೂ ದೂರದರ್ಶನ ಮತ್ತು ಮೊಬೈಲ್‌ನಿಂದ ಸಾಧ್ಯವಾದಷ್ಟು ದೂರವಿರಿಸಿ. ವಿದ್ಯಾರ್ಥಿ ಯಶಸ್ಸಿಗೆ ಪೋಷಕರ ಬೆಂಬಲ ಮತ್ತು ಸಹಕಾರ ಅಗತ್ಯ ಎಂಬದನ್ನು ನೆನಪಿನಲ್ಲಿಡಿ. ನಿಮ್ಮ ಪ್ರೀತಿ, ಕಾಳಜಿ, ಬೆಂಬಲ ಮತ್ತು ಧೈರ್ಯ ಪರೀಕ್ಷೆ ಬರೆಯುವ ಮಕ್ಕಳಿಗೆ ಅಗತ್ಯ ಎಂಬುದನ್ನು ಗಮನದಲ್ಲಿಟ್ಟುಕೊಂಡು ಪ್ರೋತ್ಸಾಹಿಸಿ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಎಸ್.ಜೆ.ಸೋಮಶೇಖರ್ ಮನವಿ ಮಾಡಿದ್ದಾರೆ.

## ಶೋಷಣೆ ವಿರುದ್ಧ ಸ್ತ್ರೀಯರ ಸಂಘರ್ಷ ಜೀವಂತವಿರಲಿ: ಗುಂಡಮ್ಮ

• ಉದಯವಾಹಿನಿ, ವಾಡಿ

ನ್ಯೂಯಾರ್ಕ್‌ನಲ್ಲಿ ದುಡಿಮೆಯ ಅವದಿ ಎಂಟು ತಾಸಿಗೆ ಸೀಮಿತಗೊಳಿಸುವುದು ಸೇರಿದಂತೆ ವಿವಿಧ ಸೌಲಭ್ಯಗಳಿಗಾಗಿ ನಡೆದ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಉಗ್ರ ಹೋರಾಟ ಜಗತ್ತಿನ ಮಹಿಳಾ ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಟ್ಟಿತು.

ಶೋಷಣೆ ಇಂದಿಗೂ ಮುಂದು ವರೆದಿದ್ದು, ಸ್ತ್ರೀ ಸಂಘರ್ಷ ಜೀವಂತವಾಗಿರಬೇಕು ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಜಿಲ್ಲಾಧ್ಯಕ್ಷೆ ಗುಂಡಮ್ಮ ಮಡಿವಾಳ ಹೇಳಿದರು.

ಎಐಎಂಎಸ್‌ಎಸ್ ವತಿಯಿಂದ ಹಲಕರಟಿ ಗ್ರಾಮದ ಬಸವೇಶ್ವರ ಶಾಲೆಯಲ್ಲಿ ಏರ್ಪಡಿಸಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ವಿವಿಧ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರಿಗೆ ದುಡಿಮೆಗೆ ತಕ್ಕ ವೇತನ ನೀಡದೆ ಮೋಸ ಮಾಡಲಾಗುತ್ತಿದೆ. ಕೆಲಸದ ಸ್ಥಳದಲ್ಲಿ ಒದಗಿಸಬೇಕಾದ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೆ ವಂಚಿಸಲಾಗುತ್ತಿದೆ. ಪ್ರತಿಯೊಬ್ಬ ಮಹಿಳೆ ದುಡಿದು ಸ್ವಾಭಿಮಾನದಿಂದ ಬದುಕಲು ಬಯಸುತ್ತಿದ್ದಾಳೆ.



ಉದಯವಾಹಿನಿ ಚಿತ್ರ

ಆದರೆ ಈ ವ್ಯವಸ್ಥೆ ಮಹಿಳೆಯರನ್ನು ಅಸಹಾಯಕರಂತೆ ಮತ್ತು ಭೋಗಿಸುವ ವಸ್ತುವಿನಂತೆ ಕಾಣುತ್ತಿದೆ. ಸ್ವಾತಂತ್ರ್ಯ ಭಾರತದಲ್ಲೂ ಮಹಿಳೆಯರು ಕೆಲಸದ ಜಾಗಗಳಲ್ಲಿ ಲೈಂಗಿಕ ಕಿರುಕುಳ ಅನುಭವಿಸುತ್ತಿದ್ದಾರೆ. ಮನೆಯಿಂದ ಹೊರಬಂದು ಪುನಹ ಮನೆ ಸೇರುವತನಕ ಅಸುರಕ್ಷತೆ ಅನುಭವಿಸುತ್ತಿದ್ದಾರೆ ಎಂದು ವಿಷಾದಿಸಿದರು.

## ಕೆ.ಪಿ.ಟಿ.ಸಿ.ಎಲ್ ಪ್ರತಿನಿಧಿಯಾಗಿ ವಿಷ್ಣುಕಾಂತ ಮೂಲಗಿ ಐನೋಳ್ಳಿ ನೇಮಕ

• ಉದಯವಾಹಿನಿ, ಚಿಂಚೋಳಿ



ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಫೆ.28ರಂದು ನಡೆದ ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯ ತೀರ್ಮಾನದಂತೆ ಮುಂದಿನ ಸರ್ವ ಸದಸ್ಯರ ಸಭೆಯವರೆಗೆ ಐನೋಳ್ಳಿಯ ವಿಷ್ಣುಕಾಂತ ಮೂಲಗಿಯವರಿಗೆ ಕೆ.ಪಿ.ಟಿ.ಸಿ.ಎಲ್ ಪ್ರತಿನಿಧಿಯಾಗಿ ಆಯ್ಕೆಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ವಿ.ಚಂದ್ರಬಾಬು ತಿಳಿಸಿದ್ದಾರೆ. ಸಂಘದ ನಿಯಮಾನುಸಾರ ತಾವು ಮುಂದಿನ ಕಾರ್ಯಕಾರಿ ಸಮಿತಿ ಸಭೆಗೆ ಹಾಜರಾಗಬೇಕು ಹಾಗೂ ಸಕ್ರಿಯವಾಗಿ ಸದಸ್ಯರುಗಳ ಕುಂದುಕೊರತೆಗಳಿಗೆ ಸ್ಪಂದಿಸಬೇಕು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳ ಜೊತೆಯಲ್ಲಿ ಸೌಹಾರ್ದಯುತವಾಗಿ ನಡೆದುಕೊಂಡು ಹೋಗುವುದರ ಜೊತೆಗೆ ಸಂಘದ ಸದಸ್ಯರುಗಳಿಗೆ ಕೆ.ಪಿ.ಟಿ.ಸಿ.ಎಲ್ ನಿಂದ ಅನುಕೂಲ ಮಾಡಿಕೊಡಬೇಕು ಎಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

## ಹೇನಿನ ಔಷಧಿ ಕುಡಿದು ಮಹಿಳೆ ಸಾವು

• ಉದಯವಾಹಿನಿ, ಕಲಬುರಗಿ

ಹೊಟ್ಟೆ ನೋವಿನ ಔಷಧಿ ಎಂದು ತಿಳಿದು ಕುರಿಗಳಿಗೆ ಹಚ್ಚುವ ಹೇನಿನ ಔಷಧಿ ನೀರಿನಲ್ಲಿ ಬೆರೆಸಿ ಕುಡಿದು ಮಹಿಳೆಯೊಬ್ಬರು ಮೃತಪಟ್ಟಿರುವ ದಾರುಣ ಘಟನೆ ಫರಹತಾಬಾದ ಗ್ರಾಮದಲ್ಲಿ ನಡೆದಿದೆ. ಶಿವಮ್ಮ ಸಿದ್ದು ಜಾಧವ್ (20) ಮೃತಪಟ್ಟ ಮಹಿಳೆ. ಕುರಿಗಳಿಗೆ ಹಚ್ಚುವ ಹೇನಿನ ಔಷಧಿಯನ್ನು ಹೊಟ್ಟೆನೋವಿನ ಔಷಧಿ ಎಂದು ತಿಳಿದು ಕುಡಿದು ಅಸ್ವಸ್ಥಳಾಗಿದ್ದಳು. ಜಿಲ್ಲಾ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯೆದಲ್ಲಿಯೇ ಮೃತಪಟ್ಟಿದ್ದಾಳೆ ಎಂದು ತಿಳಿದು ಬಂದಿದೆ. ಈ ಸಂಬಂಧ ಮೃತ ಮಹಿಳೆಯ ತಾಯಿ ಫರಹತಾಬಾದ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

## ಬಿಸಿಲಿನ ತಾಪಮಾನ ಹೆಚ್ಚಳ ನಿರ್ಲಕ್ಷ್ಯ ಬೇಡ: ಡಿಹೆಚ್‌ಓ

• ಉದಯವಾಹಿನಿ, ಹೊಸಪೇಟೆ

ಮಾರ್ಚ್, ಏಪ್ರಿಲ್, ಮೇ ತಿಂಗಳ ಅಂತ್ಯದವರೆಗೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವ ನಿಟ್ಟಿನಲ್ಲಿ ಪ್ರತಿಯೊಬ್ಬರು 20 ನಿಮಿಷಕ್ಕೊಮ್ಮೆ ನೀರು ಕುಡಿಯುವ ಅಭ್ಯಾಸ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಲ್.ಆರ್.ಶಂಕರನಾಯ್ಕ ಸಲಹೆ ನೀಡಿದರು.

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆವರಣದಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ಮತ್ತು ಸ್ನೇಹ ಬಳಗದಿಂದ ನೂತನವಾಗಿ ಆರಂಭಿಸಿರುವ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು, ಅಧಿಕ ಬಿಸಿಲಿನ ತಾಪಮಾನಕ್ಕೆ ಪ್ರತಿಯೊಬ್ಬರು ನಿರ್ಜಲೀಕರಣ ಸಮಸ್ಯೆ ಎದುರಿಸಲಿದ್ದಾರೆ. ಸಾರ್ವಜನಿಕರು ಬೇಸಿಗೆಯಲ್ಲಿ ಬಾಯಾರಿಕೆ ಆಗದಿದ್ದರೂ ಪದೇ ಪದೇ ನೀರು ಅಥವಾ ಹಣ್ಣಿನ ರಸಗಳನ್ನು ಕುಡಿಯುವ ಅಭ್ಯಾಸ ಮಾಡಿಕೊಳ್ಳಬೇಕಿದೆ. ಬೇಸಿಗೆಯಲ್ಲಿ ಮೈ ಬೆವರಿದಷ್ಟು ಒಳ್ಳೆಯದು. ಆದಷ್ಟು


ಉದಯವಾಹಿನಿ ಚಿತ್ರ

ನೈಸರ್ಗಿಕ ಜ್ಯೂಸ್‌ಗಳನ್ನು ಹೆಚ್ಚಾಗಿ ಸೇವಿಸಿ. ಕಲ್ಲಂಗಡಿ, ಕರಬೂಜ, ಕಿತ್ತಳೆ, ದ್ರಾಕ್ಷಿ, ಅನಾನಾಸ್, ಸೌತೆಕಾಯಿ, ಎಳನೀರು ಸವಿಯುವುದು, ಮನೆಯಲ್ಲಿಯೇ ಸಿದ್ದಪಡಿಸಿದ ನಿಂಬೆಹಣ್ಣಿನ ಶರಬತ್ತು, ಮಜ್ಜಿಗೆ ಸೇರಿದಂತೆ ಹಣ್ಣಿನ ಪಾನೀಯಗಳಿಗೆ ಚಿಟಿಕೆ ಉಪ್ಪಿನೊಂದಿಗೆ ಸೇವಿಸುವುದು ಉತ್ತಮ. ವಿಶೇಷವಾಗಿ ಬಿಸಿಲಿನಿಂದ ನಿರ್ಜಲೀಕರಣವಾದ ರೋಗಿಗಳಿಗೆ ಸಾರ್ವಜನಿಕ ಉಪ ವಿಭಾಗದ ಆಸ್ಪತ್ರೆಯಲ್ಲಿ ಹವಾನಿಯಂತ್ರಿತ ಐದು ವಿಶೇಷ ಹಾಸಿಗೆಗಳನ್ನು ಮೀಸಲಿರಿಸಲಾಗಿದೆ. ಸಮುದಾಯ ಆರೋಗ್ಯ ಕೇಂದ್ರದಲ್ಲೂ ಈ ವ್ಯವಸ್ಥೆ ಇರಲಿದೆ ಎಂದರು.

## ನೀರಿನ ಘಟಕ ಅಳವಡಿಕೆ

• ಉದಯವಾಹಿನಿ, ಬಾದಾಮಿ

ತಾಲ್ಲೂಕಿನ ಹೆಬ್ಬಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶಾಲಾ ಮಕ್ಕಳಿಗಾಗಿ ಸಿ.ಎಸ್.ಆರ್. ಫಂಡ್ ಅನುದಾನದಲ್ಲಿ ಗೇಲ್ ಇಂಡಿಯಾ ಲಿಮಿಟೆಡ್ ಸಹಯೋಗದೊಂದಿಗೆ ಸಂಸದ ಪಿ.ಸಿ.ಗದ್ದಿಗೌಡರ ಇವರ ಶಿಫಾರಸ್ಸಿನಂತೆ ಒಂದು ಸಾವಿರ ಲೀಟರ್ ಪರ್ ಹವರ ಫಿಲ್ಟರನ್ನು ಅಳವಡಿಸಲಾಯಿತು. ಮುಖ್ಯಶಿಕ್ಷಕಿ ಕಮಲಾಕ್ಷಿ ಗಾಣಿಗೇರ, ಸಹಶಿಕ್ಷಕರಾದ ಬಿ.ಎಚ್.ಕೆಂಚನಗವಡ್ರ, ರವಿ ಹಿರೇಮಠ ಸೇರಿದಂತೆ ಸಹಶಿಕ್ಷಕರು, ಶಾಲಾ ಸಿಬ್ಬಂದಿಗಳು, ಊರಿನ ಹಿರಿಯರು ಸಿಬ್ಬಂದಿ ವರ್ಗದವರು ಹಾಜರಿದ್ದರು.


ಉದಯವಾಹಿನಿ ಚಿತ್ರ

## ವಿದ್ಯಾರ್ಥಿಗಳು ಅಧ್ಯಯನಶೀಲರಾಗಬೇಕು



ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಳೇದಗುಡ

ವಿದ್ಯಾರ್ಥಿಗಳು ಜೀವನದಲ್ಲಿ ಗುರಿ ಇಟ್ಟುಕೊಂಡು ನಿರಂತರವಾಗಿ ಅಧ್ಯಯನ ಶೀಲರಾಗಿರಬೇಕು ಅಂದಾಗ ಮಾತ್ರ ಜೀವನದಲ್ಲಿ ಯಶಸ್ಸುಗಳಿಸಲು ಸಾಧ್ಯ. ತಂದೆ ತಾಯಿ, ಗುರುಹಿರಿಯರಿಗೆ ಗೌರವ ಕೊಡಬೇಕು. ಸುಸಂಸ್ಕೃತ ವ್ಯಕ್ತಿಯಾಗಿ ಜೀವನ ನಡೆಸಬೇಕು ಎಂದು ಬಿಆರ್‌ಸಿ ಸಂಗಮೇಶ ಎಲಿಗಾರ ಹೇಳಿದರು.

ಅವರು ಸ್ಥಳೀಯ ರಾಠಿ ಮತ್ತು ಕಾವಡೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷಾ ಭಯದಿಂದ ಹೊರಬಂದು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿ ಉತ್ತಮ ಅಂಕಪಡೆದುಕೊಳ್ಳವ ಮೂಲಕ ಶಾಲೆಗೆ ಹಾಗೂ ಕಲಿಸಿದ ಶಿಕ್ಷಕರಿಗೆ ಹೆಸರು ತನ್ನಿ ಎಂದರು. ಆಡಳಿತ ಮಂಡಳಿ ಸದಸ್ಯರಾದ ವಿಠಲಸಾ ಕಾವಡೆ, ರವಿ ಅಂಗಡಿ, ಹಾಗೂ ಅಧ್ಯಕ್ಷತೆ ವಹಿಸಿದ್ದ ಶಾಲಾ ಚೇರಮನ್ ಅಶೋಕ ಹೆಗಡಿ ಮಾತನಾಡಿದರು.

### ಕೇಂದ್ರಕ್ಕೆ ಹೊಸದಾಗಿ ಶಿಫಾರಸ್ಸು ಪತ್ರ ಕಳುಹಿಸಿ ಸಮಾಜಕ್ಕೆ ಸಂವಿಧಾನಬದ್ಧವಾದ ಸಾಮಾಜಿಕ ನ್ಯಾಯ, ಹಕ್ಕು ಒದಗಿಸಿಕೊಡಬೇಕು

## ಕೋಲಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಆಗ್ರಹ

• ಉದಯವಾಹಿನಿ, ಚಿತ್ತಾಪುರ

ಅತೀ ಹಿಂದುಳಿದ ಸಮಾಜವಾಗಿರುವ ಕೋಲಿ, ಕಬ್ಬಲಿಗ, ಬೆಸ್ತ ಅಂಬಿಗ ಜಾತಿಗಳನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಲು ಕುಲಶಾಸ್ತ್ರೀಯ ಅಧ್ಯಯನದ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಹೊಸದಾಗಿ ಶಿಫಾರಸ್ಸು ಪತ್ರ ಕಳುಹಿಸಿ ಸಮಾಜಕ್ಕೆ ಸಂವಿಧಾನ ಬದ್ಧವಾದ ಸಾಮಾಜಿಕ ನ್ಯಾಯ, ಹಕ್ಕು ಒದಗಿಸಿಕೊಡಬೇಕು ಎಂದು ಆಗ್ರಹಿಸಿ ಕೋಲಿ ಸಮಾಜದ ತಾಲ್ಲೂಕು ಅಧ್ಯಕ್ಷ ನಿಂಗಣ್ಣ ಹೆಗಲೇರಿ ಅವರ ನೇತೃತ್ವದಲ್ಲಿ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದ ಮನವಿ ಪತ್ರವನ್ನು ತಹಶೀಲ್ದಾರ್ ಅವರಿಗೆ ಸಲ್ಲಿಸಿದರು.

ಕೋಲಿ ಸಮಾಜದ ಹಿರಿಯ ಮುಖಂಡ ಭೀಮಣ್ಣಾ ಸಾಲಿ ಮಾತನಾಡಿ, ಸಾಮಾಜಿಕ ವ್ಯವಸ್ಥೆಯಲ್ಲಿ ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ ಜಾತಿಗಳು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದ ಜಾತಿಗಳಾಗಿವೆ.

ಜನರು ಅತ್ಯಂತ ಕಡುಬಡತನದಿಂದ ಜೀವನ ಸಾಗಿಸುತ್ತಿದ್ದಾರೆ. ಶ್ರಮಜೀವಿಗಳಾದ ಈ ಎಲ್ಲಾ ಜಾತಿಗಳ ಜನರು ಶ್ರಮಜೀವಿಗಳಾಗಿದ್ದಾರೆ. ಕೃಷಿ ಕಾರ್ಮಿಕರಾಗಿ, ಕೂಲಿಕಾರರಾಗಿ, ಕಟ್ಟಡ ನಿರ್ಮಾಣ ಕಾರ್ಮಿಕರಾಗಿ, ಉದ್ಯೋಗ ಖಾತರಿ ಕಾರ್ಮಿಕರಾಗಿ, ಮೀನು ಹಿಡಿಯುವ, ದೋಣಿ ನಡೆಸುವ ಕಾಯಕ ಮಾಡಿ ಜೀವನ ರೂಪಿಸಿಕೊಳ್ಳುತ್ತಿದ್ದಾರೆ. ಈ ಎಲ್ಲಾ ಜಾತಿಗಳು ಪ್ರವರ್ಗ-1 ರಲ್ಲಿವೆ. ಕಳೆದ 11 ಏಪ್ರಿಲ್ 2002 ರಲ್ಲಿ ಕರ್ನಾಟಕ ಸರ್ಕಾರ ಪ್ರಕಟಿಸಿರುವ ರಾಜ್ಯಪತ್ರದ ಪ್ರಕಾರ ಜಾತಿ ಪಟ್ಟಿಯಲ್ಲಿ ಕ್ರಮ ಸಂಖ್ಯೆ 6(ಎ) ಬೆಸ್ತ, ಮತ್ತು ಬೆಸ್ತ ಜಾತಿಯ ಉಪ ಜಾತಿಗಳಾದ ಕಬ್ಬಲಿಗ (ಎ), ಕೋಲಿ ಕೋಳಿ (ಝುಡ್), ಅಂಬಿಗ (ಬಿ) ಜಾತಿಗಳು ರಾಜ್ಯ ಸರ್ಕಾರದ ಮೀಸಲಾತಿ ಪಟ್ಟಿಯ ಪ್ರಕಾರ ಪ್ರವರ್ಗ-1ರಲ್ಲಿವೆ, ನೂರಾರು ಜಾತಿಗಳ ಪಟ್ಟಿಯಲ್ಲಿ ಈ ಜಾತಿಗಳಿವೆ. ಸರ್ಕಾರದ ಜಾತಿ ಪಟ್ಟಿಯ ಪ್ರಕಾರ ಸರ್ಕಾರದ ಮೀಸಲಾತಿಯೂ ನಾಲ್ಕು ಜಾತಿಗಳಿಗೆ ಕೇವಲ ಮರೀಚಿಕೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೋಲಿ ಸಮಾಜದ ಗೌರವಾಧ್ಯಕ್ಷ ರಾಮಲಿಂಗ ಬಾನರ್ ಮಾತನಾಡಿ, ಕಳೆದ 1996 ರಲ್ಲಿ ಕೋಲಿ ಸಮಾಜದ ಹೋರಾಟಗಾರ ದಿ. ವಿಠಲ್ ಹೇರೂರ ಅವರ ನೇತೃತ್ವದಲ್ಲಿ ಹೋರಾಟದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿ ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸುವಂತೆ ನಿರಂತರ ಹೋರಾಟ ಮಾಡುತ್ತಾ ಬರಲಾಗಿದೆ. ಕಳೆದ 2014 ರಲ್ಲಿ ರಾಜ್ಯ ಸರ್ಕಾರವು ಕುಲಶಾಸ್ತ್ರೀಯ ಅಧ್ಯಯನದ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಸೂಕ್ತ ದಾಖಲೆಗಳು ಇಲ್ಲ ಎಂದು ಕೇಂದ್ರ ಸರ್ಕಾರದ ಬುಡಕಟ್ಟು ಸಚಿವಾಲಯ 2017 ರಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ. ಮತ್ತೆ 2021ರಲ್ಲಿ ರಾಜ್ಯ ಸರ್ಕಾರ ಹೆಚ್ಚುವರಿ ವಿವರಗಳೊಂದಿಗೆ ಕೇಂದ್ರಕ್ಕೆ ಪತ್ರ ಬರೆದು ಮರುಪರಿಶೀಲನೆಗೆ ಒತ್ತಾಯಿಸಿತ್ತು. ಸಮಾಜದ ಕೋರಿಕೆಯನ್ನು ಆರ್.ಜಿ.ಐ ತಿರಸ್ಕರಿಸಿದೆ ಎಂದು ಕೇಂದ್ರ ಸರ್ಕಾರ 2017 ರಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಿಳಿಸಿದೆ.

> ಸಂವಿಧಾನಬದ್ಧವಾಗಿ, ಈಗಿರುವ ಮೀಸಲಾತಿ ಪ್ರಕಾರ ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಮೀಸಲಾತಿ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ. ಕಲ್ಯಾಣ ಕರ್ನಾಟಕ ಭಾಗದಲ್ಲಿನ ಕಲಬುರಗಿ, ಬೀದರ, ಯಾದಗಿರಿ, ಕೊಪ್ಪಳ, ರಾಯಚೂರು ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ ಜಾತಿಯ ಜನರು ಅಧಿಕ ಸಂಖ್ಯೆಯಲ್ಲಿದ್ದಾರೆ. ಈ ಎಲ್ಲಾ ಜಾತಿಗಳನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸುವುದು ಅತ್ಯಂತ ಅವಶ್ಯಕವಾಗಿದೆ. ಆ ಮೂಲಕ ಜನರು ಸಮಗ್ರವಾಗಿ ಅಭಿವೃದ್ಧಿ ಹೊಂದಲು, ಸಮಾನತೆಯಿಂದ ಮತ್ತು ಗೌರವಯುತವಾಗಿ ಬದುಕು ಕಟ್ಟಿಕೊಳ್ಳಲು ಸಹಾಯಕವಾಗುತ್ತದೆ. ಕೋಲಿ ಸಮಾಜಕ್ಕೆ ಸಾಮಾಜಿಕ ನ್ಯಾಯ ಒದಗಿಸಿಕೊಡುವ ಜವಾಬ್ದಾರಿ ಸರ್ಕಾರದ ಮೇಲಿದೆ -ಭೀಮಣ್ಣಾ ಸಾಲಿ, ಹಿರಿಯ ಮುಖಂಡ


ಉದಯವಾಹಿನಿ ಚಿತ್ರ

**ಸ್ಥಿತಿಗತಿಯ ಸಂಪೂರ್ಣ ಇತಿಹಾಸ**

ಹಿಂದುಳಿದ ಜಾತಿಗಳ ಸ್ಥಿತಿಗತಿಯ ಸಂಪೂರ್ಣ ಇತಿಹಾಸ, ಮಾಹಿತಿ ಹೊಂದಿರುವ ತಾವು ದಯಮಾಡಿ ಹಿಂದುಳಿದ ಜಾತಿಗಳಾದ ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ ಜಾತಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡಲು ಮುಂದಾಗಬೇಕು. ನಾಲ್ಕು ಜಾತಿಗಳನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸುವಂತೆ ಈ ಹಿಂದಿನಂತೆ ಯಾವುದೇ ರೀತಿಯ ಲೋಪದೋಷವಾಗದಂತೆ ಕೇಂದ್ರ ಬುಡಕಟ್ಟು ಸಚಿವಾಲಯದ ನಿಯಮಗಳಂತೆ, ಭಾರತ ಸರ್ಕಾರದ ಆರ್.ಜಿ.ಐ ನಿಯಮಗಳಂತೆ ಅವಶ್ಯಕವಾದ ಸಮಗ್ರ ವಿವರಣೆಯುಳ್ಳ ಮಾಹಿತಿ, ಸೂಕ್ತ ದಾಖಲೆಗಳು ಹಾಗೂ ಕುಲಶಾಸ್ತ್ರೀಯ ಅಧ್ಯಯನದ ವರದಿಯೊಂದಿಗೆ ಸಂಪೂರ್ಣ ಹೊಸದಾಗಿ ಕೇಂದ್ರ ಸರ್ಕಾರಕ್ಕೆ ಹೊಸ ಪ್ರಸ್ತಾವನೆ ಸಲ್ಲಿಸುವ ಮೂಲಕ ಶಿಫಾರಸ್ಸು ಮಾಡಬೇಕು ಎಂದು ಆಗ್ರಹಿಸಿದ್ದಾರೆ.

## ಆಟೋ ಪಲ್ಟಿ: ಮಹಿಳೆ ಸಾವು

• ಉದಯವಾಹಿನಿ, ವಿಜಯಪುರ

ಆಟೋ ಪಲ್ಟಿಯಾಗಿ ಮಹಿಳೆಯೊಬ್ಬಳು ಸಾವಿಗೀಡಾದ ಘಟನೆ ನಗರ ಹೊರ ವಲಯ ಬೆಂಗಳೂರು ಹೆದ್ದಾರಿ ಟೋಲ್ ಗೇಟ್ ಬಳಿ ಬೆಳಗ್ಗ ನಡೆದಿದೆ. ಮೃತಪಟ್ಟವಳನ್ನು ಹಿಟ್ನಳ್ಳಿಯ ಮಹಾದೇವಿ ಮನೋಹರ ಬೆಳ್ಳುಬ್ಬಿ (58) ಎಂದು ಗುರುತಿಸಲಾಗಿದೆ. ಮಹಾದೇವಿ ಬೆಳ್ಳುಬ್ಬಿ ಪೌರ ಕಾರ್ಮಿಕಳಾಗಿ ಕೆಲಸ ಮಾಡುತ್ತಿದ್ದು, ಬೆಳಗ್ಗ ಆಟೋದಲ್ಲಿ ನಗರಕ್ಕೆ ಆಗಮಿಸುತ್ತಿದ್ದ ವೇಳೆ, ಈ ದುರ್ಘಟನೆ ಸಂಭವಿಸಿದೆ. ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ಖತರ್ನಾಕ್ ಕಳ್ಳಿಯರ ಬಂಧನ

• ಉದಯವಾಹಿನಿ, ಬೆಳಗಾವಿ

ರಾಜ್ಯ ಸರಕಾರ ಶಕ್ತಿ ಯೋಜನೆ ಲಾಭ ಪಡೆದು ತುಂಬಿ ತುಳುಕುತ್ತಿದ್ದ, ಸರಕಾರಿ ಬಸ್ಸುಗಳಲ್ಲಿ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಖತರ್ನಾಕ್ ಕಳ್ಳಿಯರನ್ನು ಪೊಲೀಸರು ಬಂಧಿಸಿದ್ದಾರೆ. ಬೆಳಗಾವಿ ನಗರದ ವಡ್ಡರವಾಡಿಯ ಅನಿತಾ ಚೌಗ್ಲೆ, ನಿಶಾ ಲೋಂಡೆ, ಗಿಡ್ಡಿ ಲೊಂಡೆ ಬಂಧಿತರು. ಬಂಧಿತ ಆರೋಪಿಗಳಿಂದ ಸುಮಾರು 12 ಲಕ್ಷ 70 ಸಾವಿರ ರೂ. ಬೆಲೆಯ 143 ಗ್ರಾಂ ಚಿನ್ನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಬೆಳಗಾವಿಯ ಬಜಾರ್ ಠಾಣೆ ಪೊಲೀಸರು ಬೆಳಗಾವಿಯ ಕೇಂದ್ರ ಬಸ್ ನಿಲ್ದಾಣದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಕಳ್ಳಿಯರ ಗ್ಯಾಂಗ್ ಸದಸ್ಯರನ್ನು ಬಂಧಿಸಿದ್ದಾರೆ. ಮಹಿಳೆ ಯರ ಬಸ್ ಹತ್ತುವಾಗ ಮತ್ತು ಇಳಿಯು ವಾಗ ಮಹಿಳೆಯರ ಕುತ್ತಿಗೆಯಲ್ಲಿದ್ದ ಬೆಲೆಬಾಳುವ ಚಿನ್ನದ ಸರಗಳನ್ನು ಕ್ಷಣ ಮಾತ್ರದಲ್ಲಿ ಲಪಟಾಯಿಸಿ ತಮ್ಮ ಕೈಚಳಕ ತೋರಿಸಿದ್ದಾರೆ.

# ಆನ್‌ಲೈನ್ ಬೆದರಿಕೆ, ಅನುಮಾನಾಸ್ಪದ ಚಟುವಟಿಕೆಗಳಿಗೆ ಬ್ರೇಕ್

**ಹೊಸದಿಲ್ಲಿ :** ಗ್ರಾಹಕರಲ್ಲಿ ಡಿಜಿಟಲ್ ಸಾಕ್ಷರತೆ ಮೂಡಿಸಲು ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಡಿಜಿಟಲ್ ಅಲ್ಲಿ ಪ್ರಸಿದ್ಧಿ ಪಡೆದಿರುವ ಮೆಟಾ ಸಹಯೋಗದಲ್ಲಿ ಸಬಲೀಕೃತ ಗ್ರಾಹಕರಾಗಿರಿ ಅಭಿಯಾನ ಆರಂಭಿಸಿದೆ. ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವ ಪ್ರಲ್ಹಾದ ಜೋಶಿ ಮತ್ತು ಮೆಟಾದ ಮುಖ್ಯ ಜಾಗತಿಕ ವ್ಯವಹಾರಗಳ ಅಧಿಕಾರಿ ಜೋಯಲ್ ಕಪ್ಲಾನ್ ಅವರು ದೆಹಲಿಯಲ್ಲಿ ಇಂದು ಸಬಲೀಕೃತ ಗ್ರಾಹಕರಾಗಿರಿ' ಅಭಿಯಾನದ ಹೊಸ ಸಹಯೋಗವನ್ನು ಘೋಷಿಸಿದರು.

'ಜಾಗೋ ಗ್ರಾಹಕ ಜಾಗೋ' ಅಡಿಯಲ್ಲಿ ಡಿಜಿಟಲ್ ಸಾಕ್ಷರತಾ ಉಪಕ್ರಮಗಳ ಮೂಲಕ ಗ್ರಾಹಕರನ್ನು ಸಬಲೀಕರಣಗೊಳಿಸಲು ಮತ್ತು ಗ್ರಾಹಕರಿಗೆ ನ್ಯಾಯಬದ್ಧ ರಕ್ಷಣೆ ಒದಗಿಸಲು ಈ ಹೊಸ ಅಭಿಯಾನ ಹಾಕಿಕೊಂಡಿದೆ ಗ್ರಾಹಕ ಇಲಾಖೆ. ಮೆಟಾ ಪಾಲುದಾರಿಕೆ ಉದ್ಘಾಟನೆ ವೇಳೆ ಸಚಿವ ಪ್ರಲ್ಹಾದ ಜೋಶಿ ಅವರು ಮಾತನಾಡಿ, ನಾಗರಿಕರು ಡಿಜಿಟಲ್, ಆನ್‌ಲೈನ್ ವಂಚನೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅಗತ್ಯ ಸಾಧನ ಮತ್ತು ಜ್ಞಾನ ನೀಡಲು ಮೆಟಾ ಸಹಯೋಗದಲ್ಲಿ ಸಬಲೀಕೃತ ಗ್ರಾಹಕರಾಗಿರಿ' ಅಭಿಯಾನ ನಡೆಸುತ್ತಿದ್ದು, ದೇಶದ ದೂರದ ಪ್ರದೇಶಗಳನ್ನೂ ತಲುಪುತ್ತವೆ ಎಂದು ಹೇಳಿದರು.

ಸುಸ್ಥಿರ ಮತ್ತು ಸುರಕ್ಷಿತ ಡಿಜಿಟಲ್ ಅನುಭವಕ್ಕೆ ಗ್ರಾಹಕರಲ್ಲಿ ಜಾಗೃತಿ ಪ್ರಮುಖವಾಗಿದೆ. ಅದರಂತೆ ಈ ಅಭಿಯಾನವು ಗ್ರಾಹಕ ರಕ್ಷಣಾ ಕ್ರಮಗಳನ್ನು ಬಲಪಡಿಸುತ್ತದೆ ಮತ್ತು ಭಾರತೀಯ ಗ್ರಾಹಕರನ್ನು ಸಬಲೀಕರಣಗೊಳಿಸುವ ನಮ್ಮ ಬದ್ಧತೆಯನ್ನು ಬಲಪಡಿಸುತ್ತದೆ ಎಂದು ಪ್ರತಿಪಾದಿಸಿದರು.

'ಸಬಲೀಕೃತ ಗ್ರಾಹಕರಾಗಿರಿ' ಮೆಟಾ ಜಂಟಿ ಅಭಿಯಾನವು ಗ್ರಾಹಕರಿಗೆ ಬರುವ ಆನ್‌ಲೈನ್ ಬೆದರಿಕೆಗಳನ್ನು ಗುರುತಿಸುವುದು ಮತ್ತು ಬಲವಾದ ಪಾಸ್‌ವರ್ಡ್‌ಗಳ ಬಳಕೆ, ಆನ್‌ಲೈನ್ ಮಾಹಿತಿ ಪರಿಶೀಲನೆ ಮತ್ತು ಅನುಮಾನಾಸ್ಪದ ಚಟುವಟಿಕೆಯನ್ನು ವರದಿ ಮಾಡುವುದು ಸೇರಿದಂತೆ ಆರೋಗ್ಯಕರ ಆನ್‌ಲೈನ್ ಅಭ್ಯಾಸಗಳನ್ನು ಉತ್ತೇಜಿಸುತ್ತದೆ. ಈ ನಿಟ್ಟಿನಲ್ಲಿ ಭಾರತೀಯರಿಗೆ ಶಿಕ್ಷಣ ನೀಡಲು ಪ್ರಯತ್ನಿಸುತ್ತದೆ ಎಂದು ತಿಳಿಸಿದರು. ಈ ವೇಳೆ



- **ಸಬಲೀಕೃತ ಗ್ರಾಹಕರಾಗಿರಿ ಅಭಿಯಾನಕ್ಕೆ ಮೆಟಾ ಸಹಯೋಗ, ಅಭಿಯಾನ ಗ್ರಾಹಕ ಸಬಲೀಕರಣ**
- **ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯಲ್ಲಿ ವಿಭಾಗ**
- **ಕೇಂದ್ರ ಸಚಿವ ಜೋಶಿ ಮತ್ತು ಮೆಟಾದ ಮುಖ್ಯ ಜಾಗತಿಕ ವ್ಯವಹಾರಗಳ ಅಧಿಕಾರಿ ಕಪ್ಲಾನ್ ಘೋಷಣೆ**

ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯಲ್ಲಿ ವಿಭಾಗವು ಸ್ಥಾಪಿಸಿದ ಮತ್ತು ಮೆಟಾ ಬೆಂಬಲಿಸಿದ ಅಧ್ಯಕ್ಷರು ಬಾಂಬೆ ಐಐಟಿಯೊಂದಿಗೆ ನಿಯೋಜಿಸಲಾದ ಜಂಟಿ ಯೋಜನೆ ಬಗ್ಗೆ ಕೇಂದ್ರ ಸಚಿವರ ಗಮನ ಸೆಳೆದರು.

**ನಾಗರಿಕ-ಕೇಂದ್ರಿತ ಚಾಟ್‌ಬಾಟ್:** ಗ್ರಾಹಕ್ ನ್ಯಾಯ್' ಅನ್ನು ರಚಿಸುವಲ್ಲಿ ಮೆಟಾದ ದೊಡ್ಡ ಭಾಷಾ ಮಾದರಿಯಾದ ಲಾಮಾ 2 ಅನ್ನು ಬಳಸಿಕೊಳ್ಳುವ ಕಾರ್ಯಸಾಧ್ಯತೆ ಬಗ್ಗೆ ಈ ಯೋಜನೆ ಪರಿಶೋಧಿಸುತ್ತದೆ. 'ಚಾಟ್‌ಬಾಟ್ ಗ್ರಾಹಕ ಹಕ್ಕುಗಳ ಮಾಹಿತಿಗೆ ಪ್ರವೇಶ ಹೆಚ್ಚಿಸುತ್ತದೆ. ಇದು ದೂರು ಸಲ್ಲಿಸಲು ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಪರಿಹರಿಸಲು ಒಂದು ಪರಿಹಾರ ಸಾಧನವಾಗಿದೆ. ಚಾಟ್‌ಬಾಟ್ ಈಗ ಕ್ಲೋಸ್ಡ್ ಗ್ರೂಪ್ ಬೀಟಾ ಪರೀಕ್ಷೆಗೆ ಸಿದ್ಧವಾಗಿದೆ ಮತ್ತು ಅದರ ಪರೀಕ್ಷೆ ಪೂರ್ಣಗೊಂಡ ನಂತರ ಅಧಿಕೃತವಾಗಿ ಪ್ರಾರಂಭಿಸಲಾಗುತ್ತದೆ ಮತ್ತು ವೆಬ್‌ಸೈಟ್‌ಗೆ ಸಂಯೋಜಿಸಲಾಗುತ್ತದೆ.

## ದೋಣಿ ದುರಂತ: ಆರು ಮೃತದೇಹಗಳು ಪತ್ತೆ: ಬಾಲಕಿಗಾಗಿ ಹುಡುಕಾಟ

**ಶಿವಪುರಿ:** ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯ ಮಾತಟಿಲಾ ಅಣೆಕಟ್ಟಿನಲ್ಲಿ ದೋಣಿ ಮಗುಚಿ ಬಿದ್ದು ಆರು ಜನ ಮೃತಪಟ್ಟಿದ್ದರು, ಮೂವರು ಮಕ್ಕಳು ಸೇರಿದಂತೆ ಆರು ಜನರ ಶವಗಳನ್ನು ಹೊರ ತೆಗೆಯಲಾಗಿದೆ ಎಂದು ಬುಧವಾರ ಅಧಿಕಾರಿಗಳು ತಿಳಿಸಿದ್ದಾರೆ.

ಖನಿಯಾಧಾನ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಮಾತಿಟಿಲಾ ಅಣೆಕಟ್ಟಿನ ದ್ವೀಪದಲ್ಲಿರುವ ದೇವಸ್ಥಾನಕ್ಕೆ 15 ಜನರನ್ನು ಕರೆದೊಯ್ಯುತ್ತಿದ್ದ ದೋಣಿ ಸಂಜೆ ಮುಗುಚಿ ಬಿದ್ದಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಗ್ರಾಮಸ್ಥರ ಸಹಾಯದಿಂದ ಎಂಟು ಜನರನ್ನು ರಕ್ಷಿಸಲಾಗಿದ್ದರೆ, ಇತರ ಏಳು ಜನರು ನೀರಿನಲ್ಲಿ ನಾಪತ್ತೆಯಾಗಿದ್ದರು. ಆ ಪೈಕಿ ಆರು ಜನರ ಶವಗಳನ್ನು ಹೊರತೆಗೆಯಲಾಗಿದೆ ಎಂದು ಅವರು ಹೇಳಿದ್ದಾರೆ.

ರಾತ್ರಿಯಿಡೀ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು ಮತ್ತು ಬುಧವಾರ ಮಧ್ಯಾಹ್ನದವರೆಗೆ ಕಾಣೆಯಾದ ಆರು ಜನರ ಶವಗಳನ್ನು ಹೊರತೆಗೆಯಲಾಗಿದೆ ಎಂದು ಪಿಚೋರ್‌ನ ಉಪ ವಿಭಾಗೀಯ ಪೊಲೀಸ್ ಅಧಿಕಾರಿ ಪ್ರಶಾಂತ್ ಶರ್ಮಾ ಅವರು ತಿಳಿಸಿದ್ದಾರೆ. ಕಾಣೆಯಾದ 15 ವರ್ಷದ ಕುಂಕುಮ್ ಎಂಬ ಬಾಲಕಿಗಾಗಿ ಹುಡುಕಾಟ ಇನ್ನೂ ಮುಂದುವರೆದಿದೆ ಎಂದು ಅವರು ಹೇಳಿದ್ದಾರೆ.

ಮೃತರನ್ನು ಕನ್ಹಾ(7), ಶಿವ(8), ಚೈನಾ(14), ರಾಮದೇವಿ(35), ಲೀಲಾ(40) ಮತ್ತು ಶಾರದಾ(55) ಎಂದು ಗುರುತಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಪಿಟಿಐ ಜೊತೆ ಮಾತನಾಡಿದ ಬದುಕುಳಿದ ರಾಮದೇವಿ, ದೋಣಿಯೊಳಗೆ ಕೆಳಗಿನಿಂದ ನೀರು ನುಗ್ಗಲು ಪ್ರಾರಂಭಿಸಿತು, ಇದರಿಂದಾಗಿ ಅದು ಸ್ವಲ್ಪ ಸಮಯದಲ್ಲೇ ಒಂದು ಬದಿಗೆ ವಾಲಿತು ಎಂದು ಹೇಳಿದ್ದಾರೆ.

## ವಿಶ್ವದ ಮೊದಲ ಭೂಮ್ಯತೀತ ರಾಜಕಾರಣಕ್ಕೆ ನಾಂದಿ ಹಾಡಿದ ಎಲಾನ್ ಮಸ್ಕ್

# ಜೋ ಬೈಡನ್ ನಿರಾಸಕ್ತಿಗೆ ದಾಖಲೆಗಳಿವೆ

**ವಾಷಿಂಗ್ಟನ್:** ಸರಿಸುಮಾರು 10 ತಿಂಗಳು ಕಾಲ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್ಎಸ್)ದಲ್ಲಿ ಸಿಲುಕಿಕೊಂಡಿದ್ದ ಭಾರತೀಯ ಮೂಲದ ಅಮೆರಿಕನ್ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್, ಎಲ್ಲಾ ಅಡೆತಡೆಗಳನ್ನೂ ಮೀರಿ ಭೂಮಿಗೆ ಸುರಕ್ಷಿತವಾಗಿ ಮರಳಿದ್ದಾರೆ. ಎಲಾನ್ ಮಸ್ಕ್ ಒಡೆತನದ ಸ್ಪೇಸ್ ಎಕ್ಸ್ ಡ್ರ್ಯಾಗನ್ ಕ್ಯಾಪ್ಸೂಲ್‌ನಲ್ಲಿ, ಈ ಇಬ್ಬರೂ ಗಗನಯಾತ್ರಿಗಳು ಭೂಮಿಗೆ ಮರಳಿದ್ದಾರೆ.

ಆದರೆ ಸುನೀತಾ ವಿಲಿಯಮ್ಸ್ ಅವರ ದೀರ್ಘಕಾಲದ ಬಾಹ್ಯಾಕಾಶ ವಾಸ್ತವ್ಯ ವಿಚಾರ ಈಗ ರಾಜಕೀಯ ಸ್ವರೂಪ ಪಡೆದುಕೊಳ್ಳುತ್ತಿದೆ. ಸುನೀತಾ ವಿಲಿಯಮ್ಸ್ ಅವರು ಇಷ್ಟು ದೀರ್ಘಕಾಲ ಬಾಹ್ಯಾಕಾಶದಲ್ಲೇ ಉಳಿಯುವಂತಾಗಲು, ಈ ಹಿಂದಿನ ಜೋ ಬೈಡನ್ ಆಡಳಿತದ ನಿರಾಸಕ್ತಿಯೇ ಕಾರಣ.. ಎಂಬ ಎಲಾನ್ ಮಸ್ಕ್ ಅವರ ಆರೋಪ, ವಿಶ್ವದ ಮೊಟ್ಟ ಮೊದಲ ಭೂಮ್ಯತೀತ ರಾಜಕಾರಣಕ್ಕೆ ಚಾಲನೆ ನೀಡಿದೆ. ಆದರೆ ಇಷ್ಟಕ್ಕೆ ಸುಮ್ಮನಾಗದ ಎಲಾನ್ ಮಸ್ಕ್, ಸುನೀತಾ ವಿಲಿಯಮ್ಸ್ ಅವರನ್ನು ಭೂಮಿಗೆ ಕರೆತರಲು ಮಾಜಿ ಅಧ್ಯಕ್ಷ ಜೋ ಬೈಡನ್ ತೀವ್ರ ನಿರಾಸಕ್ತಿ ತೋರಿದ್ದರು ಎಂದು ಗಂಭೀರ ಆರೋಪ ಮಾಡಿದ್ದಾರೆ. ಈ ಕುರಿತು ಫಾಕ್ಸ್ ನ್ಯೂಸ್‌ಗೆ ನೀಡಿರುವ ಸಂದರ್ಶನದಲ್ಲಿ ಮಾತನಡಿರುವ ಎಲಾನ್ ಮಸ್ಕ್, ಐಎಸ್‌ಎಸ್‌ನಲ್ಲಿ ಸಿಲುಕಿಕೊಂಡಿದ್ದ ಗಗನಯಾತ್ರಿಗಳನ್ನು ಭೂಮಿಗೆ ಕರೆತರುವ ನಮ್ಮ ಪ್ರಯತ್ನಗಳಿಗೆ ಮಾಜಿ ಅಧ್ಯಕ್ಷ ಜೋ ಬೈಡನ್ ಆಡಳಿತ ಬೆಂಬಲ ನೀಡಲಿಲ್ಲ.. ಎಂದು ಆರೋಪಿಸಿದ್ದಾರೆ.



### ಹಲವು ಬಾರಿ ಮನವಿ

**ಸ್ಪೇಸ್ ಎಕ್ಸ್ ಕಂಪನಿ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಆದಷ್ಟು ಬೇಗ ಭೂಮಿಗೆ ಮರಳಿ ಕರೆತರುವ ಉದ್ದೇಶವನ್ನು ಹೊಂದಿತ್ತು. ಈ ಕುರಿತು ಆಗಿನ ಜೋ ಬೈಡನ್ ಆಡಳಿತಕ್ಕೆ ಹಲವು ಬಾರಿ ಮನವಿ ಕೂಡ ಮಾಡಿಕೊಳ್ಳಲಾಗಿತ್ತು. ಆದರೆ ರಾಜಕೀಯ ಕಾರಣಗಳಿಗೆ ಜೋ ಬೈಡನ್ ಅವರು ಸುನೀತಾ ವಿಲಿಯಮ್ಸ್ ಅವರನ್ನು ಭೂಮಿಗೆ ಕರೆತರುವ ಕಾರ್ಯಾಚರಣೆಗೆ ಅನುಮತಿ ನೀಡಲಿಲ್ಲ ಎಂದು ಎಲಾನ್ ಮಸ್ಕ್ ಹೇಳಿದ್ದಾರೆ.**

- **ಭೂಮಿಗೆ ಸುರಕ್ಷಿತವಾಗಿ ಮರಳಿದ ಸುನೀತಾ ವಿಲಿಯಮ್ಸ್, ಬುಚ್ ವಿಲ್ಮೋರ್**
- **ಗಗನಯಾತ್ರಿಗಳನ್ನು ಕರೆತಂದ ಸ್ಪೇಸ್ ಎಕ್ಸ್ ಮಾಲೀಕ ಎಲಾನ್ ಮಸ್ಕ್ ಸಂತಸ**
- **ಮಾಜಿ ಅಧ್ಯಕ್ಷ ಜೋ ಬೈಡನ್ ವಿರುದ್ಧ ಗಂಭೀರ ಆರೋಪ ಮಾಡಿದ ಎಲಾನ್ ಮಸ್ಕ್**
- **ಸುನೀತಾರನ್ನು ಕರೆತರಲು ಜೋ ಬೈಡನ್ ನಿರಾಸಕ್ತರಾಗಿದ್ದರು ಎಂದ ಎಲಾನ್ ಮಸ್ಕ್**

ಗಗನಯಾತ್ರಿಗಳನ್ನು ಇಷ್ಟು ದೀರ್ಘಕಾಲ ಐಎಸ್‌ಎಸ್‌ನಲ್ಲೇ ಉಳಿಯಲು ಬಿಟ್ಟ ಜೋ ಬೈಡನ್ ಆಡಳಿತದ ನಿರ್ಧಾರ ಭಯಾನಕವಾದುದು. ಮಾಜಿ ಅಧ್ಯಕ್ಷರಿಗೆ ಗಗನಯಾರಿಗಳ ಸುರಕ್ಷತೆಗಿಂತ ಅವರ ರಾಜಕೀಯ ಲಾಭ-ನಷ್ಟಗಳೇ ಮುಖ್ಯವಾಗಿದ್ದವು ಎಂಬ ಎಲಾನ್ ಮಸ್ಕ್ ಆರೋಪಗಳು ಇದೀಗ ಜಾಗತಿಕವಾಗಿ ಗಮನ ಸೆಳೆದಿದೆ.

ಈ ವರ್ಷದ ಜನವರಿಯಲ್ಲಿ ಅಮೆರಿಕದ ಆಡಳಿತದ ಚುಕ್ಕಾಣಿ ಹಿಡಿದ ಡೊನಾಲ್ಡ್ ಟ್ರಂಪ್,

**ಹೌದು, ಸುನೀತಾ ವಿಲಿಯನ್ಸ್ ಮತ್ತು ಬುಚ್ ವಿಲ್ಮೋರ್ ಅವರ ಮರಳುವಿಕೆಯನ್ನು ತುಂಬು ಹೃದಯದಿಂದ ಸ್ವಾಗತ ಮಾಡಿರುವ ಎಲಾನ್ ಮಸ್ಕ್, ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು ಸುರಕ್ಷಿತವಾಗಿ ಭೂಮಿಗೆ ಮರಳಿರುವುದು, ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ಆಸಕ್ತಿಯ ಫಲ.. ಎಂದು ಹೇಳಿದ್ದಾರೆ.**

ಐಎಸ್‌ಎಸ್‌ನಲ್ಲಿ ದೀರ್ಘಕಾಲದಿಂದ ಸಿಲುಕಿದ್ದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಭೂಮಿಗೆ ಸುರಕ್ಷಿತವಾಗಿ ಕರೆತರುವ ಬಗ್ಗೆ ದೃಢ ಸಂಕಲ್ಪ ಮಾಡಿದರು.

ಅವರ ಕರೆಗೆ ಸ್ಪೇಸ್ ಎಕ್ಸ್ ತುರ್ತಾಗಿ ಸ್ಪಂದಿಸಿ, ಇಬ್ಬರೂ ಗಗನಯಾತ್ರಿಗಳನ್ನು ಭೂಮಿಗೆ ಕರೆತರುವ ಕಾರ್ಯಾಚರಣೆಗೆ ಚಾಲನೆ ನೀಡಿತು. ಇದರ ಫಲಿತಾಂಶ ಈಗ ಜಗತ್ತಿನ ಮುಂದಿದೆ ಎಂದು ಎಲಾನ್ ಮಸ್ಕ್ ಹೇಳಿದ್ದಾರೆ.

ಈ ವಿಚಾರವಾಗಿ ಡೊನಾಲ್ಡ್ ಟ್ರಂಪ್ ಅವರ ಅಭಿಪ್ರಾಯ ಕೂಡ ಇದೇ ರೀತಿಯಾಗಿದೆ. ಅಸಮರ್ಥ ಗುಂಪಿನಿಂದ ಇಬ್ಬರೂ ಗಗನಯಾತ್ರಿಗಳನ್ನು ಸುರಕ್ಷಿತವಾಗಿ ಭೂಮಿಗೆ ಕರೆತರಲಾಗಿದೆ..

## 4 ತಿಂಗಳ ಹೆಣ್ಣು ಮಗುವಿನ ಶವ ಪತ್ತೆ

**ಕೇರಳ:** ಮನೆಯ ಬಾವಿಯೊಂದರಲ್ಲಿ 4 ತಿಂಗಳ ಹೆಣ್ಣು ಮಗುವಿನ ಶವ ಪತ್ತೆಯಾಗಿರುವ ಘಟನೆ ಕೇರಳದ ಕಣ್ಣೂರಿನಲ್ಲಿ ನಡೆದಿದೆ. ವಲಸೆ ಕಾರ್ಮಿಕರು ವಾಸಿಸುತ್ತಿದ್ದ ಬಾಡಿಗೆ ಮನೆಯ ಬಾವಿಯಲ್ಲಿ ತಮಿಳುನಾಡಿನ ದಂಪತಿಗಳ ನಾಲ್ಕು ತಿಂಗಳ ಹೆಣ್ಣು ಮಗು ಶವವಾಗಿ ಪತ್ತೆಯಾಗಿದೆ. ಮಗುವನ್ನು ಕೊಲೆ ಮಾಡಿರುವುದು 12 ವರ್ಷದ ಬಾಲಕಿ ಎಂಬುದು ತಿಳಿದುಬಂದಿದೆ, ಆಕೆ ಕೂಡ ಅದೇ ಕುಟುಂಬದವಳಾಗಿದ್ದು, ಮಗು ಬಂದಿದ್ದರಿಂದ ಕುಟುಂಬದವರಿಗೆ ತನ್ನ ಮೇಲಿನ ಪ್ರೀತಿ ಕಡಿಮೆಯಾಗಿದೆ ಎಂದು ಭಾವಿಸಿ ಮಗುವನ್ನು ಕೊಲೆ ಮಾಡಿದ್ದಾಳೆ.

ಆಕೆ ಅನಾಥೆಯಾಗಿದ್ದು, ಮಗುವಿನ ಪೋಷಕರು, ಆಕೆಯ ಚಿಕ್ಕಪ್ಪ ಮತ್ತು ಚಿಕ್ಕಮ್ಮನೊಂದಿಗೆ ವಾಸಿಸುತ್ತಿದ್ದಳು. ಈ ಮಗು ಬಂದ ಮೇಲೆ ಎಲ್ಲರೂ ಮಗುವನ್ನೇ ಹೆಚ್ಚು ಇಷ್ಟ ಪಡುತ್ತಿದ್ದಾರೆಂದು ತಪ್ಪು ಭಾವಿಸಿ ಈ ಕೃತ್ಯವೆಸಗಿದ್ದಾಳೆ. ರಾತ್ರಿ ಮಲಗಿದ್ದಾಗ ಶಿಶುವನ್ನು ಎತ್ತಿಕೊಂಡು ಹೋಗಿ, ಬಾಡಿಗೆ ಮನೆಯ ಬಳಿ ಇರುವ ಬಾವಿಗೆ ಎಸೆದಿದ್ದಾಳೆ ಎಂದು ಆರೋಪಿಸಲಾಗಿದೆ. ಕೇರಳಕ್ಕೆ ಕೆಲಸಕ್ಕಾಗಿ ವಲಸೆ ಬಂದಿದ್ದ ದಂಪತಿ ರಾತ್ರಿ 9.30ರ ಸುಮಾರಿಗೆ ತಮ್ಮ ಮನೆಯ ಹಾಲ್‌ನಲ್ಲಿ ಮಲಗಿದ್ದರು. ರಾತ್ರಿ 11 ಗಂಟೆ ಸುಮಾರಿಗೆ ಮಗುವಿನ ತಾಯಿ ಎಚ್ಚರಗೊಂಡಾಗ ಮಗು ಇಲ್ಲದಿರುವುದನ್ನು ಕಂಡು ಪತಿಗೆ ತಿಳಿಸಿದ್ದಾಳೆ.

## 3 ಕೋಟಿ ಮೌಲ್ಯದ ಬ್ರೌನ್‌ಶುಗರ್ ವಶ

**ಇಂಫಾಲ್:** ಮಣಿಪುರದ ಚಂದೇಲ್ ಜಿಲ್ಲೆಯಲ್ಲಿ 3.29 ಕೋಟಿ ಮೌಲ್ಯದ ಬ್ರೌನ್ ಶುಗರ್ ವಶಪಡಿಸಿಕೊಳ್ಳಲಾಗಿದ್ದು, 23 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ. ಕಳೆದ ಮೂರು ದಿನಗಳಿಂದ 137 ಬ್ರೌನ್ ಶುಗರ್ ಸಾಬೂನು ಪ್ರಕರಣಗಳನ್ನು ವಶಪಡಿಸಿಕೊಂಡ ನಂತರ ಅಸ್ಸಾಂ ರೈಫಲ್ಸ್ ತಂಡವು ಜಿಲ್ಲೆಯ ಕುಲ್ಟಾಂಗ್ ಗ್ರಾಮದಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸಿತು ಮತ್ತು ವ್ಯಕ್ತಿಯನ್ನು ಬಂಧಿಸಿದೆ ಎಂದು ಅದು ಹೇಳಿದೆ.

ಆತನಿಂದ 2 ಮೊಬೈಲ್ ಫೋನ್ ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಸ್ಸಾಂ ರೈಫಲ್ಸ್ ಹೇಳಿಕೆ ತಿಳಿಸಿದೆ. ತೆಂಗ್ನೌಪಾಲ್ ಜಿಲ್ಲೆಯವನಾದ ವ್ಯಕ್ತಿಯನ್ನು ಪೊಲೀಸರಿಗೆ ಹಸ್ತಾಂತರಿಸಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ಕೆನಡಿ ಹತ್ಯೆ ನಡೆದು 60 ವರ್ಷಗಳ ಬಳಿಕ ರಹಸ್ಯ ದಾಖಲೆಗಳು ಬಹಿರಂಗ

**ವಾಷಿಂಗ್ಟನ್:** ಅಮೆರಿಕದ ಮಾಜಿ ಅಧ್ಯಕ್ಷ ಜಾನ್ ಎಫ್. ಕೆನಡಿಯವರ ಹತ್ಯೆಯ ಕುರಿತಾದ ಕೊನೆಯ ರಹಸ್ಯ ದಾಖಲೆಗಳನ್ನು, ಯುಎಸ್ ನ್ಯಾಷನಲ್ ಆರ್ಕೈವ್ಸ್ ಬಿಡುಗಡೆ ಮಾಡಿದೆ. ಕೆನಡಿ ಹತ್ಯೆ ನಡೆದು 60 ವರ್ಷಗಳಾದ ಬಳಿಕ, ಹತ್ಯೆಯ ಕುರಿತಾದ ಎಲ್ಲಾ ರಹಸ್ಯ ದಾಖಲೆಗಳನ್ನು ಅಮೆರಿಕ ಸರ್ಕಾರ ಸಾರ್ವಜನಿಕಗೊಳಿಸಿದೆ.

ಅಮೆರಿಕದ ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಳೆದ ಜನವರಿಯಲ್ಲಿ ಜಾನ್ ಎಫ್. ಕೆನಡಿ, ಅವರ ಸಹೋದರ ರಾಬರ್ಟ್ ಎಫ್. ಕೆನಡಿ ಮತ್ತು ನಾಗರಿಕ ಹಕ್ಕುಗಳ ನಾಯಕ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ ಹತ್ಯೆಗಳ ಕುರಿತಾದ ಎಲ್ಲಾ ರಹಸ್ಯ ದಾಖಲೆಗಳನ್ನು ಬಿಡುಗಡೆ ಮಾಡುವಂತೆ ಆದೇಶ ಹೊರಡಿಸಿದ್ದರು. ಅಧ್ಯಕ್ಷರ ಆದೇಶದಂತೆ ಇದೀಗ ಯುಎಸ್ ನ್ಯಾಷನಲ್ ಆರ್ಕೈವ್ಸ್ ಕೆನಡಿ ಅವರ ಹತ್ಯೆ ಕುರಿತಾದ ಅಂತಿಮ ಹಂತದ ರಹಸ್ಯ ದಾಖಲೆಗಳನ್ನು ಬಿಡುಗಡೆ ಮಾಡಿದೆ.




ಈ ದಾಖಲೆಗಳಲ್ಲಿ ಯಾವುದೇ ಹೊಸ ವಿಷಯಗಳು ಇಲ್ಲದಿದ್ದರೂ, ಕೆನಡಿಯವರ ಹತ್ಯೆಯ ಬಗ್ಗೆ ಇರುವ ಅನುಮಾನಗಳನ್ನು ಇದು ಮತ್ತಷ್ಟು ಹೆಚ್ಚಿಸಲಿದೆ ಎಂದು ಅಂದಾಜಿಸಲಾಗಿದೆ. ಕೆನಡಿಯವರ ಹತ್ಯೆಗೆ ಸಂಬಂಧಿಸಿದಂತೆ ನ್ಯಾಷನಲ್ ಆರ್ಕೈವ್ಸ್ ಕಳೆದ ಹಲವು ದಶಕಗಳಲ್ಲಿ ಲಕ್ಷಾಂತರ ಪುಟಗಳ ದಾಖಲೆಗಳನ್ನು ಬಿಡುಗಡೆ ಮಾಡಿದೆ. ಆದರೆ ಸಿಐಎ, ಎಫ್‌ಬಿಐ ರಾಷ್ಟ್ರೀಯ ಭದ್ರತೆಯ ಕಾರಣಗಳನ್ನು ನೀಡಿ ಕೆಲವು ದಾಖಲೆಗಳನ್ನು ತಡೆಹಿಡಿದಿದ್ದವು. ಜಾನ್ ಎಫ್. ಕೆನಡಿ ಅವರ ಹತ್ಯೆ ಪ್ರಕರಣವನ್ನು ತನಿಖೆ ಮಾಡಿದ್ದ ವಾರೆನ್ ಆಯೋಗವು, ಕೆನಡಿ ಹತ್ಯೆಯಲ್ಲಿ ಓಸ್ವಾಲ್ಡ್ ಎಂಬಾತನ ಭಾಗೀ ಧಾರಿಕೆಯನ್ನು ದೃಢಪಡಿಸಿತ್ತು. ಆದಾಗ್ಯೂ, ಜಾನ್ ಎಫ್. ಕೆನಡಿ ಹತ್ಯೆಯಲ್ಲಿ ಹಲವು ಜನ ಭಾಗಿಯಾದ ಬಗ್ಗೆ ಅನುಮಾನಗಳಿದ್ದು, ನಿಧಾನವಾಗಿ ಬಿಡುಗಡೆ ಮಾಡುತ್ತಿರುವುದು ಈ ಅನುಮಾನಗಳಿಗೆ ಮತ್ತಷ್ಟು ಪುಷ್ಟಿ ನೀಡಿದೆ.

- **ಜಾನ್ ಎಫ್. ಕೆನಡಿ ಹತ್ಯೆಯ ಎಲ್ಲಾ ರಹಸ್ಯ ದಾಖಲೆಗಳು ಬಿಡುಗಡೆ**
- **ಡೊನಾಲ್ಡ್ ಟ್ರಂಪ್ ಆದೇಶದನ್ವಯ ಕೆನಡಿ ಹತ್ಯೆಯ ರಹಸ್ಯ ದಾಖಲೆಗಳ ಬಿಡುಗಡೆ**
- **ಅಮೆರಿಕದ ಮಾಜಿ ಅಧ್ಯಕ್ಷರ ಹತ್ಯೆಯಲ್ಲಿ ಯಾರೆಲ್ಲಾ ಭಾಗಿ ಏನೆಲ್ಲಾ ಷಡ್ಯಂತ್ರ**
- **ಕೆನಡಿ ಹತ್ಯೆ ನಡೆದು 60 ವರ್ಷಗಳ ಬಳಿಕ ರಹಸ್ಯ ದಾಖಲೆಗಳು ಬಹಿರಂಗ**

## ಗಂಡನನ್ನು ಕೊಂದು ತುಂಡು ಮಾಡಿ ಡ್ರಮ್‌ನಲ್ಲಿ ಸಿಮೆಂಟ್ ಸುರಿದು ಸೀಲ್ ಮಾಡಿದ್ದ ಪತ್ನಿ, ಪ್ರಿಯಕರ ಅರೆಸ್ಟ್

**ಮೀರತ್:** ಪ್ರಿಯಕರನ ಜೊತೆ ಸೇರಿ ಪತಿಯನ್ನು ಇರಿದು ಕೊಂದ ಪತ್ನಿ ಆತನ ದೇಹವನ್ನು ತುಂಡು ಮಾಡಿ, ಸಿಮೆಂಟ್ ತುಂಬಿದ ಡ್ರಮ್‌ನಲ್ಲಿ ಹಾಕಿ ಸೀಲ್ ಮಾಡಿಮುಚ್ಚಿಟ್ಟ ಭೀಕರ ಘಟನೆ ಉತ್ತರಪ್ರದೇಶದ ಮೀರತ್‌ನಲ್ಲಿ ನಡೆದಿದೆ. ನೌಕಾಪಡೆಯ ಉದ್ಯೋಗಿ ಸೌರಭ್ ರಜಪೂತ್ (29) ಕೊಲೆಯಾದ ವ್ಯಕ್ತಿಯಾಗಿದ್ದು, ಆತನ ಪತ್ನಿ ಮುಸ್ಕಾನ್ (27) ಮತ್ತು ಆಕೆಯ ಪ್ರಿಯಕರ ಸಾಹಿಲ್ ( 25)ನನ್ನು ಪೊಲೀಸರು ಬಂಧಿಸಿದ್ದಾರೆ.

ಬ್ರಹ್ಮಪುರಿಯ ಇಂದ್ರಾನಗರ ಹಂತ 2 ರ ಸೌರಭ್ 2016 ರಲ್ಲಿ ಗೌರಿಪುರದ ಮುಸ್ಕಾನ್ ರಸ್ತೋಗಿ ಅವರನ್ನು ಪ್ರೇಮ ವಿವಾಹವಾಗಿದ್ದರು ಅವರ ಕುಟುಂಬಗಳು ಅವರ ಸಂಬಂಧದಿಂದ ಅತೃಪ್ತರಾಗಿದ್ದರು ಇದರಿಂದಾಗಿ ದಂಪತಿಗಳು ಪ್ರತ್ಯೇಕ ವಾಗಿ ವಾಸಿಸುತ್ತಿದ್ದರು ಅವರಿಗೆ ಮಗಳು ಹುಟ್ಟಿದ್ದಳು ಇತ್ತೀಚೆಗೆ ಇಂದ್ರಾನಗರ ಹಂತ ದಲ್ಲಿ ಬಾಡಿಗೆ ಮನೆ ಮಾಡಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.



ಕಳೆದ ಮಾರ್ಚ್ 4 ರಂದು ಸೌರಭ್ ರಜಪೂತ್ ನಿಗೂಢವಾಗಿ ನಾಪತ್ತೆಯಾಗಿದ್ದರು ಆದರೆ ಇದರ ಬಗ್ಗೆ ಚಿಂತೆ ಇಲ್ಲದಂತೆ ಸೌರಭ್ ಅವರ ವಿಚಾರಣೆಯ ಸಮಯದಲ್ಲಿ, ಮಾರ್ಚ್ 4 ರಂದು ಸೌರಬ್‌ಗೆ ಇರಿದು ಕೊಂದಿದ್ದಾಗಿ ಇಬ್ಬರೂ ಒಪ್ಪಿಕೊಂಡರು.

ನಂತರ ಇಬ್ಬರೂ ಆತನ ದೇಹವನ್ನು ಕತ್ತರಿಸಿ, ಶವಗಳನ್ನು ಡ್ರಮ್‌ನಲ್ಲಿ ಇರಿಸಿ, ಸಿಮೆಂಟ್‌ನಿಂದ ಮುಚ್ಚಿದ್ದಾರೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆಯುಷ್ ವಿಕ್ರಮ್ ಸಿಂಗ್ ತಿಳಿಸಿದ್ದಾರೆ.

## ಹಿಂಸಾಚಾರಕ್ಕೆ ಆರ್‌ಎಸ್‌ಎಸ್ ಖಂಡನೆ

**ಹೈದರಾಬಾದ್:** ಮಹಾರಾಷ್ಟ್ರದ ಸಂಬಾಜಿನಗರದಲ್ಲಿರುವ ಮೊಘಲ್ ಸಾಮ್ರಾಟ ಔರಂಗಜೇಬ್ ಸಮಾಧಿಯನ್ನು ತೆರವುಗೊಳಿಸುವಂತೆ ವಿಶ್ವ ಹಿಂದೂ ಪರಿಷತ್ ಮತ್ತಿತರ ಹಿಂದೂಪರ ಸಂಘಟನೆಗಳು ಒತ್ತಾಯಿಸುತ್ತಿರುವಂತೆಯೇ, ಔರಂಗಜೇಬ್ 'ಈಗ ಪ್ರಸ್ತುತವಲ್ಲ' ಎಂದು ಆರ್ ಸ್‌ಎಸ್ ವಕ್ತಾರ ಸುನೀಲ್ ಅಂಬೇಕರ್ ಹೇಳಿದ್ದಾರೆ. ಅಲ್ಲದೇ ಯಾವುದೇ ರೀತಿಯ ಹಿಂಸಾಚಾರವನ್ನು ಪ್ರೋತ್ಸಾಹಿಸುವುದಿಲ್ಲ ಎಂದಿದ್ದಾರೆ. ಔರಂಗಜೇಬ್ ಈಗ ಪ್ರಸ್ತುತವಲ್ಲ, ಯಾವುದೇ ರೀತಿಯ ಹಿಂಸಾಚಾರವನ್ನು ಪ್ರೋತ್ಸಾಹಿಸಬಾರದು ಎಂದು ಅಂಬೇಕರ್ ಹೇಳಿದ್ದಾರೆ.

ಔರಂಗಜೇಬ್ ಸಮಾಧಿ ತೆರವು ವಿಚಾರದಲ್ಲಿ ನಾಗ್ಪುರದಲ್ಲಿ ಹಿಂಸಾಚಾರ ಭುಗಿಲೆದ್ದ ಬೆನ್ನಲ್ಲೇ ಆರ್ ಎಸ್ ಎಸ್ ತನ್ನ ನಿಲುವನ್ನು ತಿಳಿಸಿದೆ. ಹಿಂಸಾಚಾರಕ್ಕೆ ಸಂಬಂಧಿಸಿದಂತೆ 50 ಮಂದಿಯನ್ನು ಬಂಧಿಸಲಾಗಿದೆ. ನಾಗ್ಪುರದ 8 ಪೊಲೀಸ್ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸತತ ಎರಡನೇ ದಿನವೂ ಕರ್ಫ್ಯೂವನ್ನು ಜಾರಿಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ತನ್ನ ಶತಮಾನೋತ್ಸವವನ್ನು ಆಚರಿಸಲು ಸಜ್ಜಾಗುತ್ತಿರುವಂತೆಯೇ ಸುನೀಲ್ ಅಂಬೇಕರ್ ಈ ರೀತಿಯ ಹೇಳಿಕೆ ನೀಡಿದ್ದಾರೆ. ಈ ವರ್ಷದ ವಿಜಯದಶಮಿಯಂದು ಆರ್‌ಎಸ್‌ಎಸ್ 100 ವರ್ಷ ಪೂರೈಸಲಿದೆ. 2025-26 ರಿಂದ ಶತಮಾನೋತ್ಸವ ವರ್ಷವನ್ನು ಆಚರಿಸಲಾಗುವುದು. ಶಾಖಾ ವಿಸ್ತರಣೆ ಮತ್ತು ಅದನ್ನು ಹೇಗೆ ಸಾಧಿಸಲಾಯಿತು ಎಂಬುದನ್ನು ನಿರ್ಣಯಿಸಲಾಗುತ್ತದೆ. ನಿಗದಿಪಡಿಸಿದ ಗುರಿಗಳನ್ನು ಪರಿಶೀಲಿಸಲಾಗುತ್ತದೆ ಎಂದರು.

ಜನರ ಭಾಗವಹಿಸುವಿಕೆ ಹೆಚ್ಚಿಸುವ ಯೋಜನೆಗಳ ಜೊತೆಗೆ ಕುಟುಂಬದ ಜಾಗೃತಿ, ಸಾಮಾಜಿಕ ಸಂಪರ್ಕ, ನಾಗರಿಕ ಜಾಗೃತಿ ಕುರಿತು ಚರ್ಚಿಸಲಾಗುವುದು ಎಂದು ಅವರು ತಿಳಿಸಿದರು. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರು ಚರ್ಚೆಯಲ್ಲಿ ಭಾಗವಹಿಸುವರು. ಶತಮಾನೋತ್ಸವದ ಅಂಗವಾಗಿ 40 ವರ್ಷದೊಳಗಿನವರು ಮತ್ತು 40-60 ವರ್ಷದೊಳಗಿನವರಿಗೆ ವಿಶೇಷ ತರಗತಿ ನಡೆಯಲಿದೆ.

## ಸತ್ಯೇಂದರ್ ಜೈನ್ ವಿರುದ್ಧ ಕೇಸ್ ದಾಖಲು

**ನವದೆಹಲಿ:** 571 ಕೋಟಿ ರೂ.ಗಳ ಸಿಸಿಟಿವಿ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಮೇಲೆ ದೆಹಲಿ ಸರ್ಕಾರದ ಭ್ರಷ್ಟಾಚಾರ ನಿಗ್ರಹ ದಳ ಮಾಜಿ ಲೋಕೋಪಯೋಗಿ ಸಚಿವ ಮತ್ತು ಹಿರಿಯ ಎಎಪಿ ನಾಯಕ ಸತ್ಯೇಂದರ್ ಜೈನ್ ವಿರುದ್ಧ ಕೇಸ್ ದಾಖಲಿಸಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ. ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 17ಎ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ನಂತರ ಮಂಗಳವಾರ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಜಂಟಿ ಪೊಲೀಸ್ ಆಯುಕ ಮಧುರ್ ವರ್ಮಾ ತಿಳಿಸಿದ್ದಾರೆ. ದೆಹಲಿಯಾದ್ಯಂತ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವಲ್ಲಿ ವಿಳಂಬ ಮಾಡಿದ್ದಕ್ಕಾಗಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್)ಗೆ ವಿಧಿಸಲಾದ 16 ಕೋಟಿ ರೂ.ದಂಡವನ್ನು ಜೈನ್ ಮನ್ನಾ ಮಾಡಿದ್ದಾರೆ ಎಂಬ ಆರೋಪವಿದೆ. ಸಿಸಿಟಿವಿ ಯೋಜನೆಯನ್ನು ಕಳಪೆ ರೀತಿಯಲ್ಲಿ ಕಾರ್ಯಗತಗೊಳಿಸಲಾಗಿದೆ ಎಂದು ಹಲವಾರು ದೂರುಗಳು ಬಂದಿವೆ.



ಹಸ್ತಾಂತರದ ಸಮಯದಲ್ಲಿ ಹಲವಾರು ಕ್ಯಾಮೆರಾಗಳು ಕಾರ್ಯನಿರ್ವಹಿಸದಿರುವುದು ಸಹ ಕಂಡುಬಂದಿದೆ ಎಂದು ಅವರು ವರ್ಮಾ ಹೇಳಿದ್ದಾರೆ. ಹೇಳಿಕೆಯ ಪ್ರಕಾರ, ಬಿಇಎಲ್ ಮತ್ತು ಅದರ ಗುತ್ತಿಗೆದಾರರ ಮೇಲೆ ವಿಧಿಸಲಾದ ದಂಡವನ್ನು ಮನ್ನಾ ಮಾಡಲು ಸಿಸಿಟಿವಿ ಯೋಜನೆಯ ನೋಡಲ್ ಅಧಿಕಾರಿಯಾಗಿದ್ದ ಜೈನ್ ಅವರಿಗೆ 7 ಕೋಟಿ ರೂ. ಲಂಚ ನೀಡಲಾಗಿದೆ ಎಂದು ಹೇಳಲಾಗಿದೆ.

## ನಾಗ್ಪುರ ಮಹಿಳಾ ಪೊಲೀಸ್ ಅಧಿಕಾರಿಗೆ ಕಿರುಕುಳ

**ನಾಗ್ಪುರ:** ಗಣೇಶ್‌ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ನಲ್ಲಿ ನಾಗ್ಪುರದಲ್ಲಿ ಕಳೆದ ವಾರ ನಡೆದ ಕೋಮುಗಲಭೆಯ ಸಂದರ್ಭದಲ್ಲಿ ಗಲಭೆಕೋರರೊಬ್ಬರು ಕರ್ತವ್ಯ ನಿರತ ಮಹಿಳಾ ಪೊಲೀಸ್ ಅಧಿಕಾರಿಗೆ ಕಿರುಕುಳ ನೀಡಿರುವುದು ಬಹಿರಂಗವಾಗಿದೆ.ಎಫ್‌ಐಆರ್‌ನಲ್ಲಿ ಒಟ್ಟು 51 ಮಂದಿಯನ್ನು ಹೆಸರಿಸಲಾಗಿದೆ.

ಇದಲ್ಲದೆ, ಈ ಪ್ರದೇಶದಲ್ಲಿ ಕೋಮು ಉದ್ವಿಗ್ನತೆಯನ್ನು ಪ್ರಚೋದಿಸುವ ಉದ್ದೇಶದಿಂದ ಗಲಭೆಕೋರರ ಗುಂಪು ಪ್ರಚೋದನಕಾರಿ ಘೋಷಣೆಗಳನ್ನು ಕೂಗಿರುವುದು ಕಂಡುಬಂದಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆರೋಪಿಗಳು ಮಹಿಳಾ ಅಧಿಕಾರಿಯ ಸಮವಸ್ತ್ರವನ್ನು ಹೇಗೆ ಎಳೆದು ಅನುಚಿತವಾಗಿ ಸ್ಪರ್ಶಿಸಲು ಪ್ರಯತ್ನಿಸಿದ್ದಾರೆ ಎಂಬುದನ್ನು ಎಫ್‌ಐಆರ್ ವಿವರಿಸುತ್ತದೆ. ಸ್ಥಳದಲ್ಲಿ ನಿಯೋಜಿಸಲಾದ ಕ್ಷಿಪ್ರ ನಿಯಂತ್ರಣ ಪೊಲೀಸ್ (ಆರ್‌ಸಿಪಿ) ಸ್ಕ್ವಾಡ್‌ನ ಅಧಿಕಾರಿ ತಕ್ಷಣ ಘಟನೆಯ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.



ಆಕೆಯ ದೂರಿನ ನಂತರ, ಒಳಗೊಂಡಿರುವ ಅಪರಾಧಿಗಳ ವಿರುದ್ಧ ಔಪಚಾರಿಕ ಪ್ರಕರಣವನ್ನು ದಾಖಲಿಸಲಾಗಿದೆ.

ಕಿರುಕುಳದ ಆರೋಪಗಳ ಹೊರತಾಗಿ, ಆರೋಪಿಗಳು ಸ್ಥಳದಲ್ಲಿದ್ದ ಇತರ ಮಹಿಳಾ ಪೊಲೀಸರೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಉದ್ರೇಕಗೊಂಡ ಗುಂಪು ಅಶ್ಲೀಲ ಸನ್ನೆಗಳನ್ನು ಅಶ್ಲೀಲ ಕಾಮೆಂಟ್‌ಗಳನ್ನು ಮಾಡಿದೆ, ಕರ್ತವ್ಯದಲ್ಲಿದ್ದ ಅಧಿಕಾರಿಗಳನ್ನು ಬೆದರಿಸಲು ಪ್ರಯತ್ನಿಸಿದ್ದಾರೆ. ಒಂದು ಸಮುದಾಯದ ಪವಿತ್ರ ಗ್ರಂಥವನ್ನು ಅಪವಿತ್ರಗೊಳಿಸಲಾಗಿದೆ ಎಂಬ ವದಂತಿ ಹರಡಿದ ನಂತರ ಸೋಮವಾರ ನಾಗ್ಪುರದ ಚಿಟ್ನಿಸ್ ಪಾರ್ಕ್, ಮಹಲ್ ಪ್ರದೇಶದಲ್ಲಿ ಪ್ರತಿಭಟನೆಯ ವೇಳೆ ಹಿಂಸಾಚಾರ ನಡೆದಿದೆ..

## ಖಾಸಗಿ ಕಂಪನಿ ವಾಹನಕ್ಕೆ ಬೆಂಕಿ ಬಿದ್ದು ನಾಲ್ವರ ಸಜೀವ ದಹನ

**ಪುಣೆ:** ಪುಣೆಯ ಖಾಸಗಿ ಕಂಪನಿಯೊಂದರ ವಾಹನಕ್ಕೆ ಬೆಂಕಿ ತಗುಲಿ ನಾಲ್ವರು ಕಾರ್ಮಿಕರು ಮೃತಪಟ್ಟಿರುವ ಘಟನೆ ಇಂದು ಬೆಳಿಗ್ಗೆ ನಡೆದಿದೆ. ಪಿಂಪ್ರಿ ಚಿಂಚ್ವಾಡ್ ಪ್ರದೇಶದ ಹಿಂಜೇವಾಡಿಯಲ್ಲಿ ಈ ಘಟನೆ ನಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಟೆಂಪೋ ಟ್ರಾವೆಲರ್ ಕಂಪನಿಯ ಕೆಲವು ಉದ್ಯೋಗಿಗಳನ್ನು ತಮ್ಮ ಕಚೇರಿಗೆ ಕರೆದೊಯ್ಯುತ್ತಿತ್ತು. ವಾಹನವು ಡಸಾಲ್ಟ್ ಸಿಸ್ಟಮ್ಸ್ ಬಳಿ ಇದ್ದಾಗ, ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿತು, ಇದು ಚಾಲಕನನ್ನು ನಿಧಾನಗೊಳಿಸಲು ಪ್ರೇರೇಪಿಸಿತು ಎಂದು ಹಿಂಜೇವಾಡಿಯ ಉಪ ಪೊಲೀಸ್ ಆಯುಕ್ತ ವಿಶಾಲ್ ಗಾಯಕ್ವಾಡ್ ತಿಳಿಸಿದ್ದಾರೆ. ಕೆಲವು ಉದ್ಯೋಗಿಗಳು ಹೊರ ಬರುವಲ್ಲಿ ಯಶಸ್ವಿಯಾದರೆ, ಅವರಲ್ಲಿ ನಾಲ್ವರು ಸಹೋದ್ಯೋಗಿಗಳು ತಮ್ಮನ್ನು ಹೊರಹಾಕಲು ಸಾಧ್ಯವಾಗದೆ ಸಾವನ್ನಪ್ಪಿದ್ದಾರೆ. ವಾಹನದಿಂದ ಶವಗಳನ್ನು ಹೊರತೆಗೆಯುವ ಕೆಲಸ ನಡೆಯುತ್ತಿದೆ ಎಂದು ಅವರು ಹೇಳಿದರು.

## ರೈತ ಮುಖಂಡರ ಮಾತುಕತೆ



**ಚಂಡೀಗಢ:** ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನುಬದ್ಧ ಖಾತರಿ ಸೇರಿದಂತೆ ಅವರ ವಿವಿಧ ಬೇಡಿಕೆಗಳನ್ನು ಚರ್ಚಿಸಲು ಪ್ರತಿಭಟನಾ ನಿರತ ರೈತರು ಮತ್ತು ಕೇಂದ್ರ ಸಚಿವರ ನಡುವೆ ಮಾತುಕತೆ ನಡೆಯಿತು. ಮಹಾತ್ಮ ಗಾಂಧಿ ಸಾರ್ವಜನಿಕ ಆಡಳಿತ ಸಂಸ್ಥೆಯಲ್ಲಿ ಬೆಳಗ್ಗೆ ಗಂಟೆಗೆ ಸಭೆ ನಡೆಯಿತು. ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾದ 28 ಸದಸ್ಯರ ನಿಯೋಗ ಸಭೆಯಲ್ಲಿ ಭಾಗವಹಿಸಿತ್ತು. ಸಭೆಯಲ್ಲಿ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಭಾಗವಹಿಸಿದ್ದರು.

## ಡೊನಾಲ್ಡ್ ಟ್ರಂಪ್-ವ್ಲಾಡಿಮಿರ್ ಪುಟಿನ್ ಮಾತುಕತೆ ಫಲಪ್ರದ ಎಂದ ವೈಟ್ ಹೌಸ್

# ದಿನಗಳ ಕದನ ವಿರಾಮಕ್ಕೆ ಪುಟಿನ್ ಪಾಸಿಟಿವ್ ರೆಸ್ಪಾನ್ಸ್

**ಮಾಸ್ಕೋ:** ಕಳೆದ ಮೂರು ವರ್ಷಗಳಿಂದ ಜಾಗತಿಕ ಶಾಂತಿಗೆ ಭಾರೀ ಅಪಾಯ ತಂದೊಡ್ಡಿದ್ದ ರಷ್ಯಾ-ಉಕ್ರೇನ್ ಯುದ್ಧ ಅಂತ್ಯವಾಗುವ ಆಶಾಕಿರಣ ಗೋಚರವಾಗುತ್ತಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮುಂದಿಟ್ಟಿದ್ದ 30 ದಿನಗಳ ಕದನ ವಿರಾಮ ಒಪ್ಪಂದಕ್ಕೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಷರತ್ತುಬದ್ಧ ಒಪ್ಪಿಗೆ ಸೂಚಿಸಿದ್ದಾರೆ ಎಂದು ಕ್ರೆಮ್ಲಿನ್ ಹೇಳಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವಿನ ದೂರವಾಣಿ ಸಂಭಾಷಣೆಯಲ್ಲಿ, ಕದನ ವಿರಾಮ ಒಪ್ಪಂದದ ಕುರಿತು ಇಬ್ಬರೂ ನಾಯಕರು ಸಕಾರಾತ್ಮಕ ಮಾತುಕತೆ ನಡೆಸಿದ್ದಾರೆ.. ಎಂದು ಕ್ರೆಮ್ಲಿನ್ ಪ್ರಕಟಣೆಯಲ್ಲಿ ತಿಳಿಸಿದೆ.

ಉಕ್ರೇನ್‌ನಲ್ಲಿನ ಸಂಘರ್ಷವನ್ನು ತಡೆಯುವುದು ಈ ಮಾತುಕತೆಯ ಉದ್ದೇಶವಾಗಿತ್ತು. ಅದರಂತೆ ಈ ಪ್ರಯತ್ನದಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದ್ದು, ರಷ್ಯಾ ಮತ್ತು ಉಕ್ರೇನ್ ಎರಡೂ ದೇಶಗಳು ಪರಸ್ಪರರ ಇಂಧನ ಮೂಲಸೌಕರ್ಯದ ಮೇಲೆ 30 ದಿನಗಳ ಕಾಲ ದಾಳಿ ಮಾಡುವುದನ್ನು ನಿಲ್ಲಿಸುವಂತೆ ಮಾಡಿದ ಮನವಿಗೆ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಒಪ್ಪಿಗೆ ಸೂಚಿಸಿದ್ದಾರೆ. ಅಲ್ಲದೇ ಕೂಡಲೇ ಉಕ್ರೇನ್‌ನ ಇಂಧನ ಮೂಲಸೌಕರ್ಯದ ಮೇಲಿನ ದಾಳಿಯನ್ನು ನಿಲ್ಲಿಸುವಂತೆ ರಷ್ಯಾದ ಸೈನ್ಯಕ್ಕೆ ಆದೇಶ ನೀಡಿದ್ದಾರೆ. ಉಕ್ರೇನ್‌ನಲ್ಲಿ ಶಾಂತಿ ನೆಲೆಸುವಂತೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ.

ಅಮೆರಿಕವು 30 ದಿನಗಳ ಕದನ ವಿರಾಮಕ್ಕೆ ಪ್ರಸ್ತಾಪಿಸಿತ್ತು. ಉಕ್ರೇನ್ ಕಳೆದ ವಾರ ಈ ಪ್ರಸ್ತಾವನೆಗೆ ಸಮ್ಮತಿ ಸೂಚಿಸಿತ್ತು. ಆದರೆ ಈ ಒಪ್ಪಂದದ ಮೇಲ್ವಿಚಾರಣೆಗೆ ಒತ್ತು ನೀಡಿರುವ ವ್ಲಾಡಿಮಿರ್ ಪುಟಿನ್, ಉಕ್ರೇನ್ ತನ್ನ ಸೈನ್ಯ ಸಾಮರ್ಥ್ಯವನ್ನು ಹೆಚ್ಚಿಸದಂತೆ ಮತ್ತು ಉಕ್ರೇನ್‌ಗೆ ನೀಡಲಾಗುತ್ತಿರುವ ಶಸ್ತ್ರಾಸ್ತ್ರ ಪೂರೈಕೆಯನ್ನು ನಿಲ್ಲಿಸುವಂತೆ ಷರತ್ತು ವಿಧಿಸಿದ್ದಾರೆ. ಕದನ ವಿರಾಮವನ್ನು ಉಕ್ರೇನ್ ದುರುಪಯೋಗಪಡಿಸಿಕೊಳ್ಳದಂತೆ ಎಚ್ಚರಿಕೆ ವಹಿಸುವುದು ಅಗತ್ಯ ಎಂಬ ರಷ್ಯಾ ಅಧ್ಯಕ್ಷರ ಹೇಳಿಕೆ ಇದೀಗ ಗಮನ ಸೆಳೆದಿದೆ. ಸಂಘರ್ಷವನ್ನು ಹೆಚ್ಚಿಸುವುದನ್ನು ತಡೆಯಲು ಮತ್ತು ರಾಜಕೀಯ ಹಾಗೂ ರಾಜತಾಂತ್ರಿಕ ಮಾರ್ಗಗಳ ಮೂಲಕ ಪರಿಹಾರವನ್ನು ಕಂಡುಕೊಳ್ಳಲು ಉಕ್ರೇನ್‌ಗೆ ವಿದೇಶಿ ಮಿಲಿಟರಿ ನೆರವು ಮತ್ತು ಗುಪ್ತಚರ ಮಾಹಿತಿಯನ್ನು ನೀಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ಪುಟಿನ್ ಆಗ್ರಹಿಸಿದ್ದಾರೆ.


- **ಟ್ರಂಪ್ ಕದನ ವಿರಾಮ ಒಪ್ಪಂದಕ್ಕೆ ಪುಟಿನ್ ಸಕಾರಾತ್ಮಕ ಪ್ರತಿಕ್ರಿಯೆ**
- **ಕನದ ವಿರಾಮ ಒಪ್ಪಂದಕ್ಕೆ ಷರತ್ತುಬದ್ಧ ಒಪ್ಪಿಗೆ ನೀಡಿದ ಪುಟಿನ್**
- **ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿ ನಿಲ್ಲಿಸಲು ಪುಟಿನ್ ಆದೇಶ**
- **ಡೊನಾಲ್ಡ್ ಟ್ರಂಪ್-ವ್ಲಾಡಿಮಿರ್ ಪುಟಿನ್ ಮಾತುಕತೆ ಫಲಪ್ರದ ಎಂದ ವೈಟ್ ಹೌಸ್**



### ಸಂಘರ್ಷಕ್ಕೆ ಶಾಶ್ವತ ಪರಿಹಾರ

**ವ್ಲಾಡಿಮಿರ್ ಪುಟಿನ್ ಮತ್ತು ಡೊನಾಲ್ಡ್ ಟ್ರಂಪ್ ಅವರ ಈ ಮಾತುಕತೆಯು ಉಕ್ರೇನ್‌ನಲ್ಲಿ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಉಭಯ ನಾಯಕರ ಪ್ರಯತ್ನದಿಂದ ಸಂಘರ್ಷಕ್ಕೆ ಶಾಶ್ವತ ಪರಿಹಾರ ಸಿಗುವ ಸಾಧ್ಯತೆ ಇದೆ. ಮಾತುಕತೆಗಳು ಮುಂದುವರೆದಿದ್ದು, ಸದ್ಯಕ್ಕೆ 30 ದಿನಗಳ ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸಲಾಗಿದೆ. ಮುಂದಿನ ದಿನಗಳಲ್ಲಿ ಶಾಂತಿ ಸ್ಥಾಪನೆಗೆ ಇನ್ನಷ್ಟು ಕ್ರಮಗಳನ್ನು ತೆಗೆದುಕೊಳ್ಳುವ ನಿರೀಕ್ಷೆ ಇದೆ.**

**ಕ್ರೆಮ್ಲಿನ್ ಹೇಳಿಕೆಯ ಪ್ರಕಾರ, ಪುಟಿನ್ ಮತ್ತು ಟ್ರಂಪ್ ಉಕ್ರೇನ್ ವಿಷಯದ ಬಗ್ಗೆ ಸುದೀರ್ಘವಾಗಿ ಮಾತನಾಡಿದರು. ಉಕ್ರೇನ್‌ನಲ್ಲಿನ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಮುಖ್ಯ ಎಂದು ಪುಟಿನ್ ಈ ವೇಳೆ ಅಮೆರಿಕ ಅಧ್ಯಕ್ಷರಿಗೆ ಮನವರಿಕೆ ಮಾಡಿಕೊಟ್ಟರು. ರಷ್ಯಾದ ಭದ್ರತಾ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು, ಯುದ್ಧದ ಮೂಲ ಕಾರಣಗಳನ್ನು ಪರಿಹರಿಸಬೇಕು ಎಂದೂ ಪುಟಿನ್ ಆಗ್ರಹಿಸಿದ್ದಾರೆ..**



# ಮದುವೆಗೆ ಸಜ್ಜಾದ ತೇಜಸ್ವಿ ಪ್ರಕಾಶ್

**ನಾಚಿ ನೀರಾದ ನಟಿ ತೇಜಸ್ವಿ**

ಹಿಂದಿ ಕಿರುತೆರೆಯ ಫೇಮಸ್ ಜೋಡಿ ತೇಜಸ್ವಿ ಪ್ರಕಾಶ್ ಮತ್ತು ಕರಣ್ ಕುಂದ್ರಾ ಮದುವೆಗೆ ಸಜ್ಜಾಗಿದ್ದಾರೆ. ಕಳೆದ ವರ್ಷಗಳಿಂದ ಡೇಟಿಂಗ್ ಮಾಡುತ್ತಿದ್ದ ಈ ಜೋಡಿ ಇದೀಗ ಮದುವೆ ಬಗ್ಗೆ ಅಭಿಮಾನಿಗಳಿಗೆ ಸಿಹಿಸುದ್ದಿ ಕೊಟ್ಟಿದ್ದಾರೆ. ಇತ್ತೀಚೆಗೆ ತಾಯಿಯೊಂದಿಗೆ ಸೆಲೆಬ್ರಿಟಿ ಮಾಸ್ಟರ್ ಶೆಫ್ ಶೋಗೆ ತೇಜಸ್ವಿ ಆಗಮಿಸಿದ್ದರು. ಈ ವೇಳೆ, ನಿರೂಪಕಿ ಮಗಳ ಮದುವೆ ಯಾವಾಗ ಎಂದು ತೇಜಸ್ವಿ ತಾಯಿಗೆ ಕೇಳಿದ್ದಾರೆ. ಆಗ ಈ ವರ್ಷದ ಅಂತ್ಯದಲ್ಲಿ ಮದುವೆ ಆಗಲಿದ್ದಾರೆ ಎಂದು ತಿಳಿಸಿದ್ದಾರೆ. ಆಗ ನಿರೂಪಕಿ ಅಭಿನಂದನೆಗಳನ್ನು ತಿಳಿಸಿದ್ದಾರೆ. ಅದಕ್ಕೆ ನಟಿ ತೇಜಸ್ವಿ ನಾಚಿ ನೀರಾಗಿದ್ದಾರೆ. ಇನ್ನೂ ಈ ಹಿಂದೆ ತೇಜಸ್ವಿ ಅವರು ಕರಣ್ ಕುಂದ್ರಾ ಜೊತೆ ಕೋರ್ಟ್ ಮ್ಯಾರೇಜ್ ಆಗೋದಾಗಿ ಹೇಳಿದ್ದರು. ಸರಳ ಮದುವೆ ಬಗ್ಗೆ ಮಾತನಾಡಿದ್ದರು. ಇನ್ನೂ 2021ರ 'ಬಿಗ್ ಬಾಸ್ ಹಿಂದಿ 15'ರಲ್ಲಿ ತೇಜಸ್ವಿ ಮತ್ತು ಕರಣ್ ಕುಂದ್ರಾ ಸ್ಪರ್ಧಿಗಳಾಗಿದ್ದರು. ಈ ಶೋನಲ್ಲಿ ಇಬ್ಬರಿಗೂ ಪ್ರೇಮಾಂಕುರವಾಯಿತು. ಈಗ ಕಳೆದ 4 ವರ್ಷಗಳಿಂದ ಇಬ್ಬರೂ ಡೇಟಿಂಗ್ ಮಾಡ್ತಿದ್ದಾರೆ. ಅಂದಹಾಗೆ, ಈ ಶೋನಲ್ಲಿ ತೇಜಸ್ವಿ ವಿನ್ನರ್ ಆಗಿದ್ದಾರೆ.

# ಯಶ್‌ರನ್ನು ಕೊಂಡಾಡಿದ ಅಮೆರಿಕ ನಟ



ಟಾಕ್ಸಿಕ್ ಸಿನಿಮಾದಲ್ಲಿ ಹಾಲಿವುಡ್ ಕಲಾವಿದರು, ತಂತ್ರಜ್ಞರು ಕೆಲಸ ಮಾಡುತ್ತಿದ್ದಾರೆ. ಇದೀಗ 'ಟಾಕ್ಸಿಕ್' ಚಿತ್ರದಲ್ಲಿ ನಟಿಸಿದ ಅನುಭವ ಹೇಗಿತ್ತು ಎಂದು ಅಮೆರಿಕ ನಟ ಕೈಲ್ ಪೌಲ್ ವಿವರಿಸಿದ್ದಾರೆ. ಯಶರನ್ನು ಹಾಡಿ ಹೊಗಳಿದ್ದಾರೆ. ಈ ಚಿತ್ರದಲ್ಲಿ ಕೆಲಸ ಮಾಡಿರುವ ಅನುಭವ ನಿಜಕ್ಕೂ ಅದ್ಭುತ ಎಂದಿದ್ದಾರೆ. ಈ ಕುರಿತು ವಿಡಿಯೋವನ್ನು ಅವರು ಶೇರ್ ಮಾಡಿದ್ದಾರೆ. 'ಟಾಕ್ಸಿಕ್' ಸಿನಿಮಾದಲ್ಲಿ ಎಮೋಷನಲ್ ಸನ್ನಿವೇಶಗಳಿವೆ. ಭಾರತದ ಭಾಷೆ ಕನ್ನಡದಲ್ಲಿ ಮಾತನಾಡಿದ್ದೇನೆ. ಇಂತಹ ಸನ್ನಿವೇಶಗಳಲ್ಲಿ ನಟಿಸಿದ್ದನ್ನು ಮರೆಯೋಕೆ ಸಾಧ್ಯವಿಲ್ಲ. ನಿರ್ದೇಶಕಿ ಗೀತು ನಟಿಸಲು ಬಹಳ ಸಹಕಾರ ನೀಡಿದರು. ಬಹಳ ಸಮಯ ತೆಗೆದುಕೊಂಡು ನಟಿಸಲು ಹೇಳುತ್ತಿದ್ದರು, ಸದಾ ಹುರಿದುಂಬಿಸುತ್ತಿದ್ದರು. ಚಿತ್ರತಂಡದ ಜೊತೆ ಕೆಲಸ ಮಾಡಿದ ಅನುಭವ ನಿಜಕ್ಕೂ ಅದ್ಭುತವಾಗಿತ್ತು ಎಂದು ಕೈಲ್ ಪೌಲ್ ಕೊಂಡಾಡಿದ್ದಾರೆ. ಚಿತ್ರದಲ್ಲಿ ಕನ್ನಡದಲ್ಲೇ ಡೈಲಾಗ್ ಹೇಳಿ ಕೈಲ್ ಪೌಲ್ ಥ್ರಿಲ್ ಆಗಿದ್ದಾರೆ.

# ಕಿಸ್ಸಿಕ್ ಬೆಡಗಿಗೆ ಬೇಡಿಕೆ ಬಹುಭಾಷೆಗಳಲ್ಲಿ ಶ್ರೀಲೀಲಾ ಬ್ಯುಸಿ



ಕನ್ನಡದ ನಟಿ ಶ್ರೀಲೀಲಾ ಬಾಲಿವುಡ್‌ನಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಸಾಲು ಸಾಲು ಸಿನಿಮಾಗಳಲ್ಲಿ 'ಪುಷ್ಪ 2' ಖ್ಯಾತಿಯ ಶ್ರೀಲೀಲಾ ಬ್ಯುಸಿಯಾಗಿದ್ದಾರೆ. 2025ರಲ್ಲಿ ನಟಿಯ ಬಳಿ ಕೈತುಂಬಾ ಸಿನಿಮಾಗಳಿವೆ. ಶ್ರೀಲೀಲಾ ನಟಿಸುತ್ತಿರುವ ಸಿನಿಮಾಗಳು ಗೆಲುತ್ತಿಲ್ಲ. ಹಾಗಂತ ಅವರಿಗೆ ಬೇಡಿಕೆ ಕಮ್ಮಿಯಾಗಿಲ್ಲ. ಅಲ್ಲು ಅರ್ಜುನ್ ಜೊತೆ 'ಕಿಸ್ಸಿಕ್' ಹಾಡಿಗೆ ಹೆಜ್ಜೆ ಹಾಕಿದ್ಮೇಲೆ ಶ್ರೀಲೀಲಾ ಮೇಲಿನ ಕ್ರೇಜ್ ಹೆಚ್ಚಾಗಿದೆ. ಹಾಗಾಗಿ ಹಲವು ಅವಕಾಶಗಳು ಅವರನ್ನು ಅರಸಿ ಬರುತ್ತಿವೆ. ಸದ್ಯ ಅನುರಾಗ್ ಬಸು ನಿರ್ದೇಶನದಲ್ಲಿ ಕಾರ್ತಿಕ್ ಆರ್ಯನ್‌ಗೆ ನಾಯಕಿಯಾಗಿ ಶ್ರೀಲೀಲಾ ಕಾಣಿಸಿಕೊಳ್ತಿದ್ದಾರೆ.

ಇದೊಂದು ಮ್ಯೂಸಿಕಲ್ ಲವ್ ಸ್ಟೋರಿ ಕುರಿತಾದ ಸಿನಿಮಾ ಆಗಿದೆ. ಇನ್ನೂ ಕನ್ನಡದ 'ಜ್ಯೂನಿಯರ್' ಸಿನಿಮಾದಲ್ಲಿ ಶ್ರೀಲೀಲಾ ನಾಯಕಿಯಾಗಿದ್ದಾರೆ. ಜನಾರ್ದನ ರೆಡ್ಡಿ ಪುತ್ರ ಕಿರೀಟಿ ರೆಡ್ಡಿಗೆ ಶ್ರೀಲೀಲಾ ಜೋಡಿಯಾಗಿದ್ದಾರೆ. ಸೈಫ್ ಅಲಿ ಖಾನ್ ಪುತ್ರ ಇಬ್ರಾಹಿಂಗೆ ಜೋಡಿಯಾಗಿ ಅವರು ಕಾಣಿಸಿಕೊಳ್ತಿದ್ದಾರೆ. ವಿಭಿನ್ನ ಪಾತ್ರಕ್ಕೆ ನಟಿ ಜೀವ ತುಂಬಲಿದ್ದಾರೆ. ಸಿನಿಮಾದ ವರ್ಕ್ ಶಾಪ್‌ಗೆ ಭಾಗಿಯಾಗುತ್ತಿದ್ದಾರೆ. ಜೊತೆಗೆ ಪಾತ್ರಕ್ಕಾಗಿ ತಯಾರಿ ನಡೆಯುತ್ತಿದೆ. ಇದರೊಂದಿಗೆ ಪ್ರತಿಷ್ಠಿತ ನಿರ್ಮಾಣ ಸಂಸ್ಥೆಗಳು ಶ್ರೀಲೀಲಾರನ್ನು ಸಂಪರ್ಕಿಸಿ ಸಿನಿಮಾ ಬಗ್ಗೆ ಮಾತುಕತೆ ನಡೆಸುತ್ತಿದೆ. 'ರಾಬಿನ್ ಹುಡ್' ಚಿತ್ರದಲ್ಲಿ ನಿತಿನ್‌ಗೆ 2ನೇ ಬಾರಿ ಜೊತೆಯಾಗಿ ಕಾಣಿಸಿಕೊಂಡಿದ್ದಾರೆ.

# ವೆಕೇಷನ್ ಮೂಡ್‌ನಲ್ಲಿ ಮೋಕ್ಷಿತಾ ಪೈ

'ಬಿಗ್ ಬಾಸ್ ಕನ್ನಡ 11'ರಲ್ಲಿ ಸಂಚಲನ ಮೂಡಿಸಿದ ಸ್ಪರ್ಧಿ ಮೋಕ್ಷಿತಾ ಪೈ ವೆಕೇಷನ್ ಮೂಡ್‌ನಲ್ಲಿದ್ದಾರೆ. ಫ್ರೆಂಡ್ಸ್ ಜೊತೆ ಕೇರಳದ ವಯನಾಡುಗೆ ನಟಿ ಭೇಟಿ ನೀಡಿದ್ದಾರೆ. ಇದರ ಸುಂದರ ಫೋಟೋಗಳನ್ನು ನಟಿ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

ನಟಿ ಮೋಕ್ಷಿತಾ ಪೈ ಅವರು 'ಬಿಗ್ ಬಾಸ್' ಶೋ ಆದ್ಮೇಲೆ ಮತ್ತಷ್ಟು ಆಕ್ಟೀವ್ ಆಗಿದ್ದಾರೆ. ಸದ್ಯ ಕೇರಳದಲ್ಲಿನ ಸುಂದರ ಸ್ಥಳಗಳಿಗೆ ನಟಿ ಭೇಟಿ ನೀಡುತ್ತಿದ್ದಾರೆ. ಫ್ರೆಂಡ್ಸ್ ಜೊತೆ ಟ್ರೆಕ್ಕಿಂಗ್ ಮಾಡುತ್ತಾ ಎಂಜಾಯ್ ಮಾಡುತ್ತಿದ್ದಾರೆ. ಇನ್ನೂ ಇತ್ತೀಚೆಗೆ 'ಬಿಗ್ ಬಾಸ್' ರಂಜಿತ್ ಎಂಗೇಜ್‌ಮೆಂಟ್‌ನಲ್ಲಿ ಶಿಶಿರ್, ಐಶ್ವರ್ಯಾ, ಅನುಷಾ ರೈ ಜೊತೆ ಮೋಕ್ಷಿತಾ ಕೂಡ ಭಾಗಿಯಾಗಿದ್ದರು. ನವಜೋಡಿಗೆ ಶುಭಕೋರಿ ಬಂದಿದ್ದರು.

ಇನ್ನೂ ಮೋಕ್ಷಿತಾ 'ಮಿಡಲ್ ಕ್ಲಾಸ್ ರಾಮಾಯಣ' ಎಂಬ ಸಿನಿಮಾದಲ್ಲಿ ನಟಿಸಿದ್ದಾರೆ. ಕಪ್ಪು ಹುಡುಗಿಯ ಪಾತ್ರಕ್ಕೆ ಅವರು ಜೀವ ತುಂಬಿದ್ದಾರೆ. ಸದ್ಯದಲ್ಲೇ ಸಿನಿಮಾ ರಿಲೀಸ್ ಬಗ್ಗೆ ಚಿತ್ರತಂಡ ಮಾಹಿತಿ ನೀಡಲಿದೆ. 'ಮಿಡಲ್ ಕ್ಲಾಸ್ ರಾಮಾಯಣ' ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ಗೆ ನಾಯಕಿಯಾಗಿ ಅವರು ಪಾದಾರ್ಪಣೆ ಮಾಡುತ್ತಿದ್ದಾರೆ. ಇದು ಅವರ ಮೊದಲ ಸಿನಿಮಾ ಆಗಿದೆ. ಈ ಚಿತ್ರದ ಮೂಲಕ ಅವರು ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಇನ್ನೂ 'ಪಾರು' ಸೀರಿಯಲ್ ಮೂಲಕ ಅವರು ಕಿರುತೆರೆಗೆ ಎಂಟ್ರಿ ಕೊಟ್ಟರು. ಪಾರು ಆಗಿ ಕಿರುತೆರೆಯಲ್ಲಿ ಮನೆ ಮಾತಾದರು.



'ಅಪ್ಪು ಜೀವನ ಚರಿತ್ರೆ ಬರೆದ ಅಶ್ವಿನಿ



# ಡಿವೋರ್ಸ್ ವದಂತಿಗೆ ಭಾವನಾ ಸ್ಪಷ್ಟನೆ

**ಸದ್ಯಕ್ಕೆ ಎಲ್ಲವೂ ಚೆನ್ನಾಗಿದೆ**

ಜಾಕಿ ಭಾವನಾ ಮೆನನ್ ಬಹುಭಾಷೆಗಳಲ್ಲಿ ನಟಿಸುತ್ತಾ ಬ್ಯುಸಿಯಾಗಿದ್ದಾರೆ. ಆಗಾಗ ಅವರ ವೈಯಕ್ತಿಕ ಬದುಕಿನ ಬಗ್ಗೆ ನಟಿಗೆ ಪ್ರಶ್ನೆ ಎದುರಾಗುತ್ತಲೇ ಇರುತ್ತದೆ. ಭಾವನಾ ಬಗ್ಗೆ ಆಗಾಗ ಡಿವೋರ್ಸ್ ಕುರಿತು ವದಂತಿಗಳು ಚರ್ಚೆಯಾಗುತ್ತಲೇ ಇರುತ್ತದೆ. ಈ ಕುರಿತು ನಟಿ ಸಂದರ್ಶನವೊಂದರಲ್ಲಿ ಮೌನ ಮುರಿದಿದ್ದಾರೆ. ಇತ್ತೀಚಿನ ಸಂದರ್ಶನವೊಂದರಲ್ಲಿ ಭಾವನಾಗೆ ಡಿವೋರ್ಸ್ ವದಂತಿಗಳು ಕೇಳಿ ಬಂದಾಗ ಅದನ್ನು ಹೇಗೆ ಸ್ವೀಕರಿಸುತ್ತೀರಾ ಎಂದು ಕೇಳಲಾಗಿದೆ. ಅದಕ್ಕೆ ನಟಿ, ಪ್ರತಿದಿನ ಸೋಶಿಯಲ್ ಮೀಡಿಯಾದಲ್ಲಿ ಫೋಟೋಗಳನ್ನು ಪೋಸ್ಟ್ ಮಾಡುವಂತಹ ಜೋಡಿ ನಾವಲ್ಲ. ಚಿನ್ನ, ಮುದ್ದು ಅಂತ ಕ್ಯಾಪ್ಷನ್ ಕೊಡಲ್ಲ. ಏನಾದರೂ ನಾನು ಫೋಟೋವೊಂದನ್ನು ಪೋಸ್ಟ್ ಮಾಡಿದರೆ, ಅಯ್ಯೋ ಇದು ಹಳೆಯ ಫೋಟೋ ಎನ್ನುತ್ತಾರೆ. ನಿಮ್ಮ ನಡುವೆ ಸಮಸ್ಯೆ ಇದ್ಯಾ ಅಂತೆಲ್ಲಾ ಸೋಶಿಯಲ್ ಮೀಡಿಯಾದಲ್ಲಿ ಕಾಮೆಂಟ್ ಮಾಡ್ತಾರೆ. ಅದಕ್ಕೆ ನಾನು ಪ್ರತಿ ನಿತ್ಯ ನಾವು ಫೋಟೋ ತೆಗೆದುಕೊಳ್ಳಲ್ಲ ಎನ್ನುತ್ತೇನೆ ಎಂದಿದ್ದಾರೆ. ಮನೆಯಲ್ಲಿ ಅಮ್ಮ, ಅಣ್ಣ ಎಲ್ಲರೂ ಇದ್ದಾರೆ. ಎಲ್ಲರೊಂದಿಗೆ ಪ್ರತಿದಿನ ಫೋಟೋ ಕ್ಲಿಕ್ಕಿಸಿಕೊಂಡು ಕೂರೋಕೆ ಆಗುತ್ತಾ ಎಂದಿದ್ದಾರೆ. ನನ್ನ ವೈಯಕ್ತಿಕ ಜೀವನವನ್ನು ಪಬ್ಲಿಕ್ ಮಾಡಿ ಹೇಳಿಕೊಳ್ಳುವಂತಹ ವ್ಯಕ್ತಿ ನಾನಲ್ಲ. ನಾನು ಮತ್ತು ನವೀನ್ ಚೆನ್ನಾಗಿದ್ದೇವೆ. ಸದ್ಯಕ್ಕೆ ಎಲ್ಲವೂ ಚೆನ್ನಾಗಿ ನಡೆಯುತ್ತಿದೆ. ನಾವು ಚೆನ್ನಾಗಿದ್ದೇವೆ ಎಂದು ಪ್ರೂವ್ ಮಾಡಲು ಯಾವಾಗಲೂ ಫೋಟೋ ಹಾಕ್ತಾ ಕೂರುವುದಕ್ಕೆ ಆಗಲ್ಲ ಎಂದು ಡಿವೋರ್ಸ್ ವದಂತಿಗೆ ನಟಿ ತೆರೆ ಎಳೆದಿದ್ದಾರೆ. ಅಂದಹಾಗೆ, ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 'ರೋಮಿಯೋ' ಸಿನಿಮಾದ ನಿರ್ಮಾಪಕ ನವೀನ್ ಜೊತೆ ಭಾವನ್ ಮೆನನ್ 2018ರಲ್ಲಿ ಮದುವೆಯಾದರು. ದಿ ಡೋರ್, ಶಿವಣ್ಣ ಮತ್ತು ಡಾಲಿ ಧನಂಜಯ ಜೊತೆ ಉತ್ತರಕಾಂಡ, ಪಿಂಕ್ ನೋಟ್ ಸೇರಿದಂತೆ ಹಲವು ಸಿನಿಮಾಗಳಲ್ಲಿ ಭಾವನ್ ಮೆನನ್ ಬ್ಯುಸಿಯಾಗಿದ್ದಾರೆ.

# ಆರಂಭಿಕ ಪಂದ್ಯಗಳಿಗೆ ಬುಮ್ರಾ ಅಲಭ್ಯ

**ಮುಂಬೈಗೆ ಮರ್ಮಾಘಾತ**



ಮುಂಬೈ ಇಂಡಿಯನ್ಸ್ ತಂಡಕ್ಕೆ ಐಪಿಎಲ್ ಆರಂಭಕ್ಕೂ ಮುನ್ನ ದೊಡ್ಡ ಆಘಾತ ಎದುರಾಗಿದೆ. ಹಾರ್ದಿಕ್ ಪಾಂಡ್ಯ ಅವರು ತಂಡದ ಮೊದಲ ಪಂದ್ಯದಿಂದ ಹೊರಗುಳಿದಿದ್ದಾರೆ.

ಇದಲ್ಲದೆ, ತಂಡದ ಪ್ರಮುಖ ಬೌಲರ್ ಜಸ್ಪ್ರೀತ್ ಬುಮ್ರಾ ಕೂಡ ಮೊದಲ ಪಂದ್ಯದಲ್ಲಿ ಆಡುವುದಿಲ್ಲ ಎಂದು ಖಚಿತವಾಗಿದೆ. ಮಾರ್ಚ್ 23 ರಂದು ಚೆನ್ನೈನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ನಡೆಯುವ ಮುಂಬೈನ ಮೊದಲ ಪಂದ್ಯಕ್ಕೆ ಇದು ದೊಡ್ಡ ಹಿನ್ನಡೆಯಾಗಿದೆ. ಐಪಿಎಲ್ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಉಳಿದಿರುವಾಗ ಮುಂಬೈ ಇಂಡಿಯನ್ಸ್ ತಂಡಕ್ಕೆ ಬಿಗ್ ಶಾಕ್ ಎದುರಾಗಿದೆ. ಈಗಾಗಲೇ ಕಳೆದ ಐಪಿಎಲ್‌ನಲ್ಲಿ ಮಾಡಿದ ತಪ್ಪಿಗಾಗಿ ತಂಡದ ನಿಯಮಿತ ನಾಯಕ ಹಾರ್ದಿಕ್ ಪಾಂಡ್ಯ ತಂಡದ ಮೊದಲ ಪಂದ್ಯದಿಂದ ಹೊರಗುಳಿಯಲಿದ್ದಾರೆ. ಇದೀಗ ತಂಡದ ಬೌಲಿಂಗ್ ಜೀವಾಳ ಎನಿಸಿಕೊಂಡಿರುವ ಜಸ್ಪ್ರೀತ್ ಬುಮ್ರಾ ಲೀಗ್‌ನ ಆರಂಭಿಕ ಪಂದ್ಯಗಳಿಂದ ಹೊರಗುಳಿಯುವ ಸಾಧ್ಯತೆಗಳಿವೆ ಎಂದು ವರದಿಯಾಗಿದೆ. ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್, ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ತನ್ನ ಮೊದಲ ಪಂದ್ಯವನ್ನು ಆಡಲಿದೆ.

ಈ ಪಂದ್ಯ ಮಾರ್ಚ್ 23 ರಂದು ಚೆನ್ನೈನಲ್ಲಿ ನಡೆಯಲಿದೆ. ಈ ಪಂದ್ಯದಲ್ಲಿ ಜಸ್ಪ್ರೀತ್ ಬುಮ್ರಾ ಆಡದಿರುವುದು ಇದೀಗ ಖಚಿತವಾಗಿದೆ. ಮಾರ್ಚ್ 19 ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಂಬೈ ಇಂಡಿಯನ್ಸ್ ತಂಡದ ಮುಖ್ಯ ಕೋಚ್ ಮಹೇಲ ಜಯವರ್ಧನೆ, 'ಜಸ್ಪ್ರೀತ್ ಬುಮ್ರಾ ಯಾವಾಗ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳುತ್ತಾರೆ ಎಂಬುದರ ಬಗ್ಗೆ ಯಾವುದೇ ಖಚಿತ ಮಾಹಿತಿ ಸಿಕ್ಕಿಲ್ಲ. ಬುಮ್ರಾ ಅವರ ಅನುಪಸ್ಥಿತಿಯು ನಮ್ಮ ತಂಡಕ್ಕೆ ಇದೀಗ ದೊಡ್ಡ ಸವಾಲಾಗಿ ಪರಿಣಮಿಸಿದೆ. ಪ್ರಸ್ತುತ ಬುಮ್ರಾ ಬೆಂಗಳೂರಿನಲ್ಲಿರುವ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ರಿಹ್ಯಾಬ್‌ಗೆ ಒಳಗಾಗಿದ್ದಾರೆ.



# ಧನಶ್ರೀಗೆ ಸಿಕ್ಕ ಜೀವನಾಂಶ



ಬಾಂಬೆ ಹೈಕೋರ್ಟ್, ಯುಜ್ವೇಂದ್ರ ಚಾಹಲ್ ಮತ್ತು ಧನಶ್ರೀ ವರ್ಮಾ ಅವರ ವಿಚ್ಛೇದನ ಅರ್ಜಿಯ ಕುರಿತು ಮಾರ್ಚ್ 20 ರೊಳಗೆ ಅಂತಿಮ ತೀರ್ಪು ನೀಡುವಂತೆ ಬಾಂದ್ರಾ ಕುಟುಂಬ ನ್ಯಾಯಾಲಯಕ್ಕೆ ಆದೇಶಿಸಿದೆ. ಕೂಲಿಂಗ್-ಆಫ್ ಅವಧಿಯನ್ನು ಮನ್ನಾ ಮಾಡಲಾಗಿದ್ದು, ಚಾಹಲ್ 4.75 ಕೋಟಿ ರೂ. ಜೀವನಾಂಶ ನೀಡಲು ಒಪ್ಪಿದ್ದಾರೆ ಎಂದು ವರದಿಯಾಗಿದೆ. ಐಪಿಎಲ್ ಆರಂಭಕ್ಕೂ ಮುನ್ನ ತೀರ್ಪು ಹೊರಬೀಳುವ ನಿರೀಕ್ಷೆಯಿದೆ. ಟೀಂ ಇಂಡಿಯಾದ ಲೆಗ್ ಸ್ಪಿನ್ನರ್ ಯುಜ್ವೇಂದ್ರ ಚಾಹಲ್ ಮತ್ತು ಧನಶ್ರೀ ವರ್ಮಾ ಅವರ ವಿಚ್ಛೇದನದ ಕುರಿತು ಬಿಗ್ ಅಪ್‌ಡೇಟ್ ಹೊರಬಿದ್ದಿದೆ. ಮಾಧ್ಯಮ ವರದಿಗಳ ಪ್ರಕಾರ, ಬಾಂಬೆ ಹೈಕೋರ್ಟ್ ಮಾರ್ಚ್ 20 ರಂದು ವಿಚ್ಛೇದನದ ಬಗ್ಗೆ ಅಂತಿಮ ತೀರ್ಪು ನೀಡುವಂತೆ ಬಾಂದ್ರಾ ಕುಟುಂಬ ನ್ಯಾಯಾಲಯಕ್ಕೆ ಆದೇಶಿಸಿದೆ. ಇದರ ಜೊತೆಗೆ ಹೈಕೋರ್ಟ್, 6 ತಿಂಗಳ ಕೂಲಿಂಗ್-ಆಫ್ ಅವಧಿಯನ್ನು ಸಹ ಮನ್ನಾ ಮಾಡಿದೆ. ಹೀಗಾಗಿ ಚಾಹಲ್ ಹಾಗೂ ಧನಶ್ರೀ ವರ್ಮಾ ಅವರ ವಿಚ್ಛೇದನ ತೀರ್ಪು ನಾಳೆಯೇ ಹೊರಬೀಳಲಿದ್ದು, ಇದರ ಜೊತೆಗೆ ಧನಶ್ರೀಗೆ ಚಾಹಲ್ ಜೀವನಾಂಶವಾಗಿ ಎಷ್ಟು ಹಣವನ್ನು ನೀಡುತ್ತಿದ್ದಾರೆ ಎಂಬುದರ ಬಗ್ಗೆಯೂ ಮಾಹಿತಿ ಸಿಕ್ಕಿದೆ. ಮಾರ್ಚ್ 22 ರಿಂದ ಐಪಿಎಲ್ ಆರಂಭವಾಗಲಿದೆ. ಈ ಮಿಲಿಯನ್ ಡಾಲರ್ ಟೂರ್ನಿಯಲ್ಲಿ ಚಾಹಲ್ ಕೂಡ ಆಡುತ್ತಿದ್ದಾರೆ. ಈ ಆವೃತ್ತಿಯಲ್ಲಿ ಚಾಹಲ್, ಪಂಜಾಬ್ ಕಿಂಗ್ಸ್ ಪರ ಕಣಕ್ಕಿಳಿಯಲಿದ್ದು, ಈ ತಂಡ ಮಾರ್ಚ್ 25 ರಂದು ತನ್ನ ಮೊದಲ ಪಂದ್ಯವನ್ನು ಆಡಲಿದೆ. ಆ ಬಳಿಕ ಮುಂದಿನ ಎರಡು ತಿಂಗಳು ಚಾಹಲ್ ಐಪಿಎಲ್‌ನಲ್ಲಿ ನಿರತರಾಗಲಿದ್ದಾರೆ. ಹೀಗಾಗಿ ಚಾಹಲ್ ಅವರ ಭಾಗವಹಿಸುವಿಕೆಯನ್ನು ಗಮನದಲ್ಲಿಟ್ಟುಕೊಂಡು, ಮಾರ್ಚ್ 20 ರೊಳಗೆ ವಿಚ್ಛೇದನ ಅರ್ಜಿಯ ಕುರಿತು ಅಂತಿಮ ನಿರ್ಧಾರವನ್ನು ನೀಡುವಂತೆ ಹೈಕೋರ್ಟ್ ಕುಟುಂಬ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದೆ.

# ಮುಂಬೈ ತಂಡಕ್ಕೆ ಸೂರ್ಯ ನಾಯಕ

**ಪಾಂಡ್ಯಗೆ ಒಂದು ಪಂದ್ಯದ ನಿಷೇಧ**



ಐಪಿಎಲ್ 2024 ರಲ್ಲಿ ಹಾರ್ದಿಕ್ ಪಾಂಡ್ಯ ನಾಯಕತ್ವದಲ್ಲಿ ಕಣಕ್ಕಿಳಿದಿದ್ದ ಮುಂಬೈ ಇಂಡಿಯನ್ಸ್ ತಂಡವು ಮೂರು ಪಂದ್ಯಗಳಲ್ಲಿ ಸ್ಲೋ ಓವರ್ ತಪ್ಪು ಮಾಡಿತ್ತು. ಇದೀಗ ಅದರ ಶಿಕ್ಷೆಯಾಗಿ ಐಪಿಎಲ್ 2025 ರ ಮೊದಲ ಪಂದ್ಯದಿಂದ ಪಾಂಡ್ಯ ಹೊರಗುಳಿಯಲಿದ್ದಾರೆ. ಹೀಗಾಗಿ ಮಾರ್ಚ್ 23 ರಂದು ನಡೆಯಲಿರುವ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಕಾಣಿಸಿಕೊಳ್ಳುವುದಿಲ್ಲ. ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್ 18ರ ಮಾರ್ಚ್ 22 ರಿಂದ ಶುರುವಾಗಲಿದೆ. ಈ ಟೂರ್ನಿಯ ಮೊದಲ ಪಂದ್ಯದಲ್ಲಿ ತಂಡಗಳು ಮುಖಾಮುಖಿಯಾಗಲಿದೆ. ಇನ್ನು ಮಾರ್ಚ್ 23 ರಂದು ನಡೆಯಲಿರುವ ಮೂರನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಸೆಣಸಲಿದೆ. ಈ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಸೂರ್ಯಕುಮಾರ್ ಯಾದವ್ ಮುನ್ನಡೆಸಲಿದ್ದಾರೆ. ಏಕೆಂದರೆ ಕಳೆದ ಸೀಸನ್‌ನಲ್ಲಿ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧದ ಕೊನೆಯ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸಿರಲಿಲ್ಲ.

ಹೀಗಾಗಿ ನಾಯಕ ಹಾರ್ದಿಕ್ ಪಾಂಡ್ಯಗೆ 30 ಲಕ್ಷ ರೂ. ದಂಡ ಹಾಗೂ ಒಂದು ಪಂದ್ಯದ ನಿಷೇಧ ಹೇರಲಾಗಿದೆ. ಈ ಒಂದು ಪಂದ್ಯದ ನಿಷೇಧದ ಶಿಕ್ಷೆ ಈ ಬಾರಿಯ ಐಪಿಎಲ್‌ನಲ್ಲಿ ಮುಂದುವರೆಯಲಿದೆ. ಅದರಂತೆ ಐಪಿಎಲ್ 2025 ರಲ್ಲಿ ಮುಂಬೈ ಇಂಡಿಯನ್ಸ್ ಆಡುವ ಮೊದಲ ಪಂದ್ಯದಿಂದ ನಾಯಕ ಹಾರ್ದಿಕ್ ಪಾಂಡ್ಯ ಹೊರಗುಳಿಯಬೇಕಾಗುತ್ತದೆ. ಹೀಗಾಗಿ ಮಾರ್ಚ್ 23 ರಂದು ನಡೆಯಲಿರುವ ಸಿಎಸ್‌ಕೆ ವಿರುದ್ಧದ ಮ್ಯಾಚ್‌ನಲ್ಲಿ ಪಾಂಡ್ಯ ಕಣಕ್ಕಿಳಿಯುವಂತಿಲ್ಲ. ಹೀಗಾಗಿ ಮಾರ್ಚ್ 23 ರಂದು ನಡೆಯಲಿರುವ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಸೂರ್ಯಕುಮಾರ್ ಯಾದವ್ ಮುನ್ನಡೆಸಲಿದ್ದಾರೆ ಎಂದು ಪಾಂಡ್ಯ ತಿಳಿಸಿದ್ದಾರೆ.

# ಆರ್‌ಸಿಬಿ ತವರು ಪಂದ್ಯಗಳ ಟಿಕೆಟ್ ಮಾರಾಟ ಆರಂಭ

**ಕನಿಷ್ಠ, ಗರಿಷ್ಠ ಬೆಲೆ ಎಷ್ಟು ಗೊತ್ತಾ**

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಐಪಿಎಲ್ ಪಂದ್ಯದ ಟಿಕೆಟ್‌ಗಳು ಭಾರಿ ಬೇಡಿಕೆಯಲ್ಲಿದೆ. ಆನ್‌ಲೈನ್ ಮಾರಾಟ ಆರಂಭವಾದ ಕೆಲವೇ ಗಂಟೆಗಳಲ್ಲಿ ಹಲವು ಸ್ಟಾಂಡ್‌ಗಳ ಟಿಕೆಟ್‌ಗಳು ಸೋಲ್ಡ್ ಔಟ್ ಆಗಿವೆ. ಟಿಕೆಟ್ ಬೆಲೆ 2300 ರಿಂದ 42000 ರೂಪಾಯಿಗಳವರೆಗೆ ಇದೆ. ಇಲ್ಲಿಯವರೆಗೆ ನಡೆದಿರುವ 17 ಆವೃತ್ತಿಗಳಲ್ಲಿ ಒಮ್ಮೆಯೂ ಪ್ರಶಸ್ತಿ ಗೆಲ್ಲದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ, ಈ ಬಾರಿಯಾದರೂ ಆ ಬರವನ್ನು ನೀಗಿಸಿಕೊಳ್ಳಬೇಕೆಂಬ ಇರಾದೆಯೊಂದಿಗೆ ಕೆಲವು ತಿಂಗಳ ಹಿಂದೆ ನಡೆದಿದ್ದ ಮೆಗಾ ಹರಾಜಿನಲ್ಲಿ ಉತ್ತಮ ಆಟಗಾರರನ್ನು ಖರೀದಿಸಿ ಪೂರ್ಣ ಹೊಸ ತಂಡದೊಂದಿಗೆ ಅಖಾಡಕ್ಕಿಳಿಯಲು ಸಜ್ಜಾಗಿದೆ. ಲೀಗ್‌ನ ಮೊದಲ ಪಂದ್ಯದಲ್ಲೇ ಆರ್‌ಸಿಬಿ ಆಡುತ್ತಿರುವ ಕಾರಣಕ್ಕೆ ಈ ಪಂದ್ಯಕ್ಕೆ ಸಾಕಷ್ಟು ಹೈಪ್ ಕ್ರಿಯೆಟ್ ಆಗಿದೆ. ಟೂರ್ನಿಯ ಮೊದಲ ಪಂದ್ಯದಲ್ಲಿ ರಜತ್ ಪಡೆ, ಹಾಲಿ ಚಾಂಪಿಯನ್ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು ಮಾರ್ಚ್ 22 ರಂದು ಈಡನ್ ಗಾರ್ಡನ್ಸ್‌ನಲ್ಲಿ ಎದುರಿಸಲಿದೆ. ಇನ್ನು ತನ್ನ ತವರು ಪಂದ್ಯವನ್ನು ಏಪ್ರಿಲ್ 2 ರಂದು ಗುಜರಾತ್ ವಿರುದ್ಧ ಆಡಲಿದೆ. ಇದೀಗ ಈ ಪಂದ್ಯದ ಆನ್‌ಲೈನ್ ಟಿಕೆಟ್ ಮಾರಾಟವನ್ನು ಇಂದಿನಿಂದ ಆರಂಭಿಸಲಾಗಿದೆ. ಮಾರ್ಚ್ 19 ರಂದು ಆರ್‌ಸಿಬಿ ತನ್ನ ಮೊದಲ ತವರು ಪಂದ್ಯದ ಟಿಕೆಟ್‌ಗಳ ಮಾರಾಟವನ್ನು ಆರಂಭಿಸಿತ್ತು. ಆದರೆ ಈ ಆನ್‌ಲೈನ್ ಟಿಕೆಟ್‌ಗಳ ಮಾರಾಟ ಆರಂಭದವಾದ ಕೆಲವೇ ಗಂಟೆಗಳಲ್ಲಿ ಪ್ರಮುಖ ಸ್ಟಾಂಡ್‌ಗಳ ಟಿಕೆಟ್‌ಗಳು ಸೋಲ್ಡ್ ಔಟ್ ಆಗಿವೆ. ಈ ಸುದ್ದಿ ಬರೆಯುವ ಹೊತ್ತಿಗೆ ಆರ್‌ಸಿಬಿ ವೆಬ್‌ಸೈಟ್‌ನಲ್ಲಿ ಬಾಕಿ ಇರುವ ಟಿಕೆಟ್‌ಗಳನ್ನು ಪರಿಶೀಲಿಸಿದಾಗ ಕೇವಲ 2 ಸ್ಟ್ಯಾಂಡ್‌ಗಳ ಟಿಕೆಟ್‌ಗಳು ಮಾತ್ರ ಮಾರಾಟಕ್ಕೆ ಲಭ್ಯವಿದ್ದವು.

# ಐಪಿಎಲ್ ಆರಂಭಕ್ಕೂ ಮುನ್ನವೇ ಹೈವೋಲ್ಟೇಜ್ ಪಂದ್ಯ ಶಿಫ್ಟ್..!



**ಎರಡು ಬಲಿಷ್ಠ ತಂಡಗಳ ಮುಖಾಮುಖಿ**

ಐಪಿಎಲ್ 2025 ರಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಲಕ್ನೋ ಸೂಪರ್‌ಜೈಂಟ್ಸ್ ನಡುವಿನ ಪಂದ್ಯವು ರಾಮನವಮಿ ದಿನದಂದು ನಡೆಯುವ ಕಾರಣ, ಪಂದ್ಯದ ದಿನಾಂಕ ಅಥವಾ ಸ್ಥಳವನ್ನು ಬದಲಾಯಿಸುವಂತೆ ಬಿಸಿಸಿಐ ಬಳಿ ಬಂಗಾಳ ಕ್ರಿಕೆಟ್ ಸಂಸ್ಥೆ ಮನವಿ ಮಾಡಿದೆ. ಬಿಸಿಸಿಐ ಎರಡೂ ತಂಡಗಳೊಂದಿಗೆ ಚರ್ಚಿಸುತ್ತಿದ್ದು, ಶೀಘ್ರದಲ್ಲೇ ಪರಿಹಾರ ಕಂಡುಕೊಳ್ಳುವ ನಿರೀಕ್ಷೆಯಿದೆ.

18ನೇ ಆವೃತ್ತಿಯ ಐಪಿಎಲ್ ಇದೇ ಮಾರ್ಚ್ 22 ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳ ನಡುವಿನ ಪಂದ್ಯದೊಂದಿಗೆ ಆರಂಭವಾಗಲಿದೆ. ಆದರೆ ಈ ಟೂರ್ನಿ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಉಳಿದಿರುವಾಗ, ಈ ಟೂರ್ನಿಯ ಎರಡು ಬಲಿಷ್ಠ ತಂಡಗಳು ಮುಖಾಮುಖಿಯಾಗುವ ಪಂದ್ಯವನ್ನು ಬೇರೆಡೆಗೆ ಸ್ಥಳಾಂತರಿಸಬೇಕಾದ ಸಂಕಷ್ಟ ಬಿಸಿಸಿಐಗೆ ಎದುರಾಗಿದೆ. ವಾಸ್ತವವಾಗಿ ಏಪ್ರಿಲ್ 6 ರಂದು ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ಲಕ್ನೋ ಸೂಪರ್ ಜೈಂಟ್ಸ್ ನಡುವಿನ ಪಂದ್ಯ ಕೊಲ್ಕತ್ತಾದಲ್ಲಿ ನಡೆಯಲಿದೆ. ಈ ಪಂದ್ಯ ರಾಮ ನವಮಿಯಂದು ನಡೆಯುತ್ತಿದೆ. ಆದ್ದರಿಂದ ಭದ್ರತಾ ದೃಷ್ಟಿಯಿಂದ, ಬಂಗಾಳ ಕ್ರಿಕೆಟ್ ಸಂಸ್ಥೆಯು ಪಂದ್ಯದ ವೇಳಾಪಟ್ಟಿಯನ್ನು ಬದಲಾಯಿಸುವಂತೆ ಬಿಸಿಸಿಐಗೆ ಮನವಿ ಮಾಡಿದೆ ಎಂದು ವರದಿಯಾಗಿದೆ. ಕೋಲ್ಕತ್ತಾ ಪೊಲೀಸರು ಮತ್ತು ಸ್ಥಳೀಯ ಆಡಳಿತ ಹೊರಡಿಸಿದ ಅಧಿಸೂಚನೆಯ ನಂತರ ಬಂಗಾಳ ಕ್ರಿಕೆಟ್ ಮಂಡಳಿ, ಈ ಪಂದ್ಯವನ್ನು ಬೇರೆಡೆಗೆ ಅಥವಾ ಬೇರೆ ದಿನಾಂಕದಂದು ನಡೆಸುವಂತೆ ಬಿಸಿಸಿಐಗೆ ಮನವಿ ಮಾಡಿರುವುದಾಗಿ ಮಾಹಿತಿ ನೀಡಿದೆ. ರಾಮ ನವಮಿ ಆಚರಣೆಯ ಕಾರಣ ಪಂದ್ಯಗಳಿಗೆ ಸರಿಯಾದ ಭದ್ರತೆ ಒದಗಿಸಲು ಸಾಧ್ಯವಿಲ್ಲ ಎಂದು ಆಡಳಿತ ಸ್ಪಷ್ಟಪಡಿಸಿದೆ. ವರದಿಯ ಪ್ರಕಾರ, ಬಂಗಾಳ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ಸ್ನೇಹಶಿಶ್ ಗಂಗೂಲಿ, 'ನಾವು ಸ್ಥಳೀಯ ಆಡಳಿತ ಮತ್ತು ಪೊಲೀಸರೊಂದಿಗೆ ಚರ್ಚಿಸಿದ್ದು, ಪಂದ್ಯದ ದಿನದಂದೆ ರಾಮನವಮಿ ಇರುವ ಕಾರಣ ಸಾಕಷ್ಟು ಭದ್ರತೆ ಒದಗಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966